ಕನ್ನಡ ವಿಶ್ವವಿದ್ಯಾಲಯ ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ - ೫೮೩೨೭೬

ಕನ್ನಡ ವಿಶ್ವ ವಿದ್ಯಾಲಯಕ್ಕೆ ೨೦೧೬-೧೭ ನೇ ಸಾಲಿನ
ಎಂ. ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

"ಡಾ. ವಿಜಯಾ ಸುಬ್ಬರಾಜ್ ರವರ ಬೆಸುಗೆಯ ಬಂಧನದಲ್ಲಿ ಕಾದಂಬರಿಯಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು"

ನೊಂ. ಸಂ. 16070103004O

ಕನ್ನಡ ವಿಶ್ವವಿದ್ಯಾಲಯ ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ವಿದ್ಯಾರಣ್ಯ - ೫೮೩೨೭೬

ಕನ್ನಡ ವಿಶ್ವ ವಿದ್ಯಾಲಯಕ್ಕೆ ೨೦೧೬-೧೭ ನೇ ಸಾಲಿನ

ಎಂ. ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

"ಡಾ. ವಿಜಯಾ ಸುಬ್ಬರಾಜ್ ರವರ ಬೆಸುಗೆಯ ಬಂಧನದಲ್ಲಿ ಕಾದಂಬರಿಯಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು"

ನೊಂ. ಸಂ. **160701030040**

"ಡಾ. ವಿಜಯಾ ಸುಬ್ಬರಾಜ್‌ರವರ ಬೆಸುಗೆಯ ಬಂಧನದಲ್ಲಿ ಕಾದಂಬರಿಯಲ್ಲಿನ ಸ್ತ್ರೀ ಸಂವೇದನೆಯ ನೆಲೆಗಳು".

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ –೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಭಾರತ ದೇಶವು ಬಹಳಷ್ಟು ವಿಶಾಲವೂ, ವಿಸ್ತಾರವೂ ಆಗಿದ್ದು 'ವಿವಿಧತೆಯಲ್ಲಿ ಏಕತೆ ಅದುವೆ ಭಾರತದ ವಿಶಿಷ್ಟತೆ' ಎಂಬ ಘೋಷವಾಕ್ಯದ ಮೂಲಕ ನಿರ್ಮಾಣವಾಗಿದೆ. ಇಲ್ಲಿ ಸಾವಿರಾರು ಭಾಷೆಗಳು ಬಳಕೆಯಲ್ಲಿದ್ದು ಅವುಗಳಲ್ಲಿ ಹದಿನೆಂಟು ಭಾಷೆಗಳು ಮಾತ್ರ ಅಧಿಕೃತ ಭಾಷೆಗಳಾಗಿ ಸಂವಿಧಾನದಲ್ಲಿ ಮನ್ನಣೆ ಪಡೆದಿದೆ. ಅಂತಹ ಹದಿನೆಂಟು ಭಾಷೆಗಳಲ್ಲಿ ಕನ್ನಡವು ಕೂಡ ಒಂದಾಗಿದೆ.

ವಿಶ್ವ ಸಾಹಿತ್ಯದಲ್ಲಿ ಕನ್ನಡವು ತನ್ನ ಅಭಿಜಾತತೆಯಿಂದ ವಿಶಿಷ್ಟತೆಯನ್ನು ಮೆರೆದಿದೆ. ಜಗತ್ತಿನ ಆರು ಸಾವಿರ ಭಾಷೆಗಳಲ್ಲಿ ಇಪ್ಪತ್ತೇಳನೆಯ ಪುರಾತನ ಭಾಷೆಯಾದ ಕನ್ನಡ ಭಾಷೆಯು ವಿಪುಲ ಸಾಹಿತ್ಯ ಕೃಷಿಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ಕನ್ನಡ ಭಾಷೆಯಲ್ಲಿ ಸಾಹಿತ್ಯ ಕೃಷಿಯು ಯಾವಾಗ ಪ್ರಾರಂಭವಾಯಿತು ಎಂಬುದಕ್ಕೆ ನಿರ್ದಿಷ್ಟವಾದ ಆಧಾರಗಳಿಲ್ಲ. ಆದರೂ 'ಕವಿರಾಜಮಾರ್ಗ' ಮೊದಲ ಉಪಲಬ್ಧ ಕನ್ನಡ ಕೃತಿಯಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ಇಲ್ಲಿಂದ ಬೆಳೆದು ಬಂದ ಸಾಹಿತ್ಯದಲ್ಲಿ ಹೆಚ್ಚಾಗಿ ಇಣುಕುವ ಪಾತ್ರಗಳೆಂದರೆ 'ಹೆಣ್ಣು'.. ಪುರಾತನ ಕಾಲದಿಂದಲೂ ಹೆಣ್ಣು ಹೇಗೆ ಬೆಳೆದುಕೊಂಡು ಬಂದಳು ಎಂಬುದನ್ನು ನಮ್ಮ ಕನ್ನಡ ಸಾಹಿತ್ಯವು ಬಿಂಬಿಸುತ್ತದೆ.

ಅನಾದಿ ಕಾಲದಲ್ಲಿ ಮಾನವನು ಗುಂಪು ಗುಂಪಾಗಿ ಜೀವಿಸುತ್ತಿದ್ದನು. ನಾಗರೀಕತೆಯ ಪೂರ್ವಯುಗದ ಆ ಕಾಲಘಟ್ಟದಲ್ಲಿ ಮಹಿಳೆಯು ತುಂಬಾ ಶಕ್ತಿಶಾಲಿಯೂ, ತೋಳ್ಬಲದೊಂದಿಗೆ ಭಾವನಾತ್ಮಕ ಸಂವೇದನಾ ಗುಣಗಳನ್ನು ಪಡೆದಿದ್ದಳು. ಇದರಿಂದ ಆಕೆಯೇ ಅಲ್ಲಿನ ಗುಂಪಿನ ನಾಯಕಿಯಾಗಿದ್ದಳು.

ಕಾಲಾಂತರದಲ್ಲಿಯೂ ಹೆಣ್ಣಿನಿಂದಲೇ ಕುಟುಂಬ ವ್ಯವಸ್ಥೆಯು ರೂಪು ತಳೆಯತೊಡಗಿತು. ಮನೆಯ ಎಲ್ಲಾ ಜವಾಬ್ದಾರಿಗಳನ್ನು ತಾನೇ ಹೊತ್ತು ನಿಭಾಯಿಸುತ್ತಿದ್ದಳು. ಸಕಲ ಹೊಣೆಯನ್ನೂ ಹೊತ್ತ 'ಆಕೆಗೆ' ಯಜಮಾನಿಯ ಪಟ್ಟ ದೊರೆತು 'ಮಾತೃಪ್ರಧಾನ' ಕುಟುಂಬಗಳು ಬೆಳೆಯಲಾರಂಭಿಸಿದವು. 'ಹೆಣ್ಣು ಕುಟುಂಬದ ಕಣ್ಣು' ಎಂಬಂತೆ ಪತಿಯನ್ನು ಸರಿದಾರಿಯಲ್ಲಿ ನಡೆಸುವ ಹಾಗೂ ಮಕ್ಕಳನ್ನು ಆರೈಕೆ ಮಾಡುವ ಕೆಲಸವನ್ನು ಮಾಡುತ್ತಿದ್ದಳು.

ಶಿಲಾಯುಗದಿಂದಲೂ ಹೆಣ್ಣು ಮುಖ್ಯ ಸ್ಥಾನದಲ್ಲಿಯೇ ಇದ್ದಳು. ಕ್ರಮೇಣ ಗಂಡು ಆಕೆಯ ಮೇಲೆ ತನ್ನ ಪ್ರಾಬಲ್ಯವನ್ನು ಬೀರುವುದರ ಮೂಲಕ ಹೆಣ್ಣನ್ನು ಹೊರಜಗತ್ತಿನಿಂದ ದೂರವಿಟ್ಟು ಅಡಿಗೆ ಮನೆಗೆ ಮಾತ್ರ ಸೀಮಿತಗೊಳಿಸಿದ್ದನ್ನು ಕಾಣುತ್ತೇವೆ. ಇದು ನಿಮಿತ್ತವಾಗಿ ಆಕೆ ಸಾಮಾಜಿಕ ಬದುಕಿನಲ್ಲಿ–ಅಪಾತ್ರಳಾಗಿ, ಅಸಹಾಯಕಳಾಗಿ ಅಸಮಾನತೆಯನ್ನು ಎದುರಿಸುವುದನ್ನು ಕಾಣುತ್ತೇವೆ. ಇದರ ಪರಿಣಾಮವಾಗಿ ಮಾತೃ ಪ್ರಧಾನ ವ್ಯವಸ್ಥೆ ಇಲ್ಲವಾಗಿ ಪಿತೃ ಪ್ರಧಾನ ವ್ಯವಸ್ಥೆ ಜಾರಿಗೆ ಬಂದಿರಬಹುದು. ಹೀಗೆ ಆಕೆಯನ್ನು ಹೀನಾಯವಾಗಿ ನಡೆಸಿಕೊಂಡಿದ್ದರ ಪ್ರತಿಫಲವಾಗಿ ಸಮಾಜದಲ್ಲಿ ಸ್ತ್ರೀ–ಪುರುಷರ ಅಸಮಾನತೆನ್ನು ಕಾಣುತ್ತೇವೆ.

ಕುಟುಂಬದ ಯಜಮಾನಿಕೆಯಲ್ಲಿ ಆದಂತಹ ಬದಲಾವಣೆಗಳಿಂದಾಗಿ ಹೆಣ್ಣಿನ ಸ್ಥಾನಮಾನಗಳು ಹೀನಾಯವಾದವು. ಇದನ್ನು ಸದುಪಯೋಗ ಪಡಿಸಿಕೊಂಡ ಪುರುಷನು ತನ್ನ ಪ್ರಾಬಲ್ಯವನ್ನು

ಹೆಚ್ಚಿಸಿಕೊಂಡನು. ಇದು ಹಲವಾರು ಕಾಲಘಟ್ಟಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಶೋಷಣೆಯನ್ನು ಪ್ರತಿನಿಧಿಸುತ್ತಲೇ ಬರುತ್ತಿತ್ತು.

"ಮನುಷ್ಯ ಚರಿತ್ರೆಯಲ್ಲಿ ಅನಾದಿಕಾಲದಿಂದಲೂ ಮಾನವ ಕುಲದ ಒಂದು ವರ್ಗವನ್ನು ಇನ್ನೊಂದು ವರ್ಗ, ಒಂದು ಜಾತಿಯನ್ನು ಇನ್ನೊಂದು ಜಾತಿ, ಒಂದು ಧರ್ಮವನ್ನು ಇನ್ನೊಂದು ಧರ್ಮ, ಒಂದು ಲಿಂಗವನ್ನು ಇನ್ನೊಂದು ಲಿಂಗ ಶೋಷಿಸುತ್ತಾ ಬಂದಿದೆ. ಒಬ್ಬ ಮಾನವನನ್ನು ಇನ್ನೊಬ್ಬ ಮಾನವ, ಒಂದು ವರ್ಗವನ್ನು ಇನ್ನೊಂದು ವರ್ಗ, ಒಂದು ಧರ್ಮದವರನ್ನು ಇನ್ನೊಂದು ಧರ್ಮದವರು, ಒಂದು ಜಾತಿಯವರು ಇನ್ನೊಂದು ಜಾತಿಯವರನ್ನು, ಒಂದು ಲಿಂಗದವರನ್ನು ಇನ್ನೊಂದು ಲಿಂಗದವರು ಗುಲಾಮಗಿರಿಯಲ್ಲಿ ಮತ್ತು ಅವಲಂಬನೆಯ ಸ್ಥಿತಿಯಲ್ಲಿ ಇಡುವಂತಹ ಸಂಬಂಧಗಳೇ ಹೆಚ್ಚಾಗಿ ಹೆಣ್ಣು ಮತ್ತಷ್ಟು ಕೆಳಹಂತಕ್ಕೆ ಹೋಗಲು ಕಾರಣವಾಯಿತು."[೧]

ವೇದಗಳ ಕಾಲದಲ್ಲಿ ಹೆಣ್ಣಿನ ಚಿತ್ರಣವನ್ನು ನೋಡಿದರೆ ಪೂರ್ವವೇದದ ಕಾಲ ಘಟ್ಟದಲ್ಲಿ ಉತ್ತಮ ಸ್ಥಿತಿಯಲ್ಲಿ ಇದ್ದುದನ್ನು ಕಾಣಬಹುದಾಗಿದೆ. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದಗಳು ಧಾರ್ಮಿಕ ಗ್ರಂಥಗಳಾಗಿದ್ದರೂ ಕೂಡ ಇದರಲ್ಲಿ ಆ ಕಾಲದಲ್ಲಿ ಜರುಗಿರುವಂತಹ ಎಲ್ಲಾ ಸಾಮಾಜಿಕ ಚಿತ್ರಣವನ್ನು ಕಾಣಬಹುದಾಗಿದೆ. ಇದರಲ್ಲಿ ಸ್ತ್ರೀಯರ ಬಗೆಗಿನ ಅಂಶಗಳು ಇರುವುದರಿಂದ ಮಹಿಳೆಯರ ಸಾಮಾಜಿಕ ಸ್ಥಿತಿಗಳನ್ನು ಅರಿಯಲು ಸಹಾಯಕವಾಗಿದೆ. ಈ ಕಾಲದಲ್ಲಿ ಮಹಿಳೆ ಶಕ್ತಿ, ಔದಾರ್ಯ ಮತ್ತು ಸ್ವಾತಂತ್ರ್ಯದ ಪ್ರತೀಕವೂ ಆಗಿದ್ದಳು. ಸ್ತ್ರೀ–ಪುರುಷರ ಸಂಬಂಧಗಳಲ್ಲಿಯೂ ಕೂಡ ವಿಪರೀತವಾದಂತಹ ಕಟ್ಟುಪಾಡುಗಳೇನು ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಹೀಗಿದ್ದಂತಹ ಪರಿಸ್ಥಿತಿಯ ಉತ್ತರ ವೇದದ ಕಾಲದಲ್ಲಿ ನಕಾರಾತ್ಮಕ ಧೋರಣೆ ಬೆಳೆಯಿತು. "ಮಹಿಳೆಯರು ಒಂದಲ್ಲ ಒಂದು ವಿಧದ ದೌರ್ಜನ್ಯಕ್ಕೆ ತುತ್ತಾಗಿದ್ದರೆಂಬುದಕ್ಕೆ ಸೀತೆ, ದ್ರೌಪದಿಯರ ಕತೆಗಳೇ ಸಾಕ್ಷಿ. ಆದರೆ ವೇದಕಾಲದಲ್ಲಿ ಮಹಿಳೆಯರಿಗೆ ಕೆಲವೊಂದು ಹಕ್ಕುಗಳೂ ಇದ್ದವು ಎಂಬ ಮಾತನ್ನು ಅಲ್ಲಗಳೆಯುವಂತಿಲ್ಲ. ಕ್ರಿ.ಪೂ.2500 ರಿಂದ ಕ್ರಿ.ಪೂ.500ರವರೆಗಿನ ಅವಧಿಯಲ್ಲಿ ಎಂದರೆ ವೇದ ಕಾಲ ಹಾಗೂ ವೇದೋತ್ತರ ಕಾಲದ ಅವಧಿಯಲ್ಲಿ ಸ್ತ್ರೀಯರಿಗೆ ಬಹಳ ಅನುಕೂಲಕರ ವಾತಾವರಣವಿತ್ತು."[೨] ಆದರೆ ಇದು ಕೊನೆಯವರೆಗೂ ಇದೇ ಸ್ಥಿತಿಯಲ್ಲಿ ಇರಲಿಲ್ಲ ಎನ್ನುವುದು ಕೂಡ ವಾಸ್ತವವಾಗಿತ್ತು.

ವೇದಗಳ ಕಾಲದಲ್ಲಿ ಕೆಲವೊಂದು ಆಚರಣೆಗಳು ಹೆಣ್ಣನ್ನು ಹೀನಾಯ ಸ್ಥಿತಿಗೆ ತಳ್ಳಲ್ಪಟ್ಟಿದ್ದವು. ಆದರೆ ಬೇರೆ ಕಾಲಗಳ ರೀತಿಯಲ್ಲಿ ಇರುವಷ್ಟು ಶೋಷಿತವಾಗಿರಲಿಲ್ಲ. ಈ ಯುಗದ ಕೊನೆ ಕೊನೆಯಲ್ಲಿ ಗಂಡಿಗೆ ಹೆಚ್ಚಿನ ಮಹತ್ವ ದೊರೆಯುತ್ತಾ ಬಂದಿತು. ಪುಲಿಗೆರೆ ಸೋಮನಾಥ ಹೇಳುವಂತೆ 'ಸುತನೇ ಸದ್ಗತಿಗೆ ದಾತನ್ಯೆ' ಎಂಬ ಮಾತು ಬಹಳಷ್ಟು ಪ್ರಚಲಿತವಾಗಿತ್ತು. ಇದರಿಂದ ಹೆಣ್ಣು ಮಕ್ಕಳು ಹುಟ್ಟುವುದು ದೌರ್ಭಾಗ್ಯವೆಂಬಂತಹ ಪರಿಸ್ಥಿತಿ ನಿರ್ಮಾಣವಾಯಿತು.

ವೇದಗಳ ಕೊನೆಕೊನೆಯ ಘಟ್ಟಗಳಲ್ಲಿ ಮಾತೃ ಪ್ರಾಧಾನ್ಯತೆ ಇದ್ದದ್ದು ಸ್ವಲ್ಪ ಸ್ವಲ್ಪವೇ ಕ್ಷೀಣಿಸುತ್ತಾ ಬಂದು ಆ ಜಾಗದಲ್ಲಿ ಪಿತೃ ಪ್ರಾಧಾನ್ಯತೆ ಪ್ರಬಲವಾಯಿತು. ಇದರ ನಿಮಿತ್ತ ಹೆಣ್ಣಿಗೊಂದು ಧರ್ಮ, ಗಂಡಿಗೊಂದು ಧರ್ಮ ಎನ್ನುವಂತಾಯಿತು. ಅನ್ಯಜೀವನದ ಧರ್ಮ–ಕರ್ಮಗಳ ವಿಚಾರಗಳಲ್ಲೂ ಕೂಡ ಗಂಡಿನ ಆಯ್ಕೆಗೆ ಪ್ರಥಮ ಪ್ರಾಶಸ್ತ್ಯ ದೊರೆಯಿತು. ಇದರಿಂದ ಪುರುಷರು ದೇವಸಮಾನರು, ಅತಿಮಾನುಷ

---

೧. ಹಾಲತಿ ಸೋಮಶೇಖರ : ಮಹಿಳಾ ಚಳುವಳಿ ಮತ್ತು ಸಾಂಸ್ಕೃತಿಕ ಹಿನ್ನೆಲೆ ಪು.ಸಂ. ೨೪ ವಿಸ್ಮಯ ಪ್ರಕಾಶನ ೨೦೦೨.
೨. ಸಾ.ರಾ. ಅಬೂಬಕರ್ : ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ ಪು. ಸಂ. ೬೮ ಕನ್ನಡ ವಿಶ್ವವಿದ್ಯಾಲಯ ೨೦೦೭

ಸಾಮರ್ಥ್ಯವುಳ್ಳವರು, ಉಗ್ರ ತಪಸ್ವಿಗಳೂ ಆಗಿದ್ದರೆ ಹೆಣ್ಣು ಮಾತ್ರ ಇವೆಲ್ಲವನ್ನು ಹೊಂದಿರುವ ಪುರುಷನ ನೆರಳಾಗಿಯೂ, ಗಂಡಸಿಗೆ ದಾಸಿಯಾಗಿಯೂ, ಗಂಡನ ಆಜ್ಞಾಪಾಲಕಳಾಗಿಯೂ ಇದ್ದು ಗಂಡನೇ ಸಮಸ್ತವೂ ಎನ್ನುವಂತೆ ಬಾಳಬೇಕಾದ ಅನಿವಾರ್ಯತೆಗೆ ಒಳಗಾದಳು.

ರಾಮಾಯಣ, ಮಹಾಭಾರತ, ಪುರಾಣಗಳಲ್ಲಿ ಹೆಣ್ಣಿನ ಶೋಷಣೆ ನಡೆದಿರುವುದು ನಮ್ಮ ಕಣ್ಣ ಮುಂದೆಯೇ ಇದೆ. ಶತಶತಮಾನಗಳಿಂದಲೂ ಹೆಣ್ಣಿನ ಮಾನಾಪಹರಣ, ಬಹುಪತ್ನಿತ್ವ, ವನವಾಸ, ಗಾಂಧರ್ವವಿವಾಹ, ಅಗ್ನಿಪ್ರವೇಶ, ದಾಸಿ ಪದ್ಧತಿ, ಹೆಣ್ಣನ್ನು ಒತ್ತೆ ಇಡುವುದು ಹೀಗೆ ಒಂದಲ್ಲ ಒಂದು ಸಮಸ್ಯೆಗಳ ಸುಳಿಗೆ ಸಿಲುಕಿ ನರಳುತ್ತಾಳೆ. ನಮ್ಮ ಈ ಪುರಾಣ ಗ್ರಂಥಗಳಲ್ಲಿ ಶಿಕ್ಷೆಗೆ ಒಳಪಡಿಸುವ ವ್ಯಕ್ತಿಗಳು ಪೂಜ್ಯನೀಯವಾಗಿರುವುದು ಕಾಣುತ್ತದೆ. ರಾಮ, ಕೃಷ್ಣ, ಪಾಂಡವರು, ದುಷ್ಯಂತ, ಕೌರವರು ಅಂತಹವರಲ್ಲಿ ಪ್ರಮುಖರು.

ಇಂದ್ರನ ಐಹಿಕ ಸುಖವು ಒಂದು ತೆರನಾದರೆ, ಋಷಿಮುನಿಗಳ ದಾರಿ ಮತ್ತೊಂದು ರೀತಿಯಲ್ಲಿರುತ್ತದೆ. ತಪಸಿಗಳೆಂದೇ ಪ್ರಖ್ಯಾತವಾಗಿರುವ ಋಷಿ ಶ್ರೇಷ್ಠರಿಂದಲೂ ಕೂಡ ಹೆಣ್ಣು ಕಷ್ಟಗಳನ್ನು ಅನುಭವಿಸಿದ್ದನ್ನು ಕಾಣಬಹುದು. ತಮ್ಮ ಅಪಾರವಾದ ತಪೋ ಬಲದಿಂದ ತಪಸ್ಸನ್ನು ಆಚರಿಸಿ ಸಿದ್ಧಿಯನ್ನು ಪಡೆದ ಋಷಿಗಳು ಅನೇಕರು. ಇವರ ಇಚ್ಛೆಗೆ ವಿರುದ್ಧವಾಗಿ ಏನಾದರು ನಡೆದರೆ ಅದಕ್ಕೆ ಕಾರಣರಾದವರ ಮೇಲೆ ಶಾಪವನ್ನು ಹಾಕುತ್ತಾರೆ. ಕೆಲವೊಮ್ಮೆ ಸಣ್ಣ ಪುಟ್ಟ ವಿಷಯಗಳಿಗೂ ತಾಳ್ಮೆಯನ್ನು ಕಳೆದುಕೊಳ್ಳುವುದುಂಟು. ಸಂಯಮವನ್ನು ಮೆರೆಯಬೇಕಾದ ಇವರುಗಳೇ ಹೆಣ್ಣಿನ ಮೇಲೆ ಪೌರುಷವನ್ನು ತೋರುತ್ತಾರೆ. ಹೆಂಡತಿಯನ್ನೇ ಕೊಲ್ಲಿಸಿದ ಜಮದಗ್ನಿ, ಇಂದ್ರ, ವಿಶ್ವಾಮಿತ್ರ, ಗೌತಮಮಹರ್ಷಿ ಮೊದಲಾದವರು ತಮ್ಮ ಕೋಪವನ್ನು ಹೆಂಡತಿಯರ ಮೇಲೆ ತೀರಿಸಿಕೊಂಡಿದ್ದುಂಟು. ಸಾತ್ವಿಕ ವರ್ಗವೂ ಸಹ ಹೆಣ್ಣನ್ನು ಶೋಷಣೆಗೊಳಗಾಗಿಸಿದ್ದು ದುರಂತವೇ ಸರಿ.

ವೇದಗಳ ನಂತರ ಸ್ಮೃತಿಗಳ ಕಾಲದಲ್ಲಿ ಹೆಣ್ಣಿಗೆ ಅತ್ಯಂತ ನಿಕೃಷ್ಟ ಕಾಲ ಒದಗಿ ಬಂದಿತು. ಮನು ತನ್ನ ಧರ್ಮ ಶಾಸ್ತ್ರದಲ್ಲಿ ಹೆಣ್ಣಿನ ಬಗೆಗೆ ದ್ವಂದ್ವ ಅಭಿಪ್ರಾಯಗಳನ್ನು ಮೂಡಿಸಿದ್ದಾನೆ. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೆ ತತ್ರ ದೇವತಾಃ' ಎಂದು ಮನು ಒಂದು ಕಡೆ ಹೇಳಿದ್ದಾನೆ. ಎಲ್ಲಿ ಹೆಣ್ಣಿಗೆ ಪೂಜೆ ಸಲ್ಲುತ್ತದೆಯೊ ಅಲ್ಲಿ ದೇವತೆಗಳು ವಿಹರಿಸುತ್ತಾರೆ ಎನ್ನುವ ಅರ್ಥದಲ್ಲಿ ಹೊಳೆಯುವ ಈ ಶ್ಲೋಕ ಹೆಣ್ಣಿನ ಪೂಜ್ಯ ಸ್ಥಾನವನ್ನು ಪರಿಚಯಿಸುತ್ತದೆ. ಯಾವ ಸಮಾಜ ಹೆಣ್ಣನ್ನು ಗೌರವದಿಂದ ಪೂಜನೀಯ ದೃಷ್ಟಿಯಿಂದ ನೋಡುವುದೊ ಆ ಸಮಾಜದಲ್ಲಿ ದೇವತೆಗಳು ವಿಹರಿಸುತ್ತಾರೆ ಎನ್ನುವ ಮಾತುಗಳು ಪೂರ್ಣ ಸತ್ಯವಾದುದು. ಆದರೆ ಅದೇ ಮನುಧರ್ಮಶಾಸ್ತ್ರ 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದು ಹೇಳುವುದರ ಮೂಲಕ ಸ್ತ್ರೀ ಸ್ವಾತಂತ್ರ್ಯದ ಮೇಲೆ ಹಲ್ಲೆ ನಡೆಸಿದೆ ಎಂತಲೇ ಹೇಳಬಹುದು.

"ಹೆಣ್ಣು ಮಗುವಿಗೆ ಇನ್ನೂ ಲಜ್ಜೆ ಮೂಡದೆ, ಬೆತ್ತಲೆ ತಿರುಗುವ ಹಂತದಲ್ಲೇ ಮದುವೆ ಮಾಡಬೇಕೆಂದು ಮನು ಧರ್ಮಶಾಸ್ತ್ರ ನುಡಿಯುತ್ತದೆ. ದೇವ ಪೂಜೆ ಮಾಡಬಾರದೆಂದು ವಿಧಿಸುತ್ತದೆ. ವೇದ ಮಂತ್ರ ಪಠಿಸಬಾರದೆಂದು, ವೇದವನ್ನು ಓದಬಾರದೆಂದು ಅಪ್ಪಣೆ ಮಾಡಿದೆ. ಯಜ್ಞೋಪವೀತ ಧರಿಸಿ ಯಜ್ಞಯಾಗಾದಿಗಳನ್ನು ನೆರವೇರಿಸುವ, ಯಜಮಾನಿಕೆ ವಹಿಸುವ ಅಧಿಕಾರದ ವಿದ್ವತ್ತನ್ನು ಗಳಿಸಿದ್ದ ಸ್ತ್ರೀಗೆ, ವೇದ ಮಂತ್ರಗಳನ್ನು ಕಿವಿಗಳಿಂದ ಕೇಳಲೂಬಾರದೆಂಬ ಕಟ್ಟುನಿಟ್ಟಾದ ನಿಯಮ ಮಾಡಿ ಮಹಿಳೆಯ ಸಾಮಾಜಿಕ ಅಂತಸ್ತನ್ನು ಕೆಳಗಿಳಿಸಿದ್ದು ಮಾತ್ರವಲ್ಲದೆ ಆಕೆಯ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಸಿದುಕೊಳ್ಳಲಾಯಿತು."[೩]

---

೩. ಡಾ. ಕಮಲಾ ಹಂಪನಾ : ಬೊಗಸೆ (ಮಹಿಳೆ ಸುತ್ತ ಮುತ್ತ) ಪು. ಸಂ. ೧೩೩ ಸಿ.ವಿ.ಜಿ. ಪ್ರಕಟಣೆ ೨೦೦೩

ಜೈನ ಧರ್ಮದತ್ತ ದೃಷ್ಟಿ ಹಾಯಿಸಿದಾಗ ಅಲ್ಲಿ ಪುರುಷನ ಶ್ರೇಷ್ಠತೆಯನ್ನು ಪ್ರತಿಪಾದಿಸಲಾಗುತ್ತದೆ. ಹೆಣ್ಣು ಹೀನ ಸ್ಥಿತಿಗೆ, ಅಪಮಾನಕ್ಕೆ ಒಳಗಾಗುತ್ತಾಳೆ. ಆಕೆ ನಿತ್ಯ ಬದುಕಿನ ಭೋಗಕ್ಕೆ ಇರುವವಳು, ಅವಳನ್ನು ನೋಡಿದರೆ ಮನಸ್ಸು ಚಂಚಲವಾಗುವುದು. ಆದುದರಿಂದ ಆಕೆ ವೈರಾಗ್ಯಕ್ಕೆ, ಧ್ಯಾನಕ್ಕೆ ಭಂಗ ತರುತ್ತಾಳೆ ಎಂದು ಸಾರುತ್ತದೆ. ಇಲ್ಲಿಯೂ ಕೂಡ ಮಹಿಳೆ ಮಾನಸಿಕ ಖಿನ್ನತೆ, ಕೀಳರಿಮೆಯಲ್ಲಿ ಬದುಕು ಸವೆಸಬೇಕಾದ ಅನಿವಾರ್ಯತೆ ಇದೆ.

ಬೌದ್ಧಧರ್ಮವು ಸ್ತ್ರೀಯರಿಗೆ ಕೆಲವು ಧಾರ್ಮಿಕ ಸ್ವಾತಂತ್ರ್ಯಗಳನ್ನು ನೀಡಿತ್ತು. ಆದರೆ ಹೆಣ್ಣು ಇದ್ದರೆ ಮೋಕ್ಷ ಸಾಧನೆಗೆ, ಮಹಾನಿರ್ವಾಣವನ್ನು ಪಡೆಯಲು ಅವರು ಅಡ್ಡಿಯಾಗುತ್ತಾರೆ ಎಂಬಂತಹ ನಂಬಿಕೆಗಳು ಇದ್ದವು. ಮಹಿಳೆಯರು ಲೌಕಿಕ ಸುಖವನ್ನು ತ್ಯಾಗ ಮಾಡಿ ಸನ್ಯಾಸವನ್ನು ಸ್ವೀಕರಿಸಿದ್ದರೂ ಸಹ ತುಚ್ಚವಾಗಿ ನೋಡುತ್ತಿದ್ದರು. ಅವರ ಸದ್ಗುಣಗಳಿಂದ ದೌರ್ಬಲ್ಯಗಳಿಗೇ ಹೆಚ್ಚಿನ ಒತ್ತನ್ನು ನೀಡಿ ಕಡೆಗಣಿಸುತ್ತಿದ್ದರು.

ಧರ್ಮದ ಹೆಸರಿನಲ್ಲಿ ಹೆಣ್ಣು ಬಹಳಷ್ಟು ಅನ್ಯಾಯ ಮತ್ತು ಶೋಷಣೆಗೆ ಒಳಗಾಗುತ್ತಿರುವ ಧರ್ಮವೆಂದರೆ ಮುಸ್ಲಿಂ ಧರ್ಮ. ಆಕೆ ಮಸೀದಿ ಒಳಗಡೆ ಹೋಗಲೂ ಕೂಡ ಅವಕಾಶವಿಲ್ಲವೆಂದರೆ ಆಕೆಯ ಸ್ಥಾನಮಾನಗಳು ಏನು ಎಂಬುದರ ಅರಿವಾಗುತ್ತದೆ. ಸಾಂಸಾರಿಕ ಸೆಳೆತಕ್ಕೆ ಸಿಕ್ಕಿ ಒದ್ದಾಡುವ ಹೆಣ್ಣು ಅಲ್ಲಿ ಕನಿಷ್ಠ ಪಕ್ಷ ವಿಚ್ಛೇದಿತಳಾದಾಗ ಜೀವನಾಂಶವನ್ನು ಕೂಡ ಪಡೆಯಲಾಗದ ಚಿತ್ರಣವು ಮನ ಕಲಕುತ್ತದೆ.

"ವಿಚ್ಛೇದಿತ ಮಹಿಳೆಗೆ ಜೀವನಾಂಶ ನೀಡುವುದು ಧರ್ಮ ವಿರೋಧಿ ಎಂದು ಕೂಗೆಬ್ಬಿಸಿದ ಪುರುಷ ಪ್ರಧಾನ ಸಮಾಜವೂ ಇಂತಹ ಕೆಟ್ಟ ನಿಯಮವೂ ಕೂಡ ಧರ್ಮ ವಿರೋಧಿ ಎಂದೂ, ತಮ್ಮ ವ್ಯಕ್ತಿನಿಯಮವನ್ನು ಕುರಾನಿಗನುಸಾರವಾಗಿ ಬದಲಾಯಿಸಬೇಕೆಂದು ಒಮ್ಮೆಯಾದರೂ ಉಸಿರೆತ್ತಲಿಲ್ಲ."[೪] ಧರ್ಮಾಂಧರಾದ, ಮೂಲಭೂತವಾದಿಗಳಾದ ಇವರು ಕುಟುಂಬ ಯೋಜನೆ ಕೈಗೊಳ್ಳುವುದನ್ನು ವಿರೋಧಿಸುತ್ತಾರೆ. ಜೊತೆಗೆ ಭಾರತದ ಸಂವಿಧಾನದ ದಂಡಸಂಹಿತೆಗಳನ್ನು ವಿರೋಧಿಸುತ್ತಾರೆ ಎನ್ನುವುದು ವಾಸ್ತವವಾಗಿದೆ.

ಕ್ರೈಸ್ತ ಧರ್ಮವು ಸ್ತ್ರೀಯರ ವಿಷಯದಲ್ಲಿ ವಿಶಾಲ ಭಾವನೆಯನ್ನು ಹೊಂದಿದಂತೆ ತೋರುತ್ತಿದ್ದರೂ ಕೂಡ ಅಲ್ಲಿಯೂ ಯಾವುದೇ ವ್ಯತ್ಯಾಸ ತೋರುವುದಿಲ್ಲ. ಬೈಬಲ್ಲಿನ ಆದಿಕಾಂಡದಲ್ಲಿ ದೇವರು ಮೊದಲು 'ಆದಾಮ'ನನ್ನೂ ಸೃಷ್ಟಿಸಿದ ಎಂದು ಹೇಳುತ್ತದೆ. ಅವನು ತನ್ನ ಎಲುಬಿನಿಂದ ಹೆಣ್ಣನ್ನು ರೂಪಿಸಿಕೊಳ್ಳುತ್ತಾನೆ ಎಂದು ಸಾರುವಲ್ಲಿಯೇ ಪುರುಷ ಶ್ರೇಷ್ಠತೆಯನ್ನು ಸಾರುತ್ತದೆ. ಬೈಬಲ್ಲಿನ ಮತ್ತೊಂದು ಭಾಗದಲ್ಲಿ ಸ್ತ್ರೀಯನ್ನು ಪಾಪದ ಮೂಲವೆಂದು ಹೇಳುತ್ತದೆ. ಹೀಗಾಗಿ ಕ್ರೈಸ್ತ ಧರ್ಮವೂ ಕೂಡ ಸ್ತ್ರೀಯರ ವಿಷಯದಲ್ಲಿ ಸಾಮಾಜಿಕವಾಗಿ ಧಾರ್ಮಿಕವಾಗಿ ಅಸಮಾನತೆ ವ್ಯಕ್ತಪಡಿಸುವುದನ್ನು ಕಾಣುತ್ತೇವೆ.

ಒಟ್ಟಾರೆಯಾಗಿ ಜಗತ್ತಿನ ಎಲ್ಲ ಮತಧರ್ಮಗಳು ಪುರುಷ ಪಕ್ಷಪಾತಿಯಾಗಿರುವುದು ಸುಸ್ಪಷ್ಟ. ಸ್ತ್ರೀ ವಿರೋಧಿ ಧೋರಣೆಗಳು ಸರ್ವೇ ಸಾಮಾನ್ಯವಾಗಿವೆ. ಮೂಲತಃ ಧರ್ಮ ಆ ಕೆಲಸವನ್ನು ಮಾಡದಿದ್ದರೂ ಅಲ್ಲಿನ ಧರ್ಮ ಸಂಸ್ಥಾಪಕರು ಸಾರಿರುವ ವಿಷಯಗಳನ್ನು ಬೇರೆ ರೀತಿಯಲ್ಲಿ ಅರ್ಥೈಸಿಕೊಂಡ ಪಟ್ಟಭದ್ರ ಹಿತಾಸಕ್ತಿಯು ತಮ್ಮ ಅನುಕೂಲಕ್ಕೆ ತಕ್ಕಂತೆ ದುರುಪಯೋಗಪಡಿಸಿಕೊಂಡಿದ್ದು ಸರ್ವವೇದ್ಯ. ಪ್ರಸ್ತುತ ವಿಶ್ವಮಾನವತೆಯೆಡೆಗೆ ದಾರಿ ತೋರುವ ಸಮಾನತೆಯನ್ನು ಸಾರುವಂತಹ ಧರ್ಮದ ಅವಶ್ಯಕತೆ ಇದೆ.

ಮಧ್ಯಕಾಲೀನ ಯುಗದ ಚರಿತ್ರೆಯತ್ತ ದೃಷ್ಟಿ ಹಾಯಿಸಿದಾಗ ರಾಜಪ್ರಭುತ್ವವು ಹೆಣ್ಣನ್ನು ಮತ್ತಷ್ಟು ಕೀಳಾಗಿ ಕಂಡ ಪ್ರಸಂಗಗಳು, ಕರುಣಾ ಜನಕ ಪುಟಗಳು ಮೂಡಿ ಬಂದಿವೆ. ಅಲ್ಲಿ ದಾಸಿಯರಾಗಿ

---

೪. ಸಾ.ರಾ. ಅಬೂಬಕರ್ : ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ ಪು. ಸಂ. ೭೫ ಕನ್ನಡ ವಿಶ್ವವಿದ್ಯಾಲಯ ೨೦೦೭

ಸೇವೆಯನ್ನು ಮಾಡಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಳು. ಆ ಕಾಲದಲ್ಲಿ 'ಹೆಣ್ಣು ಮಗು ಹುಟ್ಟಿದರೆ ಅದೊಂದು ಅಶುಭ' ಎಂಬುದಾಗಿ ಭಾವಿಸತೊಡಗಿದ್ದು, "ನಮಗೆ ಹೆಣ್ಣು ಶಿಶು ಹುಟ್ಟಿದ ದಿನ ಒಂದು ಶಾಪದ ದಿನ" ಎಂದು ಮಧ್ಯಯುಗದ ಪುರುಷರು ಹೇಳುತ್ತಿದ್ದರು. ಪತ್ನಿಯಾದವಳು ಅವಳ ದುರ್ದೈವದಿಂದ ಒಂದರ ಮೇಲೆ ಒಂದರಂತೆ ಹೆಣ್ಣು ಮಕ್ಕಳಿಗೆ ಜನ್ಮವಿತ್ತರೆ ಅವಳನ್ನು ನಿಂದಿಸಲಾಗುತ್ತಿತ್ತು. ಅದೇ ಕಾರಣಕ್ಕೆ ಕೆಲವು ಸಲ ಅವಳೊಂದಿಗಿನ ವಿವಾಹವನ್ನು ವಿಚ್ಛೇದನಗೊಳಿಸಲಾಗುತ್ತಿತ್ತು. ಹೆಣ್ಣು ಮಕ್ಕಳನ್ನು ಹುಟ್ಟಿದ ಕೂಡಲೆ ಸಾಯಿಸಿಬಿಡುವ ಪದ್ಧತಿಯನ್ನು ಅನುಸರಿಸುತ್ತಿದ್ದರು. ಹೀಗೆ ಹೆಣ್ಣು ಪುರಾತನ ಕಾಲದಿಂದಲೂ ಸ್ವಲ್ಪ ವ್ಯತ್ಯಾಸಗಳೊಂದಿಗೆ ತುಳಿತಕ್ಕೆ ಒಳಗಾಗಿಯೇ ಬಂದಿದ್ದಾಳೆ. ಕನಿಷ್ಠ ಪಕ್ಷ ಇಂದಿನ ಸಮಾಜಕ್ಕಾದರೂ ಹುಟ್ಟುವ ಮಗು ಗಂಡೋ? ಅಥವಾ ಹೆಣ್ಣೋ? ಎಂಬುದು ನಿರ್ಧಾರವಾಗುವುದು ಪುರುಷನಿಂದಲೇ ಹೊರತು ಹೆಣ್ಣಿನಿಂದಲ್ಲ ಎಂಬ ವಾಸ್ತವ ಹಾಗೂ ವೈಜ್ಞಾನಿಕ ಸಂಗತಿಯನ್ನು ಮನದಟ್ಟು ಮಾಡಿಕೊಡಬೇಕಾದ ಅನಿವಾರ್ಯತೆ ಇದೆ.

ಹೊಸ ಶತಮಾನಕ್ಕೆ ಕಾಲಿಟ್ಟ ಹೆಣ್ಣು ಇಂದು ಸಂಘರ್ಷ–ಸಮಾಧಾನಗಳಲ್ಲಿ ಇದ್ದಾಳೆ. ಎಲ್ಲಾ ರಂಗದಲ್ಲೂ ಮಿಂಚುತ್ತಿದ್ದಾಳೆ. ಸಾಹಿತ್ಯ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿದ್ದು ತನ್ನ ಜೀವನವನ್ನು ಕೃತಿ ರೂಪಕ್ಕೆ ಇಳಿಸುತ್ತಿದ್ದಾಳೆ.

ಕನ್ನಡ ಸಾರಸ್ವತ ಲೋಕದ ಬಹುತೇಕ ಕಾದಂಬರಿಗಳ ಮುಖ್ಯ ವಸ್ತು 'ಹೆಣ್ಣು. ಹಾಗೆ ನೋಡಿದರೆ ಕನ್ನಡದ ಪ್ರಥಮ ಕಾದಂಬರಿಯಾದ ಕೆರೂರು ವಾಸುದೇವಾಚಾರ್ಯರ 'ಇಂದಿರಾ', ನಂತರದ ಗುಲ್ವಾಡಿ ವೆಂಕಟರಾವ್‌ರವರ 'ಇಂದಿರಾಬಾಯಿ' ಕಾದಂಬರಿಗಳು ಸಮಾಜದ ಕಟ್ಟುಪಾಡುಗಳ ನಡುವೆ ಸಿಲುಕಿ ನರಳುವ ಹೆಣ್ಣಿನ ನೋವಿನ ಕಥೆಯನ್ನು ಬಿಂಬಿಸುತ್ತದೆ. ವಿಶೇಷವೆಂದರೆ ಈ ಕಾದಂಬರಿಗಳು ಹೆಣ್ಣಿನ ಶೋಷಣೆಯ ಮೇಲ್ಪದರವನ್ನಷ್ಟೇ ಬಿಂಬಿಸಿದ್ದು, ಹೆಣ್ಣಿನ ಆಂತರ್ಯವನ್ನು ಕಟ್ಟಿಕೊಡುವಲ್ಲಿ ವಿಫಲವಾಗಿವೆ. ಕಾರಣ ಪುರುಷ ಗ್ರಹಿಕೆಯೇ ಆ ಬಗೆಯದು. ತಮ್ಮ ಬದುಕನ್ನು ಕಟ್ಟಿಕೊಡುವಲ್ಲಿ ಆಯಾ ಮೂಲದಿಂದ ಬಂದವರೇ ಹೇಳಿದರೆ ಅದಕ್ಕೊಂದು ವಿಶಿಷ್ಟತೆ ಬರುತ್ತದೆ. ಮಾತ್ರವಲ್ಲ ಅಧಿಕೃತತೆ ಸಿಗುತ್ತದೆ. ಹೀಗಾಗಿ ಹೆಣ್ಣಿನ ಸಮಸ್ಯೆಯ ಮೂಲವನ್ನು ಹೆಣ್ಣು ಕಟ್ಟಿಕೊಟ್ಟರೆ ಅದು ಹೆಚ್ಚು ವಸ್ತುನಿಷ್ಠತೆಗೆ ಹತ್ತಿರವಾಗುತ್ತದೆ. ಮಹಿಳಾ ಬರಹಗಾರರನೇಕರು ಸಾಹಿತ್ಯ ಕೃಷಿಯಲ್ಲಿ ದುಡಿಸಿಕೊಂಡಿದ್ದಾರೆ. ಎಂ.ಕೆ. ಇಂದಿರಾ, ಅನುಪಮ ನಿರಂಜನ, ತ್ರಿವೇಣಿ, ಸಾಯಿಸುತೆ ಮುಂತಾದ ಸ್ತ್ರೀ ಕಾದಂಬರಿಕಾರರನ್ನು ಇಲ್ಲಿ ಸ್ಮರಿಸಬಹುದು.

ವಚನಕಾರರ ಯುಗದಲ್ಲಿ ನೋಡುವುದಾದರೆ 'ಹೆಣ್ಣು ಮಾಯೆ ಎಂಬುದು ಹೆಣ್ಣು ಮಾಯೆಯಲ್ಲ, ಮನದ ಮಂದಣ ಆಸೆಯೇ ಮಾಯೆ' ಎಂದು ಹೇಳಿ ಹೆಣ್ಣಿನ ಸ್ಥಾನಮಾನವನ್ನು ಏರಿಸಿದ್ದರು.

"ಭಕ್ತೆಯಾದ ಬಳಿಕ ಹೆಣ್ಣಿಗೆ ಭವಿತವಿಲ್ಲ
ಭವಿಯ ಮನೆಯಲ್ಲಿ ಭವಿಪಾಕವಲ್ಲದೆ
ಭಕ್ತನ ಮನೆಯಲ್ಲಿ ಭವಿಪಾಕವಿಲ್ಲ."[೫]

ಎಂದು ಹೆಣ್ಣನ್ನು ದೈವತ್ವದ ಸ್ಥಾನಕ್ಕೆ ಏರಿಸುವುದನ್ನು ಕಾಣಬಹುದು.

ಹನ್ನೆರಡನೇ ಶತಮಾನದಲ್ಲಾದ ಸಾಮಾಜಿಕ ಕ್ರಾಂತಿಯ ಬದಲಾವಣೆಯ ಗಾಳಿ ಯಾವುದೇ ಸ್ಥಿತ್ಯಂತರಕ್ಕೆ ಕಾರಣೀಭೂತವಾಗದೇ ಅಂದು ಇದ್ದಂತಹ ಕಟ್ಟುಪಾಡುಗಳೇ ಈಗಲೂ ಮುಂದುವರೆಯುತ್ತಿದ್ದು ಶತಮಾನಗಳು ಗತಿಸಿದ ಹಾಗೇ ಬೌದ್ಧಿಕವಾಗಿ, ವೈಚಾರಿಕವಾಗಿ ವಿಚಾರವಾಗುತ್ತಿರುವ ಹಿನ್ನೆಲೆಯಲ್ಲಿ ಅಲ್ಪಸ್ವಲ್ಪ

೫. ಕಮಲಾ ಹಂಪನಾ : ಬೊಗಸೆ (ಮಹಿಳೆ ಸುತ್ತ ಮುತ್ತ) ಪು. ಸಂ. ೧೩೬ ಸಿವಿಜಿ ಪ್ರಕಾಶನ ೨೦೦೩

ಬದಲಾವಣೆಯನ್ನು ಕಾಣಬಹುದಾಗಿದೆ. ಅಂದು ಶರಣರು ವ್ಯಕ್ತಪಡಿಸಿದ್ದ ಲಿಂಗ ಸಮಾನತೆಯ ಮಾನವೀಯ ಕಾಳಜಿ ಸ್ತ್ರೀ ವಿಮೋಚನೆಯ ನೆಲೆಯಲ್ಲಿ ಬೀಸಿದ ಪ್ರಥಮ ತಂಗಾಳಿಯಾಗಿದೆ.

ಮಹಿಳೆಯರು ಇಂದು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳು ಸಾಹಿತ್ಯದಲ್ಲಿ ಬಿಂಬಿತವಾಗಿಲ್ಲ. ಮಹಿಳೆಯು ಒಂದು ಚೌಕಟ್ಟಿನೊಳಗಡೆ ಇದ್ದು ತನ್ನ ಸ್ಥಾನ ಮಾನಗಳನ್ನು ಅರಿತು ಆ ಚೌಕಟ್ಟಿಗನುಸಾರವಾಗಿಯೇ ಬದುಕಿ ಬಾಳಬೇಕಾಗುತ್ತದೆ.

ಸಾಹಿತ್ಯದಲ್ಲಿ ಹೆಣ್ಣನ್ನು ಹೇಗೆ ಬೇಕಾದರೂ ಚಿತ್ರಿಸಬಹುದು. ಸಮಾಜದೊಡನೆ ಪ್ರಶ್ನೆ ಕೇಳುವುದರ ಮೂಲಕ ಸಮಾಜವನ್ನು ಬಡಿದೆಬ್ಬಿಸಬಹುದು. ಸಾಹಿತ್ಯದ ಮೂಲಕ ಸಾಮಾಜಿಕ ಬದಲಾವಣೆಗೆ ಪ್ರಯತ್ನಿಸಬಹುದು. ಹೀಗಿದ್ದರೂ ಪಿತೃ ಪ್ರಧಾನ ವ್ಯವಸ್ಥೆಯ ಎಲ್ಲಾ ಕಾಲ ಘಟ್ಟಗಳಲ್ಲಿ ಮಹಿಳೆ ಎರಡನೆಯ ದರ್ಜೆಯವಳಾಗಿಯೇ ಗುರುತಿಸಲ್ಪಟ್ಟವಳು. ಆಯಾಯ ಕಾಲದಲ್ಲಿ ಹೆಣ್ಣು ಎಂತಹ ಸ್ಥಾನ ಮಾನ, ಗೌರವಗಳನ್ನು ಪಡೆದು ಮೇಲ್‌ಸ್ತರಕ್ಕೆ ಬೆಳೆದರೂ ಕೂಡ ಹೆಣ್ಣು ಎಂಬ ಕಾರಣಕ್ಕೆ ಆಕೆ ಪುರುಷನ ಮಿತಿಗಳಲ್ಲೇ ಬೆಳೆಯಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ಡಾ। ವಿಜಯ ಸುಬ್ಬರಾಜ್‌ರವರ ಹೊಸ ಕಾದಂಬರಿಯಾದ "ಬೆಸುಗೆಯ ಬಂಧನದಲ್ಲಿ" ಕಾದಂಬರಿಯು ಒಂದು ವಿಶಿಷ್ಟವಾದ ಕಾದಂಬರಿಯಾಗಿದ್ದು, ಈ ಕಾದಂಬರಿಯಲ್ಲಿ ಮಹಾತ್ಮ ಗಾಂಧಿ ಹಾಗೂ ಅವರ ಪತ್ನಿ ಕಸ್ತೂರ ಬಾ ಅವರ ದಾಂಪತ್ಯ ಜೀವನವನ್ನು ಲೇಖಕಿ ವಿಜಯಾ ಸುಬ್ಬರಾಜ್ ಮರು ಕಥಿಸಿದ್ದಾರೆ. ಇದು ನಿರಂತರ ಶೋಧನೆ, ಅಪಾರ ಅಧ್ಯಯನದಿಂದ ಹುಟ್ಟಿದ ಪುಸ್ತಕವಾಗಿದೆ. ಗಾಂಧೀಜಿ ಅವರಂತಹ ಪ್ರಭಾವಶಾಲಿ, ನಿಷ್ಠುರ ವ್ಯಕ್ತಿಯ ಜೊತೆಗೆ ಚೈತನ್ಯಶಾಲಿ ವ್ಯಕ್ತಿತ್ವದ ಕಸ್ತೂರ ಬಾ ಹೇಗೆ ಬಾಳುವೆ ನಡೆಸಿದರು ಎಂಬುದನ್ನು ಈ ಪುಸ್ತಕ ಹೇಳುತ್ತದೆ. ದಾಂಪತ್ಯದಲ್ಲಿ ನಡೆಯುವ ತಿಕ್ಕಾಟ, ಭಿನ್ನಾಭಿಪ್ರಾಯ ಹಲವು ಬಗೆಯ ಸಂದರ್ಭ, ಘಟನೆಗಳನ್ನು ಇದು ಒಳಗೊಳ್ಳಲು ಪ್ರಯತ್ನಿಸಿದೆ. ಮುಖ್ಯವಾಗಿ ಇದು ಮೇರುಪರ್ವತದ ಅಡಿಯಲ್ಲಿ ಬೆಳೆದ ಹಚ್ಚ ಹಸುರಿನ ಮರವೊಂದನ್ನು ಎಲ್ಲರಿಗೂ ಕಾಣುವಂತೆ ಮಾಡಿದ ಕಾದಂಬರಿಯಾಗಿದೆ.

ಗಾಂಧೀಜಿಯವರ ಸಮಸಮಕ್ಕೆ ತನ್ನದೇ ರೀತಿಯಲ್ಲಿ ಹೆಜ್ಜೆ ಹಾಕಿದ ಕಸ್ತೂರ ಬಾ ಅವರ ಬದುಕು ಪ್ರತಿಕ್ಷಣವೂ ಕೆಂಡದ ಮೇಲೆ ಹಾಯುವರಂತೆ ಇತ್ತು. ದೇಶದ ರಾಜಕೀಯದಲ್ಲಿ ಆಗುವ ಪಲ್ಲಟಗಳಿಗೆ, ಗಾಂಧೀಜಿಯ ಪ್ರಯೋಗ, ಚಿಂತನೆಗಳಿಗೆ ಅವರು ಸಾಕ್ಷಿಯಾಗಿದ್ದರು. ಇಂತಹ ಕಸ್ತೂರ ಬಾ ಅವರ ವ್ಯಕ್ತಿತ್ವದ ಹೊರಚಾಚುಗಳು ಅವರ ಮತ್ತು ಗಾಂಧೀಜಿ ಅವರ ದಾಂಪತ್ಯಕ್ಕೆ ಇರುವ ಬಣ್ಣ, ಗಂಧ, ರಾಗಗಳು ಯಾವುದಾಗಿದ್ದವು ಎಂಬುದನ್ನು ಅತ್ಯಂತ ಪ್ರಖರ, ನಿಖರ ಮಾತುಗಳಲ್ಲಿ ವಿಜಯಾ ಸುಬ್ಬರಾಜ್‌ರವರು ನಿರೂಪಿಸಿದ್ದಾರೆ. ಈ ಕಾದಂಬರಿಯು ದೊಡ್ಡ ಬದುಕನ್ನು ವಿಸ್ತಾರವಾದ ತೆರೆಯ ಮೇಲೆ ಮೂಡಿಸಲು ಮಾಡಿದ ಮಹತ್ವಾಕಾಂಕ್ಷಿ ಪ್ರಯತ್ನವಾಗಿದೆ.

ಅಧ್ಯಾಯ –೨

ಕನ್ನಡ ಕಾದಂಬರಿ ಬೆಳೆದು ಬಂದ ಹಾದಿ – ಅವಲೋಕನ

ಅಧ್ಯಾಯ – ೨

ಕನ್ನಡ ಕಾದಂಬರಿ ಬೆಳೆದು ಬಂದ ಹಾದಿ–ಅವಲೋಕನ

ಇಂದು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯು ಬಹುಜನಪ್ರಿಯವಾದ ಸಾಹಿತ್ಯ ಪ್ರಕಾರವಾಗಿದೆ. ಕಾದಂಬರಿಯು ಆಧುನಿಕ ಪ್ರಜ್ಞೆಯ ಫಲವಾಗಿದ್ದು ಅದು ಆಧುನಿಕ ಸಂವೇದನೆಗಳಿಗೆ ತಕ್ಕ ರೂಪವಾಗಿದೆ. ನಿಜವಾದ ಅರ್ಥದಲ್ಲಿ ಅದು ಮಧ್ಯಮ ವರ್ಗದ ಮಹಾಕಾವ್ಯವಾಗಿದೆ. ಕಾದಂಬರಿ ಪ್ರಕಾರವು ಆಧುನಿಕ ಸಂವೇದನೆಗಳ ಆಧುನಿಕ ಅಗತ್ಯಗಳ ಆವಿಷ್ಕಾರದ ಫಲವಾಗಿದೆ. ಸಾಹಿತ್ಯ ಎನ್ನುವುದು ಕೇವಲ ಲೇಖಕನ ಭಾವನೆ ಮತ್ತು ಸಂಸ್ಕೃತಿಯ ಅಭಿವ್ಯಕ್ತಿ ಮಾತ್ರವಾಗಿರದೆ ಜನಾಂಗದ ಆಶೋತ್ತರ, ಕನಸು, ಬದಲಾಗುತ್ತಿರುವ ಸಂವೇದನೆ ಮತ್ತು ಬದಲಾಗುತ್ತಿರುವ ಜಗತ್ತಿನ ಸ್ವರೂಪವನ್ನು ಸಮರ್ಥವಾಗಿ ಸೆರೆ ಹಿಡಿಯುವ ಮಾಧ್ಯಮವಾಗಿದೆ. ಇಂತಹ ಕಾದಂಬರಿ ಮಾಧ್ಯಮವನ್ನು ಭಿನ್ನ ಭಿನ್ನ ನೆಲೆ ಮತ್ತು ದೃಷ್ಟಿಕೋನಗಳಿಂದ ಅಧ್ಯಯನ ಮಾಡಲಾಗುತ್ತದೆ. ಆಧುನಿಕ ಸಾಹಿತ್ಯ ಪ್ರಕಾರವಾಗಿ ಕಾದಂಬರಿಯು ಬೆಳೆದು ಬಂದ ರೀತಿ ಅನನ್ಯವೂ, ಚಾರಿತ್ರಿಕವಾಗಿ ಕುತೂಹಲಕಾರಿಯೂ ಆಗಿದೆ. ಸುಮಾರು ಒಂದು ಶತಮಾನದ ಅವಧಿಯಲ್ಲಿ ವಸ್ತು ಮತ್ತು ವಿನ್ಯಾಸಗಳಲ್ಲಿ ಕಾದಂಬರಿಯು ಸಾಕಷ್ಟು ಅವಸ್ಥಾಂತರಗಳನ್ನು ಹೊಂದಿದೆ. ಕಾದಂಬರಿಯನ್ನು ಡಬ್ಲ್ಯು ಹೆಚ್. ಹಡ್ಸನ್ 'ಪಾಕೇಟ್ ಥಿಯೇಟರ್' ಎಂದು ಕರೆದಿದ್ದಾನೆ. ಇದೇ ಮಾತನ್ನೇ ಶ್ರೀ ಕೆ.ವಿ. ಪುಟ್ಟಪ್ಪನವರು 'ಕಾದಂಬರಿಯು ಕರತಲ ರಂಗಭೂಮಿ' ಎಂದು ಕರೆದಿದ್ದಾರೆ. ಕಾದಂಬರಿಯ ಈ ವಿವರಣೆಯಿಂದ ಎರಡು ಮುಖ್ಯವಾದ ಅಂಶ ವ್ಯಕ್ತವಾಗುತ್ತದೆ. ಒಂದು ಆರಂಭ ಹಾಗೂ ಮುಕ್ತಾಯದ ಪ್ರಾಧಾನ್ಯ, ಎರಡನೆಯದು ಪಾತ್ರ ಸೃಷ್ಟಿ ಕಾದಂಬರಿಯ ಆರಂಭ ಓದುಗನಲ್ಲಿ ಕಾದಂಬರಿಯು ಕ್ರಿಯೆಗೆ ಹದವಾದ ಪರಿಣಾಮವನ್ನು ಮೂಡಿಸುವಂತಿರಬೇಕು. ಮುಕ್ತಾಯ ಕಾದಂಬರಿಯ ಮೂಲ ಭಾವನೆಯನ್ನು ಓದುಗನಲ್ಲಿ ಖಚಿತಪಡಿಸಬೇಕು. ಇಲ್ಲವಾದಲ್ಲಿ ಕಾದಂಬರಿಯ ಉದ್ದೇಶವೇ ನಷ್ಟವಾಗುತ್ತದೆ. ಇಂಕು ಕಾಗದ ಸಾಕಷ್ಟು ವಿರಾಮ ಮತ್ತು ತಾಳ್ಮೆಗಳಿದ್ದರೆ ಯಾರು ಬೇಕಾದರೂ ಕಾದಂಬರಿ ಬರೆಯಬಹುದು ಎಂಬ ಮಾತು, ಕಾದಂಬರಿಯ ಸರಳ, ಸ್ವತಂತ್ರ, ಸ್ವಚ್ಛಂದತೆಯನ್ನು ಕುರಿತು ಹೇಳುತ್ತದೆ. ವಿಶ್ವಸಾಹಿತ್ಯದಲ್ಲಿ ಕಾದಂಬರಿಗೆ ಅದರದೇ ಆದ ವಿಶಿಷ್ಟ ಸ್ಥಾನವಿದ್ದು, ಜನಪ್ರಿಯ ಓದಿನ ಮಾಧ್ಯಮವಾಗಿದೆ. " ಸಾಹಿತ್ಯವು ಸಾಮಾಜಿಕ ಕ್ರಾಂತಿಯ ಹರಿಕಾರನಾಗಬೇಕು."[1] ಕಾದಂಬರಿಗಳಲ್ಲಿ ಭಾರತೀಯ ಸಂಸ್ಕೃತಿಯ ಬೆಳಕನ್ನು ಚೆಲ್ಲಲು ಕಾದಂಬರಿಗಳನ್ನು ರಚಿಸಿದರು. ಕಾದಂಬರಿಯು ಮಧ್ಯಮ ವರ್ಗದ ಜನಪ್ರಿಯ ಮಾಧ್ಯಮವಾಗಿದೆ. ಕೀರ್ತಿನಾಥ ಕುರ್ತಕೋಟಿಯವರು ಕಾದಂಬರಿಯನ್ನು ಕುರಿತು " ಈ ಸಾಹಿತ್ಯ ಪ್ರಕಾರ ಒಂದು ರೀತಿಯಿಂದ ಜನಪದ ಸಾಹಿತ್ಯದಂತೆ, ಸಾಮಾನ್ಯ ಜನರ ಆಶೋತ್ತರಗಳನ್ನು, ಅಭಿರುಚಿಗಳನ್ನು, ಸಂಸ್ಕೃತಿಯ ಮಟ್ಟವನ್ನು ವಿವರವಾಗಿ ಪ್ರತಿಬಿಂಬಿಸುವ ಮಾಧ್ಯಮವಾಗಿದೆ "[2] ಎಂದು ಅಭಿಪ್ರಾಯಪಡುತ್ತಾರೆ.

ನಮ್ಮ ದೇಶದಲ್ಲಿ ಕಾದಂಬರಿಯ ಪ್ರಕಾರ ಪ್ರಾರಂಭವಾದದ್ದು ಹತ್ತೊಂಬತ್ತನೆಯ ಶತಮಾನದಲ್ಲಿ. ಹತ್ತೊಂಬತ್ತನೆಯ ಶತಮಾನ ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ಪರಿವರ್ತನೆಯನ್ನು, ಪ್ರಬುದ್ಧತೆಯನ್ನು ನೀಡಿದೆ. ಅದಕ್ಕಿಂತ ಮುಂಚೆ ನಮ್ಮಲ್ಲಿ ಕತೆಗಳಿಲ್ಲವೆಂದಲ್ಲ, ಸಾಹಿತ್ಯ ಕ್ಷೇತ್ರದಲ್ಲಿ ನಿರಂತರವಾಗಿ ಸೃಷ್ಟಿಕ್ರಿಯೆ ನಡೆಯುತ್ತಿದ್ದರೂ ಭಾವ–ಭಾಷೆಗಳಲ್ಲಿ, ಆಲೋಚನಾ ಕ್ರಮದಲ್ಲಿ ಹೊಸತನವನ್ನು, ಹುರುಪು, ಹುಮ್ಮಸ್ಸನ್ನು ತಂದುಕೊಟ್ಟಿದೆ. ಸಾಹಿತ್ಯದಲ್ಲಿ ಕತೆ ಮೊದಲು ವೇದೋಪನಿಷತ್ತುಗಳಲ್ಲಿ, ನೀತಿಕತೆ, ಜನಪದ ಕತೆಗಳಲ್ಲಿ ಪುರಾಣಗಳಲ್ಲಿ, ಮಹಾಕಾವ್ಯಗಳಲ್ಲಿ, ಕೀರ್ತನೆಗಳಲ್ಲಿ – ಹೀಗೆ ಹಲವಾರು ರೀತಿಯಲ್ಲಿ ಕಥೆ ಬೇರೆ ಬೇರೆ

---

೧. ಎಸ್.ಎಲ್. ಶೇಷಗಿರಿರಾವ್ : ಸ್ವಾತಂತ್ರ್ಯೋತ್ತರ ಕಾದಂಬರಿಗಳು ಪು. ಸಂ. ೧೫ ಕನ್ನಡ ನುಡಿ ಸಂಪುಟ ೧೮ ೨೦೧೩

೨. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಹಾಗೂ ಸಾಹಿತ್ಯ ದರ್ಶನ ಪು. ಸಂ. ೧೮೩ ವಿಶ್ವ ಕನ್ನಡ ಸಮ್ಮೇಳನ ಬೆಂಗಳೂರು ೧೯೮೩

ರೂಪ ತೆಗೆದುಕೊಂಡು ಅವ್ಯಾಹತವಾಗಿ ನಡೆದು ಬಂದಿತ್ತು. ಹತ್ತೊಂಬತ್ತನೆಯ ಶತಮಾನದಲ್ಲಿ ಇಂಗ್ಲೀಷ್ ಸಾಹಿತ್ಯದ ಅಭ್ಯಾಸದಿಂದ ಪ್ರೇರಿತವಾಗಿ, ಆಗಿನ ಸಾಂಸ್ಕೃತಿಕ ಸಂದರ್ಭಕ್ಕೆ ತಕ್ಕಂತೆ ನಮ್ಮ ಭಾರತೀಯ ಭಾಷೆಗಳಲ್ಲಿ ಮೈಪಡೆಯತೊಡಗಿತು. ಬ್ರಿಟಿಷರ ಆಳ್ವಿಕೆಗೆ ಒಳಗಾಗಿದ್ದ ಭಾರತದಲ್ಲಿ ಕ್ರೈಸ್ತ ಧರ್ಮ ಪ್ರಚಾರಕ್ಕಾಗಿ ಮಿಷನರಿಗಳು ಕೈಗೊಂಡ ಸಾಹಿತ್ಯ ಕಾರ್ಯ ಹಾಗೂ ಆಡಳಿತದ ಅನುಕೂಲಕ್ಕಾಗಿ ಬ್ರಿಟೀಷ್ ಅಧಿಕಾರಿಗಳು ಕೈಗೊಂಡ ಮಹತ್ತರ ಕಾರ್ಯಗಳು ಸಾಹಿತ್ಯಾಭಿವೃದ್ಧಿಯ ಹೊಸತನಕ್ಕೆ ನಾಂದಿ ಹಾಡಿವೆ.

ಬ್ರಿಟೀಷ್ ಆಡಳಿತ ಹಾಗೂ ಶಿಕ್ಷಣಗಳ ಫಲವಾಗಿ ತೆರೆದುಕೊಂಡ ಭಾರತೀಯ ಮಧ್ಯಮ ವರ್ಗದ ಜನರ ಮನಸ್ಸುಗಳಲ್ಲಿ ಹಳೆಯ ಸಾಮಾಜಿಕ ರೂಢಿಗಳ ಬಗ್ಗೆ, ಅಂಧಶ್ರದ್ಧೆಯ ಬಗ್ಗೆ, ಧಾರ್ಮಿಕ ಡಂಭಾಚಾರಗಳ ಬಗ್ಗೆ ಪ್ರಶ್ನೆಗಳು ಏಳತೊಡಗಿ ಹಳೆಯ ಸಾಮಾಜಿಕ-ಧಾರ್ಮಿಕ ವ್ಯವಸ್ಥೆ ಮುರಿದು ಬೀಳ ತೊಡಗಿತು. ಅದರಲ್ಲೂ ಕೆಲವು ಭಾರತೀಯ ಸಮಾಜಗಳು ಉಳಿದವುಗಳಿಗಿಂತ ಶೀಘ್ರವಾಗಿ ಸುಶಿಕ್ಷಿತವಾಗಿ ಆಧುನೀಕರಣದತ್ತ ಸಮಾಜ ಸುಧಾರಣೆಯತ್ತ ಒಲಿದವು. ಡಾ. ಸುರೇಶಪಾಟೀಲರವರು "ಕಾದಂಬರಿ ಪ್ರಕಾರ ಆಧುನಿಕ ಬಂಡವಾಳಶಾಹಿ ಜಗತ್ತಿನ ಕೂಸು ಅಥವಾ ಹೃದಯ, ಮಧ್ಯಮ ವರ್ಗಗಳ ಮಹಾಕಾವ್ಯ ಕಾದಂಬರಿ ಎಂದು ಹೆಗಲ್ ಹೇಳಿದ್ದು ಈ ಅರ್ಥದಲ್ಲಿಯೇ ಎಂದರೆ ಮಧ್ಯಮ ವರ್ಗವು ನಿರ್ಮಿಸಿದ ಮತ್ತು ಮಧ್ಯಮವರ್ಗವನ್ನು ಆಧರಿಸಿ ಹಾಗೂ ಮಹಾಕಾವ್ಯ ಅಥವಾ ರೋಮಾನ್ಸ್‌ಗಳು ಪ್ರತಿಪಾದಿಸುತ್ತಿದ್ದ ಊಳಿಗಮಾನ್ಯ ಮೌಲ್ಯಗಳಿಗೆ ಪ್ರತಿಯಾಗಿ ಈ ವರ್ಗದ ಮೌಲ್ಯಗಳನ್ನು ಒಳಗೊಂಡ ಕಲಾ ಪ್ರಕಾರವಿದಾಗಿದೆ."[೩] ಎನ್ನುತ್ತಾರೆ.

ಹದಿನೆಂಟನೆಯ ಶತಮಾನದಲ್ಲಿಯೇ ಕನ್ನಡದಲ್ಲಿ ಗದ್ಯಪ್ರಕಾರವು ಬೆಳೆಯತೊಡಗಿತ್ತು. ಪಾಶ್ಚಾತ್ಯ ಕಾದಂಬರಿಗಳು ಪ್ರಭಾವ ಬೀರುವುದಕ್ಕೆ ಮೊದಲೇ 'ಕಾದಂಬರಿ' ಎನ್ನಬಹುದಾದ ಸ್ವತಂತ್ರಕೃತಿಗಳು ಕನ್ನಡದಲ್ಲಿ ರಚಿತವಾದವು. ಯಾದವನ 'ಕಲಾವತಿ ಪರಿಣಯ' (1815) ಮುಮ್ಮಡಿಕೃಷ್ಣರಾಜ ಒಡೆಯರ 'ಸೌಗಂಧಿಕಾ ಪರಿಣಯ' (1821) ಮತ್ತು ಕೆಂಪುನಾರಾಯಣನ 'ಮುದ್ರಾಮಂಜೂಷ' (1823) – ಈ ಅದ್ಭುತ ರಮ್ಯ ಗದ್ಯ ಕಥಾನಕಗಳು ಕನ್ನಡ ಕಾದಂಬರಿಯ ಮೊದಲ ಸೋಪಾನವೆಂದೇ ಹೇಳಬೇಕು. ಇಲ್ಲಿ ಕಂಡು ಬರುವಂತಹ ಗದ್ಯ ಕೃತಿಗಳಲ್ಲಿ ಕವಿ ಸಮಯ, ವೀರ, ಶೃಂಗಾರ, ರಸಗಳು, ದೇವ-ದಾನವರನ್ನು ಒಳಗೊಂಡ ಮಾಟಮಂತ್ರಗಳ ಪ್ರವೇಶ ಉಂಟು. ಅಲಂಕಾರಯುಕ್ತವಾದ ವರ್ಣನೆಗಳು, ಯಥೇಚ್ಛವಾಗಿ ಕಂಡು ಬರುತ್ತದೆ. ಪಾತ್ರಗಳ ನಿರೂಪಣೆಯಲ್ಲಿ ಸಹಜತೆಯೂ ಇಲ್ಲದಿಲ್ಲ, ಪದ್ಯವನ್ನು ಬಿಟ್ಟು ಗದ್ಯದತ್ತ ಒಲಿದ ಈ ಲೇಖಕರ ಹಳೆಗನ್ನಡ ಶೈಲಿಯಲ್ಲಿನ ಅಭಿವ್ಯಕ್ತಿಯ ಮಾಧ್ಯಮದಲ್ಲಿ ತನ್ನ ಪರಂಪರೆಯ ಪ್ರಭಾವವನ್ನು ಪೂರ್ಣವಾಗಿ ತ್ಯಜಿಸಲು ಸಾಧ್ಯವಾಗಿಲ್ಲ. 'ಕಲಾವತೀ ಪರಿಣಯದಲ್ಲಿ' ಒಳ್ಳೆಯ ಕಥಾನಕವಿದೆ. ಪಾತ್ರಗಳ ನಿರೂಪಣೆಯಲ್ಲಿ ಸಹಜತೆಯೂ ಇಲ್ಲದಿಲ್ಲ. 'ಸೌಗಂಧಿಕಾ ಪರಿಣಯದ' ಭಾಷೆ ಹೊಸಗನ್ನಡಕ್ಕೆ ಹತ್ತಿರವಿದೆ. 'ಮುದ್ರಾಮಂಜೂಷ' ಸಂಸ್ಕೃತದ 'ಮುದ್ರಾರಾಕ್ಷಸ' ನಾಟಕದ ಆಧಾರದ ಮೇಲೆ ರಚಿತವಾಗಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ 'ಕಾದಂಬರಿ' ತನ್ನ ಮೊದಲ ಹೆಜ್ಜೆಯನ್ನಿಡುವ ಮುನ್ನವೇ ಗದ್ಯವನ್ನು ಹದಗೊಳಿಸಿದ ಶ್ರೇಯಸ್ಸು ಮೇಲಿನ ಮೂರು ಕೃತಿಗಳಿಗೂ ಸಲ್ಲುತ್ತದೆ. "ಇಂಗ್ಲೀಷ್ ಭಾಷೆಯ ಸಂಪರ್ಕದ ಗಂಧವೂ ಇಲ್ಲದಿದ್ದ ಕಾಲದಲ್ಲಿ ಸ್ವತಂತ್ರವಾಗಿ ರಚಿತವಾದ ಸತ್ವಪೂರ್ಣ ಕಥಾನಕಗಳಿವು"[೪] ಎನ್ನುವ ಹೇಳಿಕೆ ಯುಕ್ತವಾದ ವಿಶ್ಲೇಷಣೆಯೇ ಆಗಿದೆ.

1842ರಲ್ಲಿ ಜಾನ್ ಬನ್‌ಯನ್ ನ 'ದಿ ಪಿಲ್‌ಗ್ರಿಮ್ಸ್ ಪ್ರೋಗ್ರೆಸ್', 1857 ಡ್ಯಾನಿಯಲ್ ಡಪೋನ 'ರಾಬಿನ್ಸನ್ ಕ್ರೂಸೋ' ಕನ್ನಡಕ್ಕೆ ಅನುವಾದವಾದವು. ಮರಾಠಿಯಿಂದ ಪದಮಂಜಿಯವರ

---

೩. ಸುರೇಶ ಪಾಟೀಲ (ಸಂಶೋಧನಾ ಮಾಲಿಕೆ) ಕನ್ನಡ ಕಾದಂಬರಿಗಳಲ್ಲಿ ರಾಜಕೀಯ ವಸ್ತುವಿನ್ಯಾಸ, ಪು. ಸಂ. ೧೪ ೨೦೦೮

೪. ಶ್ರೀನಿವಾಸ ಹಾವನೂರ (ಲೇ) ಕನ್ನಡ ಮೊದಲ ಕಾದಂಬರಿಗಳ ಚಾರಿತ್ರಿಕ ಹಿನ್ನೆಲೆ ಪ್ರಜಾವಾಣಿ ಆಗಸ್ಟ್ ೧೯೯೩

'ಯಮುನಾ ಪರ್ಯಟನ' (1869) ಬಂಗಾಳಿಯಿಂದ ಬಂಕಿಮಚಂದ್ರರ 'ದುರ್ಗೇಶನಂದಿನಿ' (1885) ತೆಲುಗಿನಿಂದ ವೀರೇಶಲಿಂಗಂ ಪಂತಲು ಅವರ 'ವಿವೇಕ ಚಂದ್ರಿಕೆ' (1895) ಮಲಯಾಳಿಯಿಂದ ಮುಳಿಯಲ್ ಅವರ ಸುಕುಮಾರಿ' (1899) 'ದುರ್ಗೇಶನಂದಿನಿಗೆ' ಬರೆದ ಇಂಗ್ಲೀಷ್ ಪೀಠಿಕೆಯಲ್ಲಿ ವೆಂಕಟಾಚಾರ್ಯರು 'ನಾವೆಲ್' ಪದವನ್ನು ಬಳಸಿದರು. ಬಿ. ವೆಂಕಟಾಚಾರ್ಯರು 1900 ರ ವೇಳೆಗೆ ಬಂಗಾಳಿಯ 'ಆನಂದಮಠ', 'ದೇವಿಚೌಧುರಾಣಿ', 'ರಜಿನಿ', ವಿಷವೃಕ್ಷ, ಮೊದಲಾದ ಸಾಮಾಜಿಕ ಕಾದಂಬರಿಗಳನ್ನು ಅನುವಾದಿಸಿದರು. "ವೆಂಕಟಾಚಾರ್ಯರು ಬಂಗಾಳಿ ಕಾದಂಬರಿಗಳ ಭಾಷಾಂತರಗಳಿಂದ ಕಾದಂಬರೀ ಸಾಹಿತ್ಯ ಪರಿಚಯಮಾಡಿಕೊಟ್ಟ ಮೊದಲಿಗರು."[೫] ಎನ್ನುವ ಕಿತ್ತೂರರ ಮಾತು ಆರಂಭದ ಅವರ ಶ್ರಮ ಹಾಗು ಸಾರ್ಥಕತೆಯನ್ನು ಪ್ರಚುರಪಡಿಸುತ್ತದೆ.

ಹೊಸಗನ್ನಡದ 'ಮುಂಗೋಳಿ' ಎಂಬ ಬಿರುದಿಗೆ ಪಾತ್ರವಾದ ಮುದ್ದಣ್ಣ (1869–1900) ಹಳೆಯ ಮತ್ತು ಹೊಸ ಸಂಧಿಗಳ ಸಮಯಗಳ ಸಂಕೇತ. ಇವನು "ಪದ್ಯಂ ವದ್ಯಂ, ಗದ್ಯಂ ಹೃದ್ಯಂ"[೬] ಎಂದು ಸಾರಿ ಗದ್ಯದಲ್ಲಿಯೇ ಕೃತಿ ರಚಿಸತೊಡಗಿದನು. ಈತನ ತಿಳಿಯಾದ ಹಳೆಗನ್ನಡ ಹಾಗೂ ಹೊಸಗನ್ನಡ ಪ್ರಯೋಗಗಳಲ್ಲಿ ಪ್ರಸನ್ನ ಗದ್ಯದ ಹೊಳಪುಗಳನ್ನು ಗುರುತಿಸಬಹುದು. ಮುದ್ದಣ್ಣನ 'ಗೋದಾವರಿ' ಎಂಬ ಕಾದಂಬರಿಯ ಪರಿಚ್ಛೇದ ದೊರಕಿರುವುದರಿಂದ ಗದ್ಯವನ್ನು ಹದಗೊಳಿಸುವ ಆಂತರಿಕ ಅಭೀಪ್ಸೆಗೆ ಮಾರ್ಗವೊಂದು ತೆರೆದಂತೆ ಕಾಣುತ್ತದೆ. ಅದನ್ನು ಮುಗಿಸುವಷ್ಟು ಆಯಸ್ಸು ಆತನಿಗೆ ಇರಲಿಲ್ಲವಾದ್ದರಿಂದ ಅವನ ಪ್ರಯತ್ನ ಮುಂದಿನ ಬರಹಗಳಿಗೆ ಮಾರ್ಗಸೂಚಿಯಾಯಿತು. ಜೊತೆಗೆ ಹಳೆಗನ್ನಡದ ಭಾಷೆಯ ಬಿಗಿ ಕ್ರಮೇಣ ಸಡಿಲಾಗುತ್ತಾ ಸರಳತೆ ಹಾಗೂ ಹೃದಯಂಗಮತೆಯ ಕಡೆಗೆ ತಿರುಗುವುದನ್ನು ಕಾಣುತ್ತೇವೆ. 1975 ಸುಮಾರಿಗೆ ಪ್ರಕಟವಾದ ಗಂಗಾಧರ ಮಡಿವಾಳೇಶ್ವರ ತುರುಮುರಿಯವರ 'ಬಾಣ' ಕಾದಂಬರಿಯ ಶೈಲಿ ಹೊಸಗನ್ನಡಕ್ಕೆ ಸಮೀಪವಾಗಿದೆ.

ಕನ್ನಡದಲ್ಲಿ ಕಾದಂಬರಿಗಳು ರೂಪಗೊಳ್ಳುತ್ತಾ ಬಂದಂತೆ ಬ್ರಿಟೀಷ್ ಆಡಳಿತದಿಂದಾಗಿ ಬಂದ ಹೊಸ ಶಿಕ್ಷಣದ ಪದ್ಧತಿಯಿಂದ ಪ್ರಭಾವಿತಗೊಂಡ ಒಂದು ವರ್ಗ ತಮ್ಮ ಬಿಡುವಿನ ಸಮಯದಲ್ಲಿ ಬೇರೆ ಭಾಷೆಗಳಿಂದ ಕನ್ನಡಕ್ಕೆ ಕಾದಂಬರಿಗಳನ್ನು ಅನುವಾದಿಸತೊಡಗಿದರು. ಅದರಲ್ಲಿ ಮುಖ್ಯವಾದ ಎಜ್ ವರ್ಥ್‌ಳ 'ನಿರ್ಭಾಗ್ಯ ಮುರಾದ' (ಅನು: ಬಾಪುಸುಬ್ಬರಾಯ), ಎಚ್. ಟೇಲರನ 'ಸಿಸಿಲಿಯನ್ ಸಮ್ಮರ್' ಎಂಬ ಕೃತಿ 'ಕನ್ಯಾವಿತಂತು' (ಅನು: ಶ್ರೀಕಂಠೇಗೌಡ) ಎಂಬುದಾಗಿ ಅನುವಾದಗೊಂಡಿದೆ. ಥಾಮಸ್ ಡೇ ಅವರ 'ದಿ ಹಿಸ್ಟರಿ ಸ್ಯಾಂಡ್ ಫರ್ಡ್ ಅಂಡ್ ಮಾರ್ಟಿನ್' ಎಂಬ ಕೃತಿಯನ್ನು 1897ರಲ್ಲಿ 'ಸುಮತಿ ಮದನ ಕುಮಾರ ಚರಿತೆ' ಎಂಬುದಾಗಿ ಎಂ.ಎಸ್. ಪುಟ್ಟಣ್ಣ ಅನುವಾದಿಸಿದ್ದಾರೆ.

ಗಂಗಾಧರ ಮುಡಿವಾಳೇಶ್ವರ ತುರಮುರಿಯವರು ಬಾಣ 'ಕಾದಂಬರಿ'ಯನ್ನು (1875) ಕನ್ನಡಕ್ಕೆ ಅನುವಾದಿಸಿದ್ದಾರೆ. ಸರಳವಾಗಿ ಸುಂದರವಾಗಿ ರೂಪುಗೊಂಡಂತಹ ಈ ಕಾದಂಬರಿ ಹೊಸಗನ್ನಡ ಗದ್ಯಶೈಲಿಗೆ ಒಂದು ಕಾಣಿಕೆಯಾಗಿ ಸಲ್ಲುತ್ತದೆ. ಎನ್ಕೆ, ಅವರು ಹೇಳುವಂತೆ "ತುರಮುರಿಯವರ 'ಕನ್ನಡ ಕಾದಂಬರಿ'ಯ ಗದ್ಯ ಮುಂದಿನ ಕಾದಂಬರಿಗಳಿಗೆ, ಕಾದಂಬರಿ ಶೈಲಿಗೆ ಮಾರ್ಗದರ್ಶಿಯಾಯಿತು"[೭]. ಬಿ. ವೆಂಕಟಾಚಾರ್ ಹಾಗೂ ಗಳಗನಾಥರು ಕನ್ನಡ ಕಾದಂಬರಿಯನ್ನು ಸುಗಮವಾದ ಹಾದಿಯಲ್ಲಿ ಮುನ್ನಡೆಸಿಕೊಂಡು ಹೋದರು. ಗಳಗನಾಥರು ಮರಾಠಿ ಕಾದಂಬರಿಕಾರರಾದ ಹರಿನಾರಾಯಣ ಅಪ್ಟೆಯವರ 'ಗಡ ಅಲಾಪಣಿ ಸಿಂಹಗೇಲಾ' ಎಂಬ ಕೃತಿಯನ್ನು 'ಕಮಲ ಕುಮಾರಿ' ಎಂಬ ಹೆಸರಿನಲ್ಲಿ

---

೫. ಕೃಷ್ಣಮೂರ್ತಿ ಕಿತ್ತೂರ : ಗಳಗನಾಥರು ಮತ್ತು ಅವರ ಕಾದಂಬರಿಗಳು ಪು. ಸಂ. ೩೩೩

೬. ಜಿ. ವೆಂಕಟಸುಬ್ಬಯ್ಯ : ಮುದ್ದಣನ ಮೂರು ರಾಮಾಯಣಗಳು ರಾಮಾಶ್ವಮೇಧದ ಮೊದಲನೇ ಆಶ್ವಾಸ ಪು. ಸಂ. ೮ ೨೦೦೭

೭. ಶಂಕರ ಪಾಟೀಲ : (ಸಂ) ಕಾದಂಬರಿ ದರ್ಶನ ಪು. ಸಂ. ೧೧, ಪುರಾಣಿಕ ಸತ್ಕಾರ ಸಮಿತಿ, ಹುಬ್ಬಳ್ಳಿ ೧೯೭೪.

ಶಬ್ದಶಃ ಭಾಷಾಂತರ ಮಾಡಿದ್ದಾರೆ. ಇಲ್ಲಿ ಗಳಗನಾಥರ ಶೈಲಿಯ ಸರಳತೆಯಿಂದ ಜನರ ಅಂತಃಕರಣವನ್ನು ಮುಟ್ಟಲು ಸಮರ್ಥರಾದರು. ಅಂತೆಯೇ ಅವರು 'ಕುರುಕ್ಷೇತ್ರ' 'ಈಶ್ವರೀ ಸೂತ್ರ' 'ಛತ್ರಪತಿ' 'ಮರಾಠರ ಅಭ್ಯುದಯ' 'ರಾಜರಾಜಸಿಂಹ' 'ಧಾರ್ಮಿಕ ತೇಜ' – ಮೊದಲಾದ ಐತಿಹಾಸಿಕ ಕಾದಂಬರಿಗಳನ್ನು ಅನುವಾದಿಸಿದ್ದಾರೆ. ಇಲ್ಲೆಲ್ಲ ಗಳಗನಾಥರ ಬರವಣಿಗೆಯ ಹೃದಯವೇದಕತೆಗಿಂತ ಮಹಾರಾಷ್ಟ್ರದ ವೀರರ ಸಾಹಸ ಕೃತಿಗಳ ವರ್ಣನೆಗಳೆ ಹೆಚ್ಚು ಕಾರಣವಾಗಿವೆ. ಅಲ್ಲದೆ 'ಮಾದವ ಕರುಣಾವಿಲಾಸ', 'ಪ್ರಬುದ್ಧಪದ್ಮನಯನ', 'ಕುಮುದಿನಿ' ಎಂಬ ಸ್ವತಂತ್ರ ಕಾದಂಬರಿಗಳನ್ನು ರಚಿಸಿದ್ದಾರೆ. ಈ ಕೃತಿಗಳು ಜನತೆಯಲ್ಲಿ ಸೃಜನಶೀಲ ಪ್ರವೃತ್ತಿಯನ್ನು ವಾಚನಾಭಿರುಚಿಯನ್ನು ಬೆಳೆಸಿದವು. ಕಾದಂಬರಿ ಕ್ಷೇತ್ರದಲ್ಲಿ ಹುಲುಸಾಗಿ ಬೆಳೆ ತಂದಂತಹ ಇವರಿಬ್ಬರನ್ನು ಕುರಿತು ರಂ. ಶ್ರೀ. ಮುಗಳಿಯವರು "ಚಿರ ಸ್ಮರಣೀಯರಾದ ಬಿ. ವೆಂಕಟಾಚಾರ್ಯರು, ಗಳಗನಾಥರು, ಬಂಗಾಲಿ ಮರಾಠಿ ಸಾಹಿತ್ಯ ಭಂಡಾರದಿಂದ ಬೆಲೆಯುಳ್ಳ ಕೃತಿಗಳನ್ನು ತಂದು ತೆರವಾಗಿದ್ದ ಕನ್ನಡ ಕಣಜವನ್ನು ರಾಶಿಯಾಗಿ ತುಂಬಿದರು. ಭಾಷಾಂತರಿತ ಕಾದಂಬರಿಗಳೇ ಹೊಸಗನ್ನಡದ ಮೊದಲಗಿತ್ತಿಯರಂತೆ ಮೆರೆದವು. ಹೊಸ ಅಭಿರುಚಿಗೆ ಅವೇ ಕಾರಣವಾದವು"[೮] ಎಂದು ಅಭಿಪ್ರಾಯಪಟ್ಟಿದ್ದಾರೆ. ಗಳಗನಾಥರ 'ಕುಮುದಿನಿ' (1913) ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಮೊದಲನೆಯ ಕಾದಂಬರಿಯಾಗಿದೆ. ಇವುಗಳ ನಂತರ ಬಂದ ಗುಲವಾಡಿ ವೆಂಕಟರಾಯರ 'ಇಂದಿರಾಬಾಯಿ' (1899) ಇದರ ಇನ್ನೊಂದು ಶೀರ್ಷಿಕೆ 'ಸದ್ಧರ್ಮವಿಜಯ'. ಇದೇ ಕೃತಿಯು ನೀತಿಪ್ರಧಾನ ಎಂಬುದನ್ನು ತೋರಿಸುತ್ತದೆ. ಪರಂಪರಾಗತ ನಂಬಿಕೆ ಕಟ್ಟಲೆಗಳು, ಇವುಗಳ ಕೋಟೆಯಂತಿರುವ ಧಾರ್ಮಿಕ ಮಠಗಳು ಇವನ್ನು ಬಯಲಿಗೆಳೆದು ಸುಧಾರಣೆಯ ಅಗತ್ಯವನ್ನು ಬೆರಳಿಟ್ಟು ತೋರಿಸುತ್ತದೆ. ಎಂ.ಎಸ್. ಪುಟ್ಟಣ್ಣನವರ (1854–1930) 'ಮಾಡಿದ್ದುಣ್ಣೋ ಮಹಾರಾಯ' (1915) ಇಲ್ಲಿನ ಮನುಷ್ಯರು ಸ್ವಭಾವದಲ್ಲಿ, ಅದರ ವೈವಿಧ್ಯ–ವೈಚಿತ್ರ್ಯಗಳಲ್ಲಿ ಆಸಕ್ತಿ ಇರುವವರು. ಜೊತೆಗೆ ಪುಟ್ಟಣ್ಣನವರು ಕ್ರಿಯೆ ನಡೆಯುವ ಆವರಣವನ್ನು ಜೀವಂತವಾಗಿ ಸೃಷ್ಟಿಸಿಬಿಡುತ್ತಾರೆ. ವೆಂಕಟಾಚಾರ್ಯ, ಗಳಗನಾಥರು, ಎಂ.ಎಸ್.ಪುಟ್ಟಣ್ಣ ಇವರಿಂದ ಪ್ರಾರಂಭದಲ್ಲಿಯೇ ಕನ್ನಡ ಕಾದಂಬರಿ ಮನರಂಜನೆಯ ಸಾಧನವಾಗದೆ, ಜೀವನದಲ್ಲಿ ಗಂಭೀರವಾಗಿ ವೀಕ್ಷಿಸುವ ಕ್ರಿಯೆಯಾಯಿತು. ಟಿ.ಪಿ. ಅಶೋಕರವರು ಕಾದಂಬರಿ ಪ್ರಕಾರವನ್ನು "ಪ್ರಾಚೀನ ಕಥನಸಾಹಿತ್ಯದ ಮುಂದುವರಿಕೆ ಎನ್ನುವುದು ತೀರ ಸರಳವಾದ ಕಾದಂಬರಿ ಮೀಮಾಂಸೆ"[೯] ಎಂಬುದಾಗಿ ಸ್ಪಷ್ಟಗೊಳಿಸಿದ್ದಾರೆ.

ಇಪ್ಪತ್ತನೆಯ ಶತಮಾನದಲ್ಲಿ ಕಾದಂಬರಿ ಕ್ಷೇತ್ರವೂ ಹುಲುಸಾಗಿ ಬೆಳೆಯಿತು. 1928ರಲ್ಲಿಯೇ ಶಿವರಾಮಕಾರಂತರ 'ದೇವದೂತರು' ಪ್ರಕಟವಾಗಿತ್ತು. 1933ರಲ್ಲಿ ಬೆಟಗೇರಿ ಕೃಷ್ಣಶರ್ಮರ (ಆನಂದಕಂದ) 'ಸುದರ್ಶನ' ಕಾದಂಬರಿಯೂ ಶಿವರಾಮಕಾರಂತರ 'ಚೋಮನದುಡಿ'ಯೂ ಪ್ರಕಟವಾದವು. 1934ರಲ್ಲಿ ರಂ.ಶ್ರೀ. ಮುಗಳಿಯವರ 'ಬಾಳುರಿ', ಅ.ನ. ಕೃಷ್ಣರಾಯರ 'ಜೀವನ ಯಾತ್ರೆ' ಮತ್ತು 'ಉದಯರಾಗ' 1939 ರಲ್ಲಿ ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಪ್ರಕಟವಾದವು. ಕನ್ನಡದಲ್ಲಿ ಕಾದಂಬರಿಯ ಯುಗ ಪ್ರಾರಂಭವಾದಂತಾಯಿತು. ಡಾ. ಅಮೂರರು "ಕನ್ನಡ ಕಾದಂಬರಿಯ ಮೂಲಸತ್ವ ವಾಸ್ತವವಾದಿ ರೀತಿಯಲ್ಲಿದೆ ಎಂದು ಹೇಳಿ ಅದರ ಬೇರುಗಳನ್ನು ಗುಲ್ವಾಡಿಯವರ ಇಂದಿರಾಬಾಯಿ (1899) ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ (1915) ಕಾದಂಬರಿಗಳಲ್ಲಿ ಶೋಧಿಸಲು ಯತ್ನಿಸುತ್ತಾರೆ."[೧೦]

ಪಾಶ್ಚಾತ್ಯ ಪ್ರಭಾವದಿಂದ ಕನ್ನಡಕ್ಕೆ ಅನುವಾದಗೊಂಡಂತಹ ಕಾದಂಬರಿಗಳಲ್ಲಿ ಸಾಂಪ್ರದಾಯಿಕ ಚೌಕಟ್ಟಿಗೆ ಒಳಪಟ್ಟಿದ್ದಾಗ್ಯೂ ಮನರಂಜನೆಯ ಜೊತೆಗೆ ನೀತಿಬೋಧನೆ ಕೂಡ ಕೃತಿಯ ಮುಖ್ಯ

೮. ರಂ. ಶ್ರೀ. ಮುಗಳಿ : ಸಾಹಿತ್ಯೋಪಾಸನೆ ಪು. ಸಂ. ೧೧, ಶಾರದ ಮಂದಿರ, ಮೈಸೂರು ೧೯೬೩

೯. ಸುರೇಶ್ ಪಾಟೀಲ : ಕನ್ನಡ ಕಾದಂಬರಿ ಪರಂಪರೆ, ಪು. ಸಂ. ೧೯.

೧೦. ಜಿ.ಎಸ್. ಅಮೂರ : ಕನ್ನಡ ಕಾದಂಬರಿಯ ಬೆಳವಣಿಗೆ ಪು. ಸಂ. ೧೨, ಬೆಂಗಳೂರು ವಿಶ್ವವಿದ್ಯಾಲಯ ೧೯೮೩.

ಆಶಯವಾಗಿದೆ. ನಂತರ ಬಂದಂತಹ ಸ್ವತಂತ್ರ ಕೃತಿಗಳು ಹೊಸಯುಗಕ್ಕೆ ಕಾಲಿಟ್ಟಂತೆ. ಪಾಶ್ಚಾತ್ಯ ಸಾಹಿತ್ಯದ ಅಧ್ಯಯನ ಹೆಚ್ಚಾಗುತ್ತಾ ಹೋದಂತೆ ಸಮಕಾಲೀನ ಸಮಾಜದಲ್ಲಿ ಕಾಣುವಂತಹ ಸಾಮಾಜಿಕ ಏರು ಪೇರುಗಳ ಚಿತ್ರಣ, ವ್ಯಕ್ತಿ – ಕುಟುಂಬ – ಸಮಾಜ – ರಾಷ್ಟ್ರ – ಪ್ರಪಂಚ – ವಿಶ್ವ ಈ ಸಂಬಂಧಗಳು ಕಾದಂಬರಿಗಳಲ್ಲಿ ತಂತ್ರದ ಹೊಸ ಹೊಸ ಪ್ರಯೋಗಗಳು, ವ್ಯಕ್ತಿ ವ್ಯಕ್ತಿಗಳ ಸಂಬಂಧಿ, ವ್ಯಕ್ತಿಗತವಾದ ಸುಖ–ದುಃಖಗಳು ಮಾನಸಿಕ ಹರ್ಷೋನ್ಮಾದಗಳು, ಓದಲು ಸಂತೋಷವಾಗುವಂತಹ ಸ್ಪಷ್ಟ ಶೈಲಿ, ವಸ್ತು, ಭಾಷೆ, ದೃಷ್ಟಿಕೋನಗಳ ನಾವಿನ್ಯತೆಯಲ್ಲಿ ಕಾದಂಬರಿ ಪ್ರಕಾರವೂ ವೈವಿಧ್ಯಮಯವಾಗಿ ಬೆಳೆಯತೊಡಗಿತು.

ಹೀಗೆ ವೈವಿಧ್ಯಮಯವಾಗಿ ಬೆಳೆದು ಬಂದಂತಹ ಕಾದಂಬರಿಯನ್ನು ಅಧ್ಯಯನ ಹಾಗೂ ವಿಶ್ಲೇಷಣೆಯ ದೃಷ್ಟಿಯಿಂದ, ಐತಿಹಾಸಿಕ ಹಾಗೂ ಪೌರಾಣಿಕ ರಾಜಕೀಯ ಸಾಮಾಜಿಕ ಪತ್ತೆದಾರಿ ಕಾದಂಬರಿಗಳಾಗಿ ವಿಭಜನೆ ಮಾಡಿಕೊಂಡಾಗ ಕ್ರಮಬದ್ಧವಾದ ಅಧ್ಯಯನಕ್ಕೆ ಅನುವು ಮಾಡಿಕೊಡುತ್ತದೆ. ಇತಿಹಾಸವನ್ನು ಇತಿಹಾಸವಾಗಿ ಓದುವ ಅಭ್ಯಾಸ ಬಹಳ ಜನಕ್ಕೆ ಇರುವುದಿಲ್ಲ. ಆದುದರಿಂದ ಕಾದಂಬರಿ ರೂಪದಲ್ಲಿ ಪ್ರಾಚೀನ ಇತಿಹಾಸದ ಪರಿಚಯ, ಅರಿವು ಮಾಡಿಕೊಡಬೇಕು ಎಂಬ ಉದ್ದೇಶದಿಂದಲೆ, ಐತಿಹಾಸಿಕ ಕಾದಂಬರಿಗಳು ರಚನೆಯಾಗಲು ಕಾರಣವಾಗಿವೆ.

ಅಧ್ಯಾಯ –೨

ಸ್ತ್ರೀ ಸಂವೇದನೆ ಅರ್ಥ ಮತ್ತು ಸ್ವರೂಪ

ಅಧ್ಯಾಯ – ೩

ಸ್ತ್ರೀ ಸಂವೇದನೆ ಅರ್ಥ ಮತ್ತು ಸ್ವರೂಪ

"ಸ್ತ್ರೀ ವಾದ ಅಥವಾ 'ಫೆಮಿನಿಸಂ' ಎನ್ನುವುದು ಒಂದು ರಾಜಕೀಯ ಸಿದ್ಧಾಂತ. ಅದು ಸ್ತ್ರೀ ಪುರುಷರ ನಡುವಿನ ಲಿಂಗಾಧಾರಿತ ತಾರತಮ್ಯಗಳ ಪ್ರಚಲಿತ ವ್ಯವಸ್ಥೆಯನ್ನು ಬದಲಾಯಿಸಲು ಹಕ್ಕೊತ್ತಾಯಿಸುತ್ತದೆ. ಸಾಮಾಜಿಕ, ರಾಜಕೀಯ, ಆರ್ಥಿಕ ಮುಂತಾದ ಬದುಕಿನ ನೆಲೆಗಳಲ್ಲಿ ಸ್ತ್ರೀ–ಪುರುಷರನ್ನು ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಗಾಗಿ ನಡೆಯುವ ಹೋರಾಟವೇ ಅದರ ಮುಖ್ಯ ಕಾರ್ಯ ವಿಧಾನವಾಗಿದೆ". [೧]

ಸ್ತ್ರೀ ಎಂದಿನ ತನಕ ಪುರುಷ ನಿರ್ಮಿತ ಮಾನಸಿಕ, ವೈಚಾರಿಕ ಚೌಕಟ್ಟಿನಲ್ಲಿ ಬದುಕಬೇಕಾಗುವುದೋ ಅಂದಿನ ತನಕ ನಿಜವಾದ ಅರ್ಥದಲ್ಲಿ ಬದುಕಲು ಸ್ವತಂತ್ರಳಾಗುವುದಿಲ್ಲ. ಈ ಕೂಗಿನಿಂದ ಸ್ತ್ರೀಯು ಎಚ್ಚರಗೊಂಡು ಪರಿವರ್ತಿತವಾಗಿ ಸ್ವತಂತ್ರಳಾಗಲು ಹೊಸ್ತಿಲನ್ನು ಮೆಟ್ಟಿ ಹೊರಗೆ ಬಂದಿರುವುದನ್ನು ನಾವು ಆಧುನಿಕ ಕಾಲದಲ್ಲಿ ನೋಡಬಹುದು ಎಂಬುದು ಸಿಮೋನ್ ದ ಬೋವಾರ ಅಭಿಪ್ರಾಯವಾಗಿದೆ.

"ಮಾನವರೆಲ್ಲರ ವಿಕಾಸಶೀಲ ಬೆಳವಣಿಗೆ ಹಾಗೂ ಅವರ ನಿಜವಾದ ಪುನರ್ ಶಿಕ್ಷಣದ ಮೂಲಕ ಸ್ತ್ರೀವಾದವು ಎತ್ತಿ ಹಿಡಿದ ಸಮಾನತೆಯ ಗುರಿಯನ್ನು ಸಾಧಿಸಬಹುದೆಂಬುದಾಗಿದೆ" ಎಂಬ ವಿಚಾರವನ್ನು ಮಿಲೆಟ್ ತಿಳಿಸುತ್ತಾರೆ.

ಇಂಗ್ಲೀಷ್‌ನಲ್ಲಿಯ Sensibitity ಶಬ್ದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಸಂವೇದನೆ' ಶಬ್ದ ಇತ್ತೀಚೆಗೆ ಬಳಕೆಯಲ್ಲಿ ಬಂದಿದೆ. ಸಂವೇದನೆ ಶಬ್ದ ಬಹಳ ಪುರಾತನವಾಗಿದ್ದು, 'ಅರಿವು' ನೋವು ಮತ್ತು 'ಸಹಾನುಭೂತಿ' ಮೊದಲಾದ ಅರ್ಥಗಳನ್ನು ಪ್ರಕಟಿಸಲು ಉಪಯೋಗವಾಗುತ್ತಿತ್ತು. Sensibitity ಕೂಡ ಐದಾರು ನೂರು ವರ್ಷಗಳಾಷ್ಟಾದರೂ ಹಳೆಯದು. ಶಬ್ದಕೋಶದಲ್ಲಿ ಅದರ ಮೊದಮೊದಲಿನ ಅರ್ಥ "Power of feeling or perception"[೨] ಎಂದಿದ್ದು ಕ್ರಮೇಣ ಅದು ಅರ್ಥ ವಿಸ್ತಾರವನ್ನು ಪಡೆಯತೊಡಗಿತು. ಅಂದರೆ ಸಂವೇದನೆ ಎಂದರೆ ಮನುಷ್ಯ ಬದುಕಿನ ನೋವು – ನಲಿವುಗಳನ್ನು ಪ್ರತಿಬಿಂಬಿಸುವ ಮಾನಸಿಕತೆ ಎನ್ನಬೇಕಾಗುತ್ತದೆ. ಸ್ತ್ರೀಯರು ತಾವು ಅನುಭವಿಸಿದ ಯಾತನೆ, ಶೋಷಣೆಗಳ ಜೊತೆಗೆ ಸಮಸಮಕ್ಕೂ ದುಡಿಯುವ ಎದೆಗಾರಿಕೆ ಮತ್ತು ಕೆಲವು ಸಂದರ್ಭಗಳಲ್ಲಿ ಅವರಿಗಾದ ಆನಂದದ ಅನುಭೂತಿಯನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಬಿಚ್ಚಿಟ್ಟಾಗ ಅದು ಸ್ತ್ರೀ ಸಂವೇದನೆ ಆಗುತ್ತದೆ. ಈ ಸ್ತ್ರೀವಾದಿ ಚಿಂತನೆಯ ಸಾಹಿತ್ಯ ಕೃತಿಯೊಂದು ಹೊರಬಂದಾಗ ಅಲ್ಲಿ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಹುಳುಕುಗಳು ಕಂಡುಬರುತ್ತವೆ. ವ್ಯವಸ್ಥಿತ ಬದುಕನ್ನು ರೂಪಿಸುವ ಆಶಯವೊಂದು ಮೂಡಿಬರುತ್ತದೆ.

ಸಂವೇದನೆ ಎಂದರೆ ಅನಿಸಿಕೆ, ಅನುಭವವೆಂದು ಅರ್ಥ. ಆದರೆ ಸಂವೇದನೆಯ ವ್ಯಾಖ್ಯೆಗಳನ್ನು ಕೊಡುವುದೆಂದರೆ ಮಳಲೊಳಗಿನ ಚಿಕ್ಕ ಚಿಕ್ಕ ಹರಳುಗಳನ್ನು ಹೆಕ್ಕಿ ತೆಗೆದಂತೆ. "ಇಂಗ್ಲೀಷಿನ ಸೆನ್ಸಿಬಿಲಿಟಿ ಪದ ಸಂವೇದನೆ ಎಂಬ ರೂಪದಲ್ಲಿ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬಹಳ ಹಿಂದಿನಿಂದ ಬಳಕೆಗೊಳ್ಳಲ್ಪಟ್ಟಿದೆ. ಯಾವುದೇ ಅನುಭವಕ್ಕೆ ವ್ಯಕ್ತಿಯೊಬ್ಬನ ವಿಶಿಷ್ಟವಾದ ಭಾವನಾತ್ಮಕ ಮತ್ತು ಬೌದ್ಧಿಕ ಪ್ರತಿಕ್ರಿಯೆ ಎಂಬ ಅರ್ಥದಿಂದ ಅದೊಂದು ತಾತ್ವಿಕ ಪರಿಭಾಷೆಯಾಗಿ ಹೊಸ ಮೈಯನ್ನು ಪಡೆದುಕೊಂಡು ದಲಿತ ಸಂವೇದನೆ,

---

೧. ಬಿ.ಎನ್. ಸುಮಿತ್ರ ಬಾಯಿ : ಸ್ತ್ರೀವಾದ, ಪು. ಸಂ. ೧, ಶಾಂತಲ ಪ್ರಕಾಶನ ೧೯೯೮

೨. ಕೀರ್ತಿನಾಥ ಕುರ್ತಕೋಟಿ: ವ್ಯಾಸಂಗ : ಪ್ರೊ ಸ.ಸ. ಮಾಳವಾಡ ಅಭಿನಂದನ ಗ್ರಂಥ : ಸಂ: ಸದಾನಂದ ಕನವಳ್ಳಿ : ವೀರಶೈವ ಅಧ್ಯಯನ ಸಂಸ್ಥೆ ಗದಗ : ಪುಟ . ೩೫೭

ಮುಸ್ಲಿಂ ಸಂವೇದನೆ, ಸ್ತ್ರೀ-ಸಂವೇದನೆ ಎನ್ನುವ ಸೈದ್ಧಾಂತಿಕ ನೆಲೆಗಳಲ್ಲಿ ಯಾರು ಹೆಣ್ಣಾಗಿ ಹೆಣ್ಣಿನ ಅನುಭವ ಲೋಕವನ್ನು ತನ್ನದಾಗಿಸಿಕೊಳ್ಳಲು ಸಾಮರ್ಥ್ಯದಿಂದ ಬರಿಯಬಲ್ಲರೋ ಅಲ್ಲಿ ಸ್ತ್ರೀ ಸಂವೇದನೆ ಪ್ರಕಟಗೊಳ್ಳುತ್ತದೆ."

ಪಾರಿಭಾಷಿಕವಾಗಿ ಅನುಭವವೊಂದಕ್ಕೆ ಭಾವನಾತ್ಮಕ ಹಾಗೂ ಬೌದ್ಧಿಕ ಪಾತಳಿಯ ವ್ಯಕ್ತಿ ವಿಶಿಷ್ಟವಾದ ಪ್ರತಿಕ್ರಿಯೆಯನ್ನು 'ಸಂವೇದನೆ' ಎಂದು ಕರೆಯುತ್ತಾರೆ. ಬಾಹ್ಯಾನುಭವವನ್ನು ನಿರ್ದಿಷ್ಟ ಪ್ರಜ್ಞೆಯೊಂದರ ಮೂಲಕ ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ನಾವು ಸ್ತ್ರೀ-ಸಂವೇದನೆ ಎನ್ನುವ ಪರಿಕಲ್ಪನೆಯನ್ನು ಗಮನಿಸಬೇಕಾಗುತ್ತದೆ.

ಸ್ತ್ರೀಯರು ರಚಿಸಿದ ಸಾಹಿತ್ಯದಲ್ಲಿ ಮಾತ್ರ ಸ್ತ್ರೀ ಸಂವೇದನೆ ಅಭಿವ್ಯಕ್ತಿ ಇದೆ ಎನ್ನಲಾಗದು. ಕೆಲವು ಸ್ತ್ರೀಯರಲ್ಲಿ ಸಂವೇದನೆಗಳೇ ಇಲ್ಲದಿರಬಹುದು. ಪುರುಷನಲ್ಲಿ ಸ್ತ್ರೀ-ಸಂವೇದನೆ ಇರಬಾರದೆಂದಿಲ್ಲ. ಪುರುಷನು ಹೆಣ್ಣಿನ ಅನುಭವ ಲೋಕವನ್ನು ಪ್ರವೇಶಿಸಿ, ಅವಳಲ್ಲಿ ಅಡಗಿರುವ ವೇದನೆಗಳನ್ನು ತಿಳಿದುಕೊಂಡು ಬರೆಯಬೇಕು. ಅಂದರೆ ಮಾತ್ರ ಸ್ತ್ರೀ-ಸಂವೇದನೆಯು ಅಭಿವ್ಯಕ್ತವಾಗುವ ಸಾಧ್ಯತೆ ಇರುತ್ತದೆ. ಸ್ತ್ರೀ-ಸಂವೇದನೆಯ ಸ್ವರೂಪವನ್ನು ಮುಂದೆ ಸ್ಥೂಲವಾಗಿ ವಿವೇಚಿಸಲಾಗಿದೆ.

ಬದುಕಿನ ಸ್ವರೂಪ ಹಿನ್ನೆಲೆ ಸಂಬಂಧಗಳ ಗ್ರಹಿಸುವಿಕೆಯ ಸಾಮಾಜಿಕ, ಸಾಂಸ್ಕೃತಿಕ ಸಂರಚನೆಯಲ್ಲಿ ನಮ್ಮ ಬದುಕಿನ ನೆಲೆ ವೈಯಕ್ತಿಕತೆ ಮತ್ತು ಆ ವೈಯಕ್ತಿಕತೆಯ ಭಾಗವೇ ಆದ ತಾತ್ವಿಕ ಒಳನೋಟಗಳನ್ನು ಆಧರಿಸುತ್ತದೆ. ಇವು ಕಾಲ, ಸಮಾಜ, ವೃತ್ತಿಗನುಸಾರವಾಗಿ ಬದಲಾಗುವುದರಿಂದ ಮೇಲೆ ಹೇಳಿದ ಗ್ರಹಿಸುವಿಕೆಯ ಕ್ರಮ ರೀತಿ ಜಗತ್ತಿನಲ್ಲಿ ವಿಭಿನ್ನವಾಗಿದೆ. ಯಾವುದೇ ಒಂದು ಗ್ರಹಿಕೆ ಎಲ್ಲವನ್ನೂ ಎಲ್ಲರನ್ನೂ ಒಳಗೊಳ್ಳುವುದು. ಎಲ್ಲದಕ್ಕೂ ನ್ಯಾಯ ಸಲ್ಲಿಸಲು ಸಾಧ್ಯವಿಲ್ಲ. ಕಲೆ ವಿಚಾರದ ಹಾದಿಗಳೆರಡರಲ್ಲಿಯೂ ಈವರೆಗಿನ ಗ್ರಹಿಕೆಯ ನೆಲೆ ಪ್ರಧಾನವಾಗಿ ಪುರುಷ ಕೇಂದ್ರಿತ ಪುರುಷ ನೆಲೆಯಿಂದ ಬಂದದ್ದಾಗಿದೆ. ಇದಕ್ಕೆ ಕಾರಣ ಆಯಾ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ವಲಯಗಳ ಮೇಲಿನ ಪುರುಷರ ಅಚಿತಿಮವಾಗಿ ಪ್ರಧಾನವಾಹಿನಿ ಎಂದು ಕರೆಯಲ್ಪಡುವ ಮಾನ್ಯತೆ ಪಡೆದ ಸಂಸ್ಕೃತಿಯ ವಾಹಿನಿಯನ್ನು ತನ್ನ ಕೈಯಲ್ಲಿಟ್ಟುಕೊಂಡಿದ್ದರಿಂದ ಪುರುಷ, ಪುರುಷ ಕೇಂದ್ರಿತ ದೃಷ್ಟಿಕೋನದ ಸ್ವಾಮ್ಯವೇ ಮೆರೆದಾಡತೊಡಗಿತು. ಎಲ್ಲರನ್ನೂ ಎಲ್ಲವನ್ನೂ ತಾನೇ ತಿಳಿಯುವ, ಅರ್ಥೈಸುವ ನಿಯಂತ್ರಿಸುವ ಸಾಹಸ ನಡೆಯಿತು. ಸ್ತ್ರೀಯರ ಬದುಕಿನ ಸ್ವರೂಪವೇನು? ಸ್ವಭಾವವೇನು? ಗುರಿಯೇನು? ಎಲ್ಲದಕ್ಕೂ ತಾನೇ ಗುರಿ ಹೇಳಿತು. ಇಂಥ ಪ್ರಯತ್ನ ಸಹಜವಾಗಿ ತನ್ನ ಮೂಗಿನ ನೇರಕ್ಕಿದೆ. ತನ್ನ ಹಿತವನ್ನು ಪ್ರಧಾನವಾಗಿಟ್ಟುಕೊಂಡಿದೆ. ಹಾಗೆ ಮಾಡುವಾಗ ಸ್ತ್ರೀಯರ ಸ್ವಭಾವ, ಜೀವನ ತಪ್ಪಾಗಿ ತಿಳಿಸಲ್ಪಟ್ಟಿದೆ. ಸ್ತ್ರೀವಾದಿ ಪ್ರಜ್ಞೆಯ ಅರಳುವಿಕೆ ಪುರುಷ ಕೇಂದ್ರಿತ ಗ್ರಹಿಕೆಯ ಮಿತಿ ಮತ್ತು ಅಪಾಯಗಳನ್ನು ತೆರೆದು ತೋರುತ್ತದೆ.

ಸ್ತ್ರೀ ವಾದಿಯ ಮತ್ತೊಂದು ಮುಖ್ಯ ಕಾಳಜಿಯೆಂದರೆ ಲಿಂಗ ಜಾತಿಗಳ ಮೇಲಿನ ನಿಗಧಿತ ಪಾತ್ರಗಳ ಹೇರಿಕೆಯನ್ನು ಕುರಿತ ವಿರೋಧ. ಪುರುಷ ಕೇಂದ್ರಿತ ಗ್ರಹಿಕೆಯಿಂದ ಸ್ವಭಾವಗಳು ನಿರ್ಣಯಿಸಲ್ಪಟ್ಟಂತೆ ಪಾತ್ರಗಳೇ ನಿರ್ಣಯಿಸಲ್ಪಡುವವು. ಅವಳು ಹುಡುಗಿಯೇ ಸರಿ, ಅವಳಿಗೆ ಆಡಲು ಆಟಿಗೆ ಗೃಹೋಪಯೋಗಿ ವಸ್ತುಗಳನ್ನು ಕೊಡಿ. ನಾಳೆ ಆಕೆ ಹೆಂಡತಿಯಾಗುವವಳು, ತಾಯಿಯಾಗುವವಳು, ಅವಳು ಅಲಂಕೃತಳಾಗಿ, ಆತ್ಮೀಯಳಾಗಿ, ತ್ಯಾಗಿಯಾಗಿ, ಕೋಮಲಾಂಗಿಯಾಗಿ ಇರಲು ಕಲಿತರೆ ಸಾಕು. ಅದಕ್ಕೆ ಅವಳನ್ನು ಸಮಾಜ ಸಿದ್ಧಗೊಳಿಸಿ ಎನ್ನುತ್ತದೆ. ಹುಡುಗನಾದರೆ ಅವನು ವೀರ, ರಕ್ಷಕ, ವೃತ್ತಿಪರ, ಅವನು ಹಾಗೆ ಬೆಳೆಯಬೇಕೆಂಬುದು ನಿರೀಕ್ಷೆ. ಹೀಗೆ ವ್ಯಕ್ತಿ ವಿಕಾಸ ಹತ್ತಿಕ್ಕಲ್ಪಡುವದು. ಸಮಾಜದ ದೃಷ್ಟಿಯಿಂದ ಅನಾರೋಗ್ಯಕರ, ದೊಡ್ಡ ನಷ್ಟ ಈ ನಿಗದಿತ ಪಾತ್ರ ನಿರೀಕ್ಷೆಯಿಂದಾಗಿ ಎಷ್ಟೋ ಶತಮಾನಗಳ

ಹೆಂಗಸಿನ ಪ್ರತಿಭೆ ಬೂದಿಯಾಗಿವೆ. ಜೀವ ಪೋಷಣೆಯ ಕೋಮಲ ಮಾರ್ದವ ಭಾವಗಳ ಸಂತೋಷವನ್ನು ಎಷ್ಟೋ ಗಂಡು ಬದುಕುಗಳು ಕಳೆದುಕೊಂಡಿವೆ.

ಪುರುಷ ಕೇಂದ್ರಿತ ಪ್ರಜ್ಞೆಯ ಸ್ತ್ರೀಯರ ಸ್ವಭಾವ, ಶಕ್ತಿ ಮತ್ತು ಪಾತ್ರಗಳನ್ನು ನಿರ್ಣಯಿಸಿ ಆ ನಿರ್ಣಯಕ್ಕೆ ಹೊಂದುವ ಅಥವಾ ನಿರ್ಣಯದ ಅಚ್ಚಿನಲ್ಲಿ ಎರಕಹೊಯ್ದ ಮಾದರಿಗಳನ್ನು ಚಾಲ್ತಿಗೆ ಬಿಟ್ಟಿತು. ಅವೆಂಥ ಮಾದರಿಗಳು? ಗಂಡಸಿನ ಮಾನಸಿಕ, ಭೌತಿಕ, ಜೈವಿಕ ಅಗತ್ಯಗಳಿಗೆ ಹೊಂದುವಂಥವು. ಸೀತೆ, ಸಾವಿತ್ರಿ, ದಮಯಂತಿಯಂಥ ಮಾದರಿಗಳು. ಇಂಥ ಮಾದರಿಗಳ ಸೌಂದರ್ಯ, ಶೃಂಗಾರ, ಪಾತಿವ್ರತ್ಯ, ತಾಯ್ತನಕ್ಕೆ ಒತ್ತು ಬಿತ್ತು. ಒಟ್ಟಾರೆ ವಿಧೇಯಕವಾದ ಗಂಡಸಿನ ಒಲುಮೆ ಹಿರಿಮೆಯನ್ನು ಒಪ್ಪುವಂಥ ಪಾತ್ರಗಳನ್ನು ಮಾದರಿಗಳೆನ್ನಲಾಯಿತು. ಸಾರ್ವಜನಿಕ ಬದುಕಿನ ವೃತ್ತಿಪರ ಜೀವನದ ಸಾಧನೆಗಳನ್ನು ಹಿಂದಕ್ಕೆ ಎಳೆಯುವಷ್ಟು ಈ ಮಾದರಿಗಳು ಅವಳನ್ನು ಪತ್ನಿತ್ವ, ತಾಯ್ತನದ ನಿಗದಿತ ಪಾತ್ರಗಳಿಗೆ ಕಟ್ಟಿ ಹಾಕಿವೆ. ನಿಗದಿತವಾದ ಅವಳ ತಾಯ್ತನ ಮತ್ತು ಪತ್ನಿತ್ವದ ಪಾತ್ರಗಳೊಂದಿಗೆ ಸಹಜವಾಗಿ ಸ್ತ್ರೀವಾದದ ಗಮನ ಹರಿದಿದ್ದು ಅವಳ ಶ್ರಮಕ್ಕೆ ದೊರಕಿರುವ ಅಮಾನ್ಯತೆ ಅಥವಾ ನಿರ್ಲಕ್ಷ್ಯದೆಡೆಗೆ ತನ್ನ ದುಡಿಮೆಯ ನ್ಯಾಯಯುತ ಪ್ರತಿಫಲಕ್ಕಾಗಿ ಮಹಿಳೆ ಬಾಯ್ತೆಗೆಯದಂತಹ ಬದ್ಧತೆಯನ್ನು ನಮ್ಮ ಸಾಂಸ್ಕೃತಿಕ ಸಂದರ್ಭ ಅವಳಿಗೆ ತಂದೊದಗಿಸಿದೆ. ಹೆಂಗಸಿನ ಮನೆಯೊಳಗಿನ ದುಡಿತವನ್ನು ದುಡಿತವೆಂದೇ ಪರಿಗಣಿಸಿದ ಸ್ಥಿತಿ, ಹೊರಗಿನ ದುಡಿಮೆಯನ್ನು ಅಗ್ಗಕ್ಕೆ ಪಡೆಯುವ ಸ್ಥಿತಿಗಳೊಂದಿಗೆ ಹಣದೊಂದಿಗೆ ಪಡೆಯುವ ಅವಳ ದುಡಿಮೆಯನ್ನು ನಿರುತ್ತೇಜನಗೊಳಿಸುವ ಯತ್ನ ಹಲವು ರೀತಿಗಳಲ್ಲಿ ಮುಂದುವರೆದಿದೆ. ಮಹಿಳೆಯ ಶೋಷಣೆಯ ಅವಳ ಮೇಲಿನ ನಿರ್ಬಂಧದ ಅವಳ ಜೀವನದ ಅಪಮೌಲೀಕರಣದ ಬುನಾದಿಯಾಗಿ ಸಮಾಜ ಮಹಿಳೆಯ ಜೈವಿಕ ಸ್ವರೂಪವನ್ನು ಬಳಸಿಕೊಂಡಿತು. ಹೆಣ್ಣು ಗಂಡಿನ ನಡುವಿನ ಜೈವಿಕ ವ್ಯತ್ಯಾಸ ಎಲ್ಲಾ ಲಿಂಗಾಧಾರಿತ ಮೂಲ ನೆಲೆ ಜೈವಿಕ ಮೂಲ ಅಪಮೌಲ್ಯಮಾಪನ ಅವಳ ಮಾನಸಿಕ ಶಕ್ತಿಯ ಮೇಲಯೂ ದುಷ್ಪರಿಣಾಮ ಬೀರಿತು. ಮಾನಸಿಕ ಶಕ್ತಿಯ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಪೋಷಿಸಲು ಒಂದು ಅವಕಾಶ ಅಗತ್ಯ. ಅಂಥ ವಾತಾವರಣವೇ ಇಲ್ಲದಿದ್ದರೆ ಹೆಂಗಸಿನ ಬೌದ್ಧಿಕ ಆಸಕ್ತಿಗಳು ಬೆಳೆಯವದು ಹೇಗೆ? ಸ್ತ್ರೀವಾದಿ ಪ್ರಜ್ಞೆಯ ಮತ್ತೊಂದು ಮುಖವಾಗಿ ಸ್ತ್ರೀ ಸಂಸ್ಕೃತಿಯ ಶೋಧ ಮತ್ತು ಅದರ ಪುನಃರಚನೆಯ ಪ್ರಯತ್ನವನ್ನು ಕಾಣುತ್ತೇವೆ. ಜಾಗತಿಕ ಇತಿಹಾಸದಲ್ಲೇ ಪುರುಷ ಕೇಂದ್ರಿತ ಚಿಂತನೆಯ ಪ್ರಾಧಾನ್ಯತೆ ಸು.ಕ್ರಿ.ಪೂ.6ನೇ ಶತಮಾನದಿಂದ 19ನೇ ಶತಮಾನದವರೆಗೆ ಅವ್ಯಾಹತವಾಗಿ ನಡೆದುಬಂದಿರುವಂತಿದೆ. ಭಾರತದ ಸಂದರ್ಭದಲ್ಲಿ ಒಟ್ಟಾರೆಯಾದ ಈ ಹಿನ್ನಡತೆಯಿರುವದು ಸರಿ. ಆದರೆ ಪುರುಷ ಕೇಂದ್ರಿತ ಚಿಂತನೆಯ ಪ್ರಧಾನವಾಗಿರುವ ವೈದಿಕ ಸಂಸ್ಕೃತಿ ಹಾಗೂ ಈಚೆಗೆ ಬ್ರಿಟಿಷರ ಮೂಲಕ ಬಂದ ಐರೋಪ್ಯ ಸಂಸ್ಕೃತಿಗಳು ಇಲ್ಲಿಯ ಸ್ತ್ರೀ ಕೇಂದ್ರಿತವು ಆಗಿದ್ದ ದೇಶೀಯ ಸಂಸ್ಕೃತಿಗಳ ಹಲವು ಅಂಶಗಳನ್ನು ಅಂತರ್ಗತವಾಗಿಸಿಕೊಂಡಿದೆ, ರೂಪಾಂತರಗೊಳಿಸಿದೆ, ನಿರ್ನಾಮ ಮಾಡಿದೆ.

ಸಾರ್ವಜನಿಕ ಜೀವನದ ಶಕ್ತಿ ಕೇಂದ್ರಗಳ ಹಂಚಿಕೆಯಲ್ಲಿ ಸ್ತ್ರೀ ಪುರುಷರಲ್ಲಿ ಸಮತೋಲನ ಬರಬೇಕೆಂದು ಸ್ತ್ರೀ ವಾದಿ ಪ್ರಜ್ಞೆಯ ಮತ್ತೊಂದು ಮುಖ್ಯ ಕಾಳಜಿ ಸೋದರತ್ವದ ಅಗತ್ಯವನ್ನು ಸ್ತ್ರೀವಾದಿ ಪ್ರಜ್ಞೆ ಸರಿಯಾಗಿಯೇ ಗುರುತಿಸಿದೆ. ಮಹಿಳಾ ಚಳುವಳಿಗೆ ಅದೊಂದು ಪ್ರಾಥಮಿಕ ಅಗತ್ಯ. ಹೆಂಗಸಿನ ಅವನತಿಯೊಂದಿಗೆ ಬಲವಾಗಿ ಬೆಳೆದ ಪಾವಿತ್ರತೆಯ ಕಲ್ಪನೆಯನ್ನು ಸ್ತ್ರೀವಾದವು ವಿರೋಧಿಸುತ್ತದೆ.

ಪೂರ್ವ ನಿರ್ಧಾರಿತ ಲಿಂಗ ಜಾತಿಯನ್ನು ಆಧರಿಸಿ ಸ್ತ್ರೀಯನ್ನು ಕುರಿತ ಹಲವು ಆದಿಯ ಪ್ರತಿಮೆಗಳು ಸಂಕೃತಿಯಲ್ಲಿದ್ದು ವ್ಯಕ್ತಿಯು ಸಾಂಸ್ಕೃತಿಕರಣದ ಪ್ರಕ್ರಿಯೆಯಲ್ಲಿ ಅವುಗಳನ್ನು ಅಂತರ್ಗತಗೊಳಿಸಿಕೊಳ್ಳುವುದರ ಪರಿಣಾಮವಾಗಿ ಸಾಂಪ್ರದಾಯಿಕ ಲಿಂಗ ಜಾತಿ ಸ್ವರೂಪವು ನಮ್ಮ ಪ್ರಜ್ಞೆಯಲ್ಲಿ ತಳವೂರಿರುತ್ತದೆ. ಈ ಪ್ರತಿಮೆ, ಸಂಕೇತಗಳನ್ನು ಪ್ರಶ್ನಿಸುವದು, ಬದಲಿಸುವದು, ಒಡೆಯುವದು

ಸ್ತ್ರೀವಾದಿ ಪ್ರಜ್ಞೆಯ ಒಂದು ಅಗತ್ಯವಾಗಿದೆ. ಹೆಂಗಸನ್ನು ಆಳುವ ಮತ್ತು ತುಳಿಯುವ ಪ್ರವೃತ್ತಿಯಿಂದ ಗಂಡಸು ಹಾಗೂ ದಾಸ್ಯ ಮತ್ತು ಕೀಳರಿಮೆಯ ಪ್ರವೃತ್ತಿಯಿಂದ ಹೆಂಗಸು ಮುಕ್ತವಾಗಬೇಕಾಗಿದೆ. ಸ್ತ್ರೀವಾದಿ ಪ್ರಜ್ಞೆ ಬದುಕಿನ ಅಸಮತೋಲನವನ್ನು, ಏಕ ಮುಖತೆಯನ್ನು ಲಿಂಗನೀತಿಯ ಕೊರತೆಯನ್ನು ಗುರುತಿಸುತ್ತದೆ. ಲಿಂಗಾಧಾರಿತವಾದ ಶೋಷಣೆಯನ್ನು ವಿರೋಧಿಸುತ್ತದೆ. ಕುಟುಂಬವೆಂಬುದು ಮಹಿಳೆಗೆ ಅನಿವಾರ್ಯವಾಗಬಾರದು, ಆಯ್ಕೆಯ ಪ್ರಶ್ನೆಯಾಗಬೇಕು ಹಾಗೂ ಕೌಟುಂಬಿಕ ಜವಾಬ್ದಾರಿಗಳು ಸಮನಾಗಿ ಹಂಚಿಕೊಳ್ಳಬೇಕು. ತನ್ನ ಲೈಂಗಿಕ ಬದುಕಿನ ಮೇಲೆ ಮಹಿಳೆಗೆ ಸ್ವಾಮ್ಯ ಬೇಕು. ಜೀವೋತ್ಪಾದನೆಯಲ್ಲಿ ನಿರ್ಣಯಾತ್ಮಕ ಪಾತ್ರ ಬೇಕು. ದುಡಿಮೆ ಮತ್ತು ದುಡಿಮೆಯ ಪ್ರತಿಫಲದ ಮೇಲೆ ಸಮಾನ ಹಕ್ಕು ಇವೇ ಮೊದಲಾದ ಸ್ತ್ರೀ ವಾದಿ ಪ್ರಜ್ಞೆಯ ಸ್ತ್ರೀ ವಾದಿ ಚಳುವಳಿಯ ಪ್ರಮುಖ ಹಕ್ಕೊತ್ತಾಯಗಳು. ಸ್ತ್ರೀ ವಿಮೋಚನೆಯಲ್ಲಿ ಮನುಷ್ಯನ ವಿಮೋಚನೆ ಇದೆ ಎಂಬ ಸೈಮನ್ನರ ಮಾತು ಎಲ್ಲರನ್ನೂ ತಲುಪಬೇಕಾಗಿದೆ.

ಇಂದಿನ ಭಾರತೀಯ ಸಂಸ್ಕೃತಿ ಹಲವು ಕಾಲ ರೀತಿಯ ಸಂಸ್ಕೃತಿಗಳ ಸಂಘರ್ಷ, ಸ್ವಭಾವ ಸ್ವೀಕಾರಗಳನ್ನು ಹಾದು ಬಂದಿದೆ. ಈ ಸಂಸ್ಕೃತಿಗಳಲ್ಲಿ ಪಿತೃಸಂಸ್ಕೃತಿಗಳಿದ್ದಂತೆಯೇ ಸ್ತ್ರೀ ಕೇಂದ್ರಿತ ಸಂಸ್ಕೃತಿಗಳೂ ಇವೆ. ಆದಿ ಶಕ್ತಿಯು ಸ್ತ್ರೀ ಎಂಬ ಕಲ್ಪನೆ ಭಾರತದ್ದು. ಪುರುಷ ತತ್ವ ನಿಷ್ಕ್ರಿಯ ದುರ್ಬಲ ಮತ್ತು ಅಪ್ರಧಾನ ಜೀವನದ ಅತ್ಯಂತ ಮುಖ್ಯ ಹಾಗೂ ಕಠಿಣ ಸಂದರ್ಭಗಳಾದ ಬೆಳೆ, ಕ್ಷಾಮ, ರೋಗ, ಹುಟ್ಟು ಮೊದಲಾದವುಗಳ ಅಧಿದೇವತೆ ಸ್ತ್ರೀ. ಭಾರತೀಯ ಮನಸ್ಸಿನ ಅಂತಿಮ ಅಧಿಕಾರಯುಕ್ತ ದನಿ ಯಾವಾಗಲೂ ಸ್ತ್ರೀಯಾತ್ಮಕವಾದದ್ದೇ ಆಗಿದೆ ಎಂಬ ಗ್ರಹಿಕೆಗಳಲ್ಲಿ ಸತ್ಯವಿದ್ದರೂ ಸಂದರ್ಭದ ಸಮಗ್ರತೆಯನ್ನು ಈ ಗ್ರಹಿಕೆಗಳು ಪ್ರತಿಬಿಂಬಿಸಲಾರವು ಎನಿಸುತ್ತದೆ.

ವೇದಗಳಲ್ಲಿ ವಿದ್ವಾಂಸ ಮಗಳನ್ನು ಕೋರುವ ಸಂಸ್ಕಾರದಂಥ ಕೆಲವು ಅಪವಾದಗಳು ಕಂಡರೂ ಒಟ್ಟಂದದಲ್ಲಿ 'ಓ ದೇವರೇ ಮಗಳನ್ನು ಬೇರಾರಿಗಾದರೂ ಕರುಣಿಸು ನಮಗೆ ಮಾತ್ರ ಮಗನೇ ಇರಲಿ' ಎಂಬ ಪ್ರಾರ್ಥನೆಯೆ ಪ್ರಧಾನ.

ಸಂಸ್ಕೃತಿಯ ಒಕ್ಕಲಿಕೆ ವಾಹಕತೆಗಳನ್ನು ಮಾಡುವ ಸಾಹಿತ್ಯ ತನ್ನ ಜೀವಸೆಲೆಯನ್ನು ಸಂಸ್ಕೃತಿಯಿಂದಲೇ ಪಡೆದಿದೆ. ಸಂಸ್ಕೃತಿಯು ಸಮಾಜದ ಒಟ್ಟು ರಚನೆಯಲ್ಲಿಯೇ ತನ್ನ ಬೇರನ್ನು ಬಿಟ್ಟಿರುವುದರಿಂದ ರಚನೆಯನ್ನು ಸಾಂಸ್ಕೃತಿಕ ಸ್ವರೂಪವನ್ನೂ ಸಾಹಿತ್ಯವನ್ನೂ ಪ್ರತ್ಯೇಕವಾಗಿ ನೋಡಲಾಗುವುದಿಲ್ಲ. ಗಂಡು ಹೆಣ್ಣಿನ ಲೈಂಗಿಕ ಸಂಬಂಧಗಳಲ್ಲಿ ಗಂಡಸಿನ ಪಾತ್ರವನ್ನು ಮೇಲು ವರ್ಗದ್ದೆಂದೂ, ಶಕ್ತಿಯುತವಾದದ್ದೆಂದೂ ಪಿತ್ರ ಸಂಸ್ಕೃತಿಯ ಮುಖವಾಣಿಯಾದ ಸಾಹಿತ್ಯ ನಂಬುತ್ತದೆ. ಅಂಥ ಸಾಹಿತ್ಯವು ಗಂಡಸಿನ ಭೋಗದ ವಸ್ತುವಾಗಿ ಮಾತ್ರ ಹೆಣ್ಣಿನ ಜೀವನವನ್ನು ಮಿತಿಗೊಳಿಸುತ್ತಾ ಸ್ತ್ರೀಯನ್ನು ಅವಮಾನಿಸಿದೆ. ಅವಳ ವೈಯಕ್ತಿಕವಾದ ಸಮಗ್ರವಾದ ಜೀವನ ಅದಕ್ಕೆ ಮುಖ್ಯವಾಗುವುದಿಲ್ಲ. ಅವಳ ಇಡಿಯಾದ ವ್ಯಕ್ತಿತ್ವವನ್ನು ಲೈಂಗಿಕತೆ ಮತ್ತು ಸಂತಾನೋತ್ಪತ್ತಿಗೆ ಸೀಮಿತಗೊಳಿಸಲಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯವಂತೂ ಬಹುಪಾಲು ಈ 'ಸೆಕ್ಸಿಸ್' ಧೋರಣೆಯನ್ನೇ ಬಿಂಬಿಸುತ್ತದೆ. ಶೃಂಗಾರ ಪ್ರಧಾನವಾದ ಕಾವ್ಯ ಪರಂಪರೆಯಲ್ಲಿ ಹೆಂಗಸು ಏನಾಗಿದ್ದಾಳೆಂಬುದಕ್ಕೆ ಸ್ತ್ರೀವಾದಿ ಎಚ್ಚರದ ಅವಶ್ಯಕತೆ ಇದೆ. ಕೃಷ್ಣ ಆಲನಹಳ್ಳಿಯ 'ಪರಸಂಗದ ಗೆಂಡೆತಿಮ್ಮ' ಕೇಂದ್ರ ಪಾತ್ರದ ಮರಂಕಿಯು ದೇಹ ಸಮೃದ್ಧಿ ಮತ್ತು ದೇಹ ದಾಹವು ಹೆಚ್ಚು ಕಡಿಮೆ ಒಂದು ಪಶು ಮಟ್ಟದಲ್ಲಿ ಉಳಿದುಬಿಡುತ್ತದೆ. ಪ್ರಾಣೇಶಾಚಾರ್ಯರಿಗೆ ತಮ್ಮನ್ನೊಪ್ಪಿಸಿಕೊಳ್ಳಲು ನಿಂತ ಸ್ತ್ರೀಯರು ಕಾಣಿಸಿದರೇ ಹೊರತು ಪ್ರಾಣೇಶಾರ್ಯರ ಪ್ರತಿ ಪಾತ್ರವಾದ ಸ್ತ್ರೀ ಪಾತ್ರ ಸಾಮಾನ್ಯವಾಗಿ ಕಾಣಲಿಲ್ಲ. ಆಧೀನವಾಗಿಸುವಿಕೆಯ ಉದ್ದೇಶದಿಂದ ಹೆಂಗಸಿನ ಲೈಂಗಿಕ ಜೀವನದ ಮೇಲಿನ ನಿಯಂತ್ರಣಕ್ಕೆ ಅಗತ್ಯವಾದ ಪಾವಿತ್ರತೆಯ ಮಾದರಿಯನ್ನೇ ಹೆಂಗಸಿಗೆ ಕೊಡಲಾಗಿದೆ. ಪಾವಿತ್ರ್ಯದ ಕಠಿಣ ಪರೀಕ್ಷೆಯನ್ನು ಸೀತೆಯ ಸಂಕೇತದಲ್ಲಿ ರೂಢಿಸಲಾಗಿದೆ. ಮಾಸ್ತಿಯವರ 'ಚಿಕ್ಕಮಲ್ಲಮ್ಮ' ಎನ್ನುವ ಕಥನ

ಕವನದಲ್ಲಿ ಹೆಂಗಸಿನ ಪಾವಿತ್ರ್ಯತೆಗೊಂದು ಮಾದರಿಯನ್ನು ಕೆತ್ತಿದ್ದಾರೆ. ಪತ್ನಿಯೂ ತಾಯಿಯೂ ಆದ ಚಿಕ್ಕ ಮಲ್ಲಮ್ಮ, ಕೆಲವು ಭಂಡರಿಂದ ಅಪಹರಿಸಲ್ಪಟ್ಟು 'ಅತ್ಯಾಚಾರ'ಕ್ಕೆ ಒಳಗಾಗುತ್ತಾಳೆ. ಅಂಥ ಚಿಕ್ಕ ಮಲ್ಲಮ್ಮ ತನ್ನ 'ಶೀಲ'ವನ್ನು ಕಳೆದುಕೊಂಡಂತಾಗಿ ಕೆಂಡವಾಗಿ ಬೂದಿಯಾಗಿ ನಾಡಿಗೆ 'ಮಾದರಿ'ಯಾಗುತ್ತಾಳೆ. ಪುರುಷ ಪ್ರಧಾನ ಸಮಾಜ ಪುರುಷಾತ್ಮಕ ಗುಣಕ್ಕೆ ಪ್ರಾಧಾನ್ಯತೆ ಕೊಡುತ್ತಾ ಮನುಷ್ಯ ಸ್ವಭಾವದ ಒಮ್ಮುಖ ಬೆಳವಣಿಗೆಗೆ ಮಾತ್ರ ಉತ್ತೇಜನ ಕೊಟ್ಟಿದೆ. ಈ ಒಮ್ಮುಖ ಬೆಳವಣಿಗೆ ಹಲವು ಲೇಖಕರ ಗಂಡುಗುಣದ ಗೀಳಾಗಿ ಮಾರ್ಪಟ್ಟಿರುವುದನ್ನು ಅವರ ಸಾಹಿತ್ಯದಲ್ಲಿ ಕಾಣಬಹುದು.

ಕನ್ನಡ ಶಾಸನಗಳು ಸಾಮಾಜಿಕ ಚಟುವಟಿಕೆಗಳನ್ನು ಘಟನಾತ್ಮಕ ದಾಖಲೆಗಳಾಗಿವೆ. ಪ್ರಾಚೀನ ಕಾವ್ಯವನ್ನು ಬಿಟ್ಟರೆ ಅಂದಿನ ಸಾಮಾಜಿಕ ಸಂವೇದನೆಯನ್ನು ಅರಿಯುವಲ್ಲಿ ಶಾಸನಗಳು ಪ್ರಮುಖ ದಾಖಲೆಗಳಾಗುತ್ತವೆ. "ಕರ್ನಾಟಕದಲ್ಲಿ ಇಲ್ಲಿಯವರೆಗೆ ಪ್ರಕಟಿತ 25 ಸಾವಿರ ಶಾಸನಗಳಲ್ಲಿ ದಾಖಲಿಸಲ್ಪಟ್ಟ ಮಹಿಳೆಯರು ಪ್ರಭುವರ್ಗದವರು ಹಾಗೂ ಯಜಮಾನ ಸಂಸ್ಕೃತಿಯವರು. ಸಾಮಾನ್ಯ ಸಂಸ್ಕೃತಿಯ ಮಹಿಳೆಯರ ಚಿತ್ರಣ ತುಂಬ ಅಪರೂಪ. ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿ ಪುರುಷ ಜನಾಂಗದ ಹಿತಕ್ಕೆ ಮಾನದಂಡವನ್ನಾಗಿಸಿಕೊಂಡಿದ್ದು ಶಾಸನದಲ್ಲಿ ವ್ಯಕ್ತವಾಗಿದೆ."[೩]

ವೇದಕಾದಲ್ಲಿದ್ದ ಸ್ತ್ರೀ ಸ್ವಾತಂತ್ರ್ಯ ಸ್ಮೃತಿ ಕಾಲಕ್ಕೆ ಬರುವುದರೊಳಗಾಗಿ ಮಸಕಾಗಿ ಪುತ್ರನಿಗೆ ದೊರೆತ ಪ್ರಾಧಾನ್ಯತೆ ಪುತ್ರಿಯನ್ನು ತೀರ ಅಪ್ರಧಾನಳನ್ನಾಗಿ ಮಾಡಿತು. ಪುತ್ರನು ಕುಲದೀಪಕ ಎನ್ನುವ ಭಾವನೆಯಿಂದ ಗಂಡು ಸಂತಾನಕ್ಕಾಗಿ ಆಸೆ ಮಾಡಿದವರನ್ನು ಉಲ್ಲೇಖಿಸುವ ಶಾಸನಗಳು ಶೋಷಿತ ಹೆಣ್ಣು ಮಗುವಿನ ವಿಷಯದಲ್ಲಿ ಮೌನ ತಾಳಿವೆ. ಹೆಣ್ಣೇ ಇರಲಿ ಗಂಡೇ ಇರಲಿ ಬಂದುದನ್ನು ಸ್ವೀಕರಿಸಿ ಸಮಾನ ದೃಷ್ಟಿಯಲ್ಲಿ ನೋಡುವ ಜವಾಬ್ದಾರಿ ಅಂದಿನ ಪುರುಷ ವರ್ಗ ಗಮನಿಸಲಿಲ್ಲ. ನಿಜವಾದ ಶ್ರಮಜೀವನ ಅನಾದಿ ಕಾಲದಿಂದಲೂ ಹೆಣ್ಣಿನ ಪ್ರಜ್ಞೆಯನ್ನು ಸೀಮಿತ ಹೊಸ್ತಿಲೊಳಗೆ ಕಟ್ಟಿ ಹಾಕಿ ಅವಳ ಬದುಕಿನ ವಿಕಸನವನ್ನು ಹೊಸಕಿ ಹಾಕುವ ತಂತ್ರ ಶಾಸನಗಳಲ್ಲಿ ಪ್ರಧಾನವಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಬದುಕಿನ ಉನ್ನತ ಮಹಿಳೆಯರ ಕಲಾ ಸಾಧನೆಯ ಬಿರುದಾವಳಿಗಳಲ್ಲಿ ವಿದ್ವತ್ತಿನ ಉಲ್ಲೇಖಗಳು ಅಲ್ಲಲ್ಲಿ ಸಮಯ ಸಾಧಕತೆಯ ಪರವಾಗಿ ದೊರೆಯುತ್ತಿದ್ದರೂ, ವಿದ್ಯಾಭ್ಯಾಸಕ್ಕಿಂತ ಹೆಚ್ಚಾಗಿ ಲಲಿತಕಲೆಗಳಿಗೆ ಬೆಲೆ ಇತ್ತಿದೆ. ಇಲ್ಲಿಯ ಕಲೆಯ ಬೆಳವಣಿಗೆ ಅಥವಾ ಪ್ರೋತ್ಸಾಹಕ್ಕಿಂತ ಮನರಂಜನೆ ಪ್ರಮುಖ ಶೋಷಣೆಯ ಉದ್ದೇಶವಾಗಿ ಹೆಣ್ಣನ್ನು ಕೀಳುಮಟ್ಟಕ್ಕೆ ಇಳಿಸುವಲ್ಲಿ ಯಶಸ್ವಿಯಾಗಿದೆ. ಪುರುಷನೊಬ್ಬನ ಪ್ರೇಮಕ್ಕಾಗಿ ಸದಾ ಸ್ಪರ್ಧಿಸಲಿರುವುದಷ್ಟೇ ಗುರಿಯಾಗಿ ಉಳ್ಳ ವ್ಯಕ್ತಿ ಸೂಳೆಯರು. ಇವರನ್ನು ಪುರುಷ ಸಮಾಜ ಪ್ರಾಚೀನ ಕಾಲದಿಂದ ವಂಶಪರಂಪರಾಗತ ಸೂಳೆಯರು ಎಂದು ವರ್ಗೀಕರಿಸುತ್ತಾ ಬಂದಿದೆ. ವಂಶಪರಂಪರಾಗತ ಸೂಳೆಯರಲ್ಲಿ ವಿವಾಹ ಬಂಧನಕ್ಕೆ ಸಿಲುಕದ, ಪತಿಯನ್ನಗಲಿದ ಮತ್ತು ವಿಧವೆಯರು ಎಂದು ವಿಭಾಗಿಸಬಹುದು, ಬಾದಾಮಿ ಚಾಲುಕ್ಯ ಮನೆತನಕ್ಕೆ ಸಂಬಂಧಪಟ್ಟ ಸೂಳೆಯರು ಕರ್ನಾಟಕದ ಪ್ರಥಮ ಉಲ್ಲೇಖಿತ ರಾಜವೇಶ್ಯೆಯರು ತನ್ನ ಸ್ವಾರ್ಥ ಬದುಕಿನ ಬಳುವಳಿಯಿಂದ ದೇವನ ಹೆಸರಿನಲ್ಲಿ ಲಿಂಗಪ್ರತಿಷ್ಠೆಯೊಂದನ್ನು ಗೈದು ಇದರ ವ್ಯವಸ್ಥೆಗೆ ಆಡಳಿತ ನಿರ್ವಹಣೆಗೆ ಪ್ರಭುವರ್ಗ ಉನ್ನತವರ್ಗದ ಸಮಾಜ ಒಂದು ಸಲುಸಂಘಟಿತ ವ್ಯವಸ್ಥೆಗೈದು ಅದರಲ್ಲಿ ಸೂಳೆಯರದೊಂದು ಪ್ರಮುಖವರ್ಗದ ವ್ಯವಸ್ಥೆ ಮಾಡಿದ್ದರು. ಪರಿಸ್ಥಿತಿ ಒತ್ತಡವೋ ಪುರುಷ ಸಮಾಜದ ದಬ್ಬಾಳಿಕೆ, ಸ್ವಾರ್ಥ ಕಾರ್ಯಗಳಿಗೆ ಇವರು ಸದಾ ಬಲಿಪಶುವಾದುದು ನಿರಕ್ಷರತೆ, ಮೌಢ್ಯ, ಅಜ್ಞಾನ, ಜಾತಿಧರ್ಮಗಳ ಕಟ್ಟು ಪಾಡುಗಳು ಪ್ರಭು ಪುರೋಹಿತ ವರ್ಗದಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ದಿಗ್ಬಂಧನಗಳು ಇವರನ್ನು ಜೀವನವಿಡೀ ಪಾಪದ ಕೂಪದಲ್ಲಿ ನಲುಗಿಸುತ್ತವೆ. ಶಾಸನಗಳಲ್ಲಿ ಪ್ರಸ್ತಾಪಗೊಂಡ ಸೂಲಿಗೇರಿ, ನಾಗವಾಸ, ವೇಶ್ಯಾವಾಟಿಕೆ ಈ

---

೩. ಡಾ. ಚನ್ನಕ್ಕ ಪಾವಟೆ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸ್ಥಾನಮಾನ, ಪು. ಸಂ. ೩೫

ಅಂಶವನ್ನು ಸ್ಪಷ್ಟಪಡಿಸುತ್ತದೆ. ಯುದ್ಧದಲ್ಲಿ ಸೆರೆ ಸಿಕ್ಕ, ಸೋತ ವೈರಿಗಳ ಮಡದಿ ಮಕ್ಕಳನ್ನು ಗೆದ್ದ ಸಾಮ್ರಾಜ್ಯಶಾಹಿ ಪುರುಷ ಜನಾಂಗವು ತಮ್ಮ ತೊತ್ತಿನಂತೆ ಬಳಸಿ ಶೋಷಿಸಿದ ವ್ಯವಸ್ಥೆಯ ಪ್ರಸ್ತಾಪ ಶಾಸನಗಳಲ್ಲಿದೆ. ವೇಶ್ಯಾವೃತ್ತಿಗೆ ಪೂರಕವಾದ ಆರ್ಥಿಕ ಸ್ಥಿತಿಯ ಕೊರತೆ, ಯಜಮಾನ್ಯ ಸಂಸ್ಕೃತಿಗೆ ಕರಳು ಕುಡಿಯನ್ನು ಒತ್ತೆ ಇಡುವ, ಹರಾಜು ಹಾಕುವ, ಅವರ ಬದುಕಿನಲ್ಲಿ ಸ್ಪಂದನೆ ಇಲ್ಲದಂತೆ ಜಿಡ್ಡುಗಟ್ಟಿಸುವ ಅವಹೇಳನ ಮಟ್ಟಕ್ಕೂ ಹೆಣ್ಣು ಸ್ಪಂದಿಸಿದೆ. ಶಾಸನಗಳು ಪುರುಷ ಪ್ರಜ್ಞೆಗೆ ನಿಲುಕದ ಕೆಲವು ಸಂವೇದನೆಗಳನ್ನು ತುಂಬ ಅಪರೂಪವಾಗಿ ಚಿತ್ರಿಸಿದೆ. ತಾಯ್ತನ, ಹೆಬ್ಬಯಕೆ, ಹೆರಿಗೆನೋವು, ಗರ್ಭಿಣಿಯರ ಬಸುರು, ಬಯಕೆಗಳು, ಶೀಲ, ಮಕ್ಕಳ ಪಾಲನೆ-ಪೋಷಣೆ ಅವಿವಾಹಿತ ಮಹಿಳೆಯ ಮಾನಸಿಕ ಹೋರಾಟ ಶಿಕ್ಷಣ ಬಗೆಗಿನ ತವಕ ಇತ್ಯಾದಿಗಳನ್ನು ವ್ಯಕ್ತಪಡಿಸುವಲ್ಲಿ ಸ್ತ್ರೀ ಪ್ರಜ್ಞೆಯು ಮೂಲ ಕೇಂದ್ರವಾಗಿ ಕೆಲಸ ನಿರ್ವಹಿಸಿದೆ. "ಪುರಾತನ ಸಾಹಿತ್ಯದಲ್ಲಿ ಸ್ತ್ರೀಯರನ್ನು ಗರತಿ, ಕುಲಟೆ, ಗಯ್ಯಾಳಿ, ಸಾಧ್ವಿ ಧೃವಿಕೃತ ಮೌಲ್ಯಪ್ರತೀಕಗಳಲ್ಲಿ ಚಿತ್ರಿಸಿದ್ದರೆ ಅವು ಶಾಸನಗಳಲ್ಲಿ ಧಾರ್ಮಿಕ ನೀತಿ ಭೋಧಕ, ವೈರಾಗ್ಯ ಪ್ರತಿಪಾದಕ ರಸ ಪ್ರತಿಪಾದಕ ಅವಶ್ಯಕತೆಗಳಿಗೆ ಅನುಗುಣವಾಗಿ ಚಿತ್ರಿತವಾದ ಸತ್ವಹೀನ ಪದಗಳು ಇಂಥ ಬಿರುದಾವಳಿಗಳಲ್ಲಿ ಮಾನವೀಯ ದೃಷ್ಟಿ ಪ್ರತಿಪಾದನೆ ತೀರ ಗೌಣ. ಅದರಲ್ಲೂ ಕೆಲ ದುಷ್ಟ ಮನೋಭಾವದ ಮಹಿಳೆಯರ ಬದುಕಿನ ಚಿತ್ರಣ ವಾಸ್ತವ ಬದುಕಿನ ದರ್ಶನ ಮಾಡಿಸಿದೆ. ಮಹಿಳೆಯರನ್ನು ಗೃಹಬಂಧನದಲ್ಲಿರಿಸಿ ಯಾವುದೇ ರಂಗದ ಪರಿಚಯವಾಗದಂತೆ ಪುರುಷ ಸಂಸ್ಕೃತಿ ತನ್ನ ಬಲವತ್ತರವಾದ ಕೋಟೆಯನ್ನು ರಚಿಸಿಕೊಂಡು ಬಂದಿತ್ತು. ಹೆಣ್ಣು ಮಕ್ಕಳಿಗೆ ಕರಸ, ಕಾವಲಿ, ಗುಟ್ಟು, ಸಟ್ಟುಗ, ಕೊಡ, ಬರಲು, ಅಕ್ಕಿ ಇವುಗಳಿಗೆ ಮಾತ್ರ ಅವರ ಬದುಕು ಸೀಮಿತರೇಖೆ ಎಳೆದುದನ್ನು ಸಾತೇನಹಳ್ಳಿಯ ಶಾಸನ ಹೆಣ್ಣಿನ ಶೋಷಣೆಯ ಇನ್ನೊಂದು ಮುಖವನ್ನು ಸ್ಪಷ್ಟಪಡಿಸಿದೆ. ಆದರೂ ಮಾಧ್ಯಮ ವರ್ಗದ ಸಮಾಜದ ವಿಶೇಷ ಅರ್ಹತೆಯ ಮಹಿಳೆಯರು ಈ ಸೀಮಿತ ಬಂಧನದ ಲಕ್ಷ್ಮಣರೇಖೆ ದಾಟಿ ಗೃಹಬಂಧನವೊಂದನ್ನು ತಮ್ಮ ಧ್ಯೇಯವನ್ನಾಗಿಸಿಕೊಳ್ಳದೆ ಸಂದರ್ಭ ಬಂದಾಗ ಕೈಯಲ್ಲಿ ಕತ್ತಿ ಹಿಡಿದು ದುಷ್ಟರನ್ನು ಸದೆಬಡಿದ ಶಿಷ್ಟರಕ್ಷಣೆ ಧರ್ಮಕಾರ್ಯವನ್ನೆಸಗಿರುವ ಬೆಲೆಯುಳ್ಳ ಉದಾಹರಣೆಗಳು ದೊರಕುತ್ತಿವೆ. ಹೆಣ್ಣಿನ ಮೇಲೆ ಹೇರಲಾದ ಮೌಲ್ಯಗಳಲ್ಲಿ ಒಂದು ತಾಯ್ತನ ಪಿತೃತ್ವದ ಹಾಗೆಯೇ ಮಾತೃತ್ವದ ಆಕಾಂಕ್ಷೆಯೂ ಇರಬಹುದು ಅಥವಾ ಕ್ಷೀಣವಾಗಿರಬಹುದು. ಅದರ ಆದ್ಯತೆಗಳು ಬೇರೆ ಬೇರೆಯಾಗಿರಬಹುದು. ಎಲ್ಲವೂ ಆಯಾ ವ್ಯಕ್ತಿಯನ್ನವಲಂಬಿಸಿವೆ ಎಂಬ ವಿಚಾರಕ್ಕೆ ಆಸ್ಪದವಿಲ್ಲವೆನ್ನುವಂತೆ ಹೆಣ್ಣಾದವಳು ತಾಯ್ತನವನ್ನು ಒಲ್ಲೆಯೆನ್ನುವ ಅವಕಾಶಕ್ಕೆ ಬೇರೆ ಮಾರ್ಗವಿಲ್ಲದಂತೆ ಶಾಸನಗಳಲ್ಲಿ ಅವನ್ನು ಬಣ್ಣಿಸಲಾಗಿದೆ. ಪ್ರಾಚೀನ ಕರ್ನಾಟಕದಲ್ಲಿ ಪತಿಯ ಮರಣಾನಂತರ ಸತಿ ಕೈಗೊಳ್ಳುವ ಅಗ್ನಿ ಪ್ರವೇಶ ಅಂದಿನ ಮಹಾ ಮೌಲ್ಯಗಳಲ್ಲಿ ಒಂದೆನಿಸಿತ್ತು. ಇನ್ನೂ ಕೆಲವರು ಧರ್ಮಾಸಕ್ತರಾಗಿ, ರಾಜನೀತಿ ತಜ್ಞೆಯರಾಗಿ ಚಿಕ್ಕವಯಸ್ಸಿನ ಮಕ್ಕಳನ್ನು ಮುಂದಿಟ್ಟುಕೊಂಡು ಅವರ ಹೆಸರಿನಲ್ಲಿ ಆಡಳಿತದ ಸೂತ್ರಧಾರಿಕೆಯನ್ನು, ಧಾರ್ಮಿಕ ಪ್ರತಿಕ್ರಿಯೆಗಳನ್ನೋ ಕೈಕೊಳ್ಳುತ್ತ ಕಾಲ ಕಳೆಯುತ್ತಿದ್ದುದುಂಟು. ಅಗ್ನಿ ಪ್ರವೇಶ ಕಡ್ಡಾಯವೆಂಬ ಹಣೆಪಟ್ಟಿ ಅಂದಿನ ಕಾಲದಲ್ಲಿಲ್ಲದಿದ್ದರೂ ಪರಂಪರಾಗತ ಮೌಲ್ಯಗಳಿಂದ ಬಂದ ಜೋಳವಾಳಿ ಸತಿಪದ್ಧತಿಗಳಿಂದ ಶೋಷಣೆ ರೂಪದ ಸಂಸ್ಥೆಗಳನ್ನು ವೈಭವೀಕರಿಸುವುದೇ ಮುಖ್ಯ ಉದ್ದೇಶವಾಯಿತು. ಪ್ರಾಚೀನ ಕಾಲದಲ್ಲಿ ಕೌಟುಂಬಿಕ ಕ್ಷೇತ್ರವನ್ನು ಬಿಟ್ಟರೆ ಮಹಿಳೆ ವಿಸ್ತರಿಸಿಕೊಳ್ಳಲು ಅವಕಾಶವಿದ್ದ ಇನ್ನೊಂದು ಕ್ಷೇತ್ರವೆಂದರೆ ಧರ್ಮ. ಹೆಣ್ಣಿನ ಬಗೆಗೆ ಬೌದ್ಧಧರ್ಮ ಕಾಲಾಂತರದಿಂದ ರೂಪಿಸಿಕೊಂಡು ಬಂದ ಕೀಳರಿಮೆ ಅವರನ್ನು ಯಾವ ಕಾಲಕ್ಕೂ ತಲೆ ಎತ್ತಲು ಅವಕಾಶ ಮಾಡಿಕೊಟ್ಟಿಲ್ಲ. ಜೈನ ಸಂಪ್ರದಾಯದಲ್ಲಿ ತಕ್ಕ ಮಟ್ಟಿನ ಧಾರ್ಮಿಕ ಸ್ವಾತಂತ್ರ್ಯ ಪಡೆದಿದ್ದರೂ ಮಹಿಳೆ ಮೋಕ್ಷ ರಹಿತೆ. ಈ ಧಾರ್ಮಿಕ ಸ್ವಾತಂತ್ರ್ಯದ ಅವಕಾಶ ಮೋಕ್ಷದ ಹಂಬಲಗಳು ಅವರ ಮನಸ್ಸನ್ನು ಧರ್ಮದೆಡೆ ಸೆಳೆದಿವೆ. ದಾರ್ಶನಿಕ ನೆಲೆಗಳಲ್ಲಿ ಎಲ್ಲ ಆತ್ಮಗಳು ಸಮಾನವೆಂಬ ದೊಡ್ಡ ಚಿಂತನೆ ಬೆಳೆದಿತ್ತಾದರೂ ಲೌಕಿಕ ನೆಲೆಯಲ್ಲಿ ಈ ಅಸಮಾನತೆ ಬಹು ದೊಡ್ಡ ಕಂದಕವನ್ನು ಏರ್ಪಡಿಸಿತ್ತು.

ಜಾನಪದವನ್ನು ವಿಶೇಷವಾಗಿ ಅಭ್ಯಾಸ ಮಾಡಿದ ಎ.ಕೆ. ರಾಮಾನುಜನ್ ಅವರು ತಮ್ಮ ಅಧ್ಯಯನದಲ್ಲಿ ಸ್ತ್ರೀ ಸಂವೇದನೆಯಂತಹ ಸೃಜನಶೀಲ ವಿಷಯಗಳಿರುವುದನ್ನು ಗುರುತಿಸಿದ್ದಾರೆ. ಸ್ತ್ರೀ ನಿರೂಪಣೆಯಲ್ಲಿರುವ ಕತೆ, ಕಾವ್ಯಗಳಲ್ಲಿ ಕಾಣುವ ವಿಶಿಷ್ಟ ದನಿ, ರೂಪಕಗಳು ಇವು ಸ್ತ್ರೀ ವೈಶಿಷ್ಟ್ಯತೆಯನ್ನು ಹೇಳುತ್ತವೆ.

"Symbols for from being universal do not even mean the same thing as you more from genre to genre. So the gender of the gender. If one man speak of such and surely the gender of the teller, the listener and the interpreter becomes important interpretation. A women's really constructed life forms, her meaning universe is different from man's is such tales. The spaces is women centered stories marked by alternations of domestic and public space is which action takes place"[೪]

ಇನ್ನೊಬ್ಬ ಚಿಂತಕ ಆಶಿಸ್‌ನಂದಿ ಗುರುತಿಸುವಂತೆ, "ಭಾರತದಲ್ಲಿ ಸ್ಪರ್ಧಾತ್ಮಕತೆ, ಅಕ್ರಮಶೀಲತೆ, ಬಲ, ಕ್ರಿಯಾಶೀಲತೆ ಇವುಗಳು ಸ್ಪಷ್ಟವಾಗಿ ಪುರುಷಾತ್ಮಕವಲ್ಲ. ಹಾಗೆ ನೋಡಿದರೆ ಭಾರತೀಯ ಜಾನಪದಗಳಲ್ಲಿ ಈ ಗುಣಗಳು ಅಷ್ಟೇ ಮಟ್ಟಿಗೆ ಸ್ತ್ರೀ ಸಂಬಂಧಿಯಾಗಿವೆ."[೫] ಜಾನಪದ ಸೀತೆ ರಾವಣನ ಚಿತ್ರ ಬಿಡಿಸುವುದು. ದುರ್ಯೋಧನನಿಗೆ ದ್ರೌಪದಿ ಜೂಜಿನಲ್ಲಿ ಸವಾಲೆಸೆವುದು. ಇವು ಶಕ್ತ ಹಾಗೂ ಸಹಜ ವ್ಯಕ್ತಿತ್ವಗಳನ್ನು ಅನಾವರಣಗೊಳಿಸುವಂತೆ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿನ ಚಿನ್ನಮರಿ, ಪೀಂಚಲು, ಬನದ ಕರಡಿಯಂತಹ ಅವ್ವಂದಿರು, ತನ್ನನ್ನು ಕಂಡರೆ 'ಯಮದೂತರು ಓಡೋಯ್ತರ' ಎನ್ನುವ ಸಾಕವ್ವ ಹೀಗೆ ಹಲವಾರು ಮಹಿಳೆಯರು ಸಹಜ ಗುಣಗಳಿಂದ ಕೂಡಿ ಪ್ರಕೃತಿಗೆ ಹತ್ತಿರವಿದ್ದಾರೆ.

ಇನ್ನು ಲಿಖಿತ ಸಾಹಿತ್ಯ ರಚನೆಯಲ್ಲಿ ಹೆಣ್ಣು ಬರವಣಿಗೆ ಎನ್ನುವುದು ತೆರೆದುಕೊಂಡಿದ್ದೇ 12ನೇ ಶತಮಾನದಲ್ಲಿ. ಅಲ್ಲೂ ಚಳುವಳಿಯ ಬೆಂಬಲ ಇದ್ದುದರಿಂದ ಸ್ತ್ರೀಯರ ಅಭಿವ್ಯಕ್ತಿ ಪ್ರಕಟವಾಗಿದೆ. ಅಕ್ಕಮಹಾದೇವಿ ಮತ್ತಿತರ ವಚನಕಾರ್ತಿಯರನ್ನು ಇಲ್ಲಿ ನಾವು ಗುರುತಿಸುತ್ತೇವೆಯಾದರೂ ಅದು ಲಿಂಗ ಸಮಾನತೆಯ ದೃಷ್ಟಿಯಿಂದ ಔಪಚಾರಿಕವಾಗಿ ಈ ಕೆಲಸ ನಡೆದಿದೆ ಎನ್ನಿಸುತ್ತದೆ. ಏಕೆಂದರೆ ಅಕ್ಕಮಹಾದೇವಿಯನ್ನು ಬಿಟ್ಟರೆ ಬೇರೆ ವಚನಕಾರ್ತಿಯರನ್ನು ಸ್ಥೂಲವಾಗಿ ಅಭ್ಯಾಸ ಮಾಡಲಾಗುತ್ತದೆಯೇ ವಿನಾ ಅವರ ಸಾಹಿತ್ಯ ಚರ್ಚೆಯಾಗಿದ್ದು ಕಡಿಮೆ ಎಂದೇ ಹೇಳಬೇಕು. ಅಕ್ಕಮಹಾದೇವಿಯೂ ಒಂದು ಹಂತದಲ್ಲಿ ಪುರುಷ ಪ್ರಧಾನ ನೆಲೆಯಿಂದ ಪ್ರಶ್ನಿಸಲ್ಪಟ್ಟವಳೇ ಆಗಿದ್ದಾಳೆ. ಹಾಗಾಗಿ ಆಕೆಗೆ 'ಹೆಂಗೂಸಲ್ಲ' ಎಂದು ಹೇಳಿಕೊಳ್ಳುವ ಅನಿವಾರ್ಯತೆ ಉಂಟಾಗಿರಬಹುದು. ಮೌಖಿಕ ಪರಂಪರೆಗೆ ಹತ್ತಿರವಿದ್ದ ಅಭಿವ್ಯಕ್ತಿ ಮಾರ್ಗಗಳು ಮತ್ತೆ ಮುಂದುವರೆದಂತೆ ಕಾಣುವುದಿಲ್ಲ.

ಕನ್ನಡ ಸಾಹಿತ್ಯವನ್ನು ಪಕ್ಷಿನೋಟದಿಂದ ನೋಡುವಾಗ ಮಹಿಳೆಯರ ಬರವಣಿಗೆ ಒಂದು ದೊಡ್ಡ ಚರಿತ್ರೆಯಲ್ಲ ಎಂಬುದು ನಮ್ಮ ಅರಿವಿಗೆ ಬರುವಂತೆಯೇ ಇದ್ದರೂ ಅದು ಪಕ್ಷಪಾತ ಪೂರ್ವಾಗ್ರಹಗಳಿಂದ ಕೂಡಿದ್ದಾಗಿದೆ. ಇರುವ ಸಾಹಿತ್ಯದಲ್ಲಿನ ಮಹಿಳೆಯರು ಟೈಪ್ಸ್‌ಗಳಾಗಿ ತೋರುತ್ತಾರೆ. ಅಂದರೆ ಕೆಲವು ಗುಣಗಳಿಂದ ಸ್ವೀಕರಿಸಲ್ಪಟ್ಟವರು. ಹತ್ತನೆಯ ಶತಮಾನದಿಂದ ಇತ್ತೀಚಿನ ಜನಪ್ರಿಯ ಸಾಹಿತ್ಯದವರೆಗೂ ಈ ಚಿತ್ರಣವನ್ನೇ ಕಟ್ಟಿಕೊಡಲಾಗಿದೆ. ಚಾಗಭೋಗಗಳನ್ನು ಮೌಲ್ಯಗಳಾಗಿ ಒಪ್ಪಿಕೊಂಡಿದ್ದ ಕಾಲದಲ್ಲಿ ಬದುಕಿದ್ದ ಅತ್ತಿಮಬ್ಬೆಯನ್ನು 'ದಾನ ಚಿಂತಾಮಣಿ'ಯಾಗಿ ಚಿತ್ರಿಸಲ್ಪಡುತ್ತಾಳೆ. ಇದು ಅವಳ ವ್ಯಕ್ತಿತ್ವದ ಧನಾತ್ಮಕ

---

೪. A.K. Ramanujam ; folk tales from india ಪು. ಸಂ. ೧೮, ೧೯೮೮

೫. ಡಾ. ಹಾ.ಮಾ. ನಾಗಾರ್ಜುನ : ಸ್ತ್ರೀವಾದಿ ಚಿಂತನೆಗಳು, ಪು. ಸಂ. ೬೭, ದೇಶಿ ಪುಸ್ತಕ ಪ್ರಕಾಶನ ೨೦೧೩.

ಅಂಶವೆಂಬಂತೆ ಕಂಡರೂ ಜೈನರಲ್ಲಿ ಸ್ತ್ರೀಯರಿಗೆ ಮೋಕ್ಷ ಇಲ್ಲದ ಕಾರಣ ತನ್ನನ್ನು ತಾನು ದಾನಧರ್ಮಗಳಲ್ಲಿ ತೊಡಗಿಸಿಕೊಂಡು ಸ್ತ್ರೀ ಜನ್ಮ ಕಳೆದುಕೊಂಡು ಆ ಪುಣ್ಯದಿಂದ ಗಂಡಸಾಗಿ ಹುಟ್ಟುವ ಅನಿವಾರ್ಯತೆಯನ್ನು ಅವಳು ತೋರಿಸಿದಂತಾಗುತ್ತದೆ. ತಮ್ಮ ಸರದಿಗಾಗಿ ಕಾಯುವ ರಾಣಿಯರು ಗಂಡನನ್ನು ಕಾಣಲು, ಕೂಡಲು (ವಡ್ಡಾರಾಧನೆ) ಹಾದರ ಮಾಡಿದ್ದಕ್ಕಾಗಿ ಹುಳ ಬಿದ್ದು ಸಾಯುವ ಅಮೃತಮತಿ (ಯಶೋಧರ ಚರಿತ್ರೆ) ಇವರೆಲ್ಲರು ಪುರುಷ ಸಮಾಜದ ನಿರೀಕ್ಷೆಗನುಗುಣವಾಗಿ ರೂಪಿಸಲ್ಪಟ್ಟಂತಹ ಮಾದರಿಗಳೇ ಆಗಿದ್ದಾರೆ. 'ಹದಿಬದೆಯ ಧರ್ಮ' ಬೋಧಿಸುವ ಹೊನ್ನಮ್ಮ ಅನಕೃ ಕಾದಂಬರಿಯ ಗೃಹಲಕ್ಷ್ಮಿಯರು ಮತ್ತು ವೇಶ್ಯೆಯರು ಸಂಸ್ಕಾರದ ಚಂದ್ರಿ, ಬೆಳ್ಳಿಯರು ಸ್ಥಿರೀಕರಣದ ಪಾತ್ರಗಳೇ ಆಗಿ 'ಸತೀ ಸೂಳೆ'ಯರ ಮಾದರಿಗಳನ್ನು ತೋರಿಸುವಂತಿದ್ದಾರೆ.

ಬಂಡಾಯದ ದಾಟಿಯಲ್ಲಿದ್ದ ಸಂವೇದನೆಗಳು ಮುಖ್ಯವಾಗಿ ಗ್ರಹಿಸುವುದು ಸಮಾಜವು ಸ್ತ್ರೀಯನ್ನು ದುರ್ಬಲ ಲಿಂಗಿಯೆಂದು ನೋಡುವ ಅಂಶವನ್ನು ವ್ಯವಸ್ಥೆಯ ಲೋಪಗಳು, ಕ್ರೌರ್ಯಗಳು – ಈ ಎಲ್ಲವೂ ಅಧಿಕಾರ ಕೇಂದ್ರಗಳಾದ ಪುರುಷನೆಲೆಯಲ್ಲಿ ಹುಟ್ಟುತ್ತವೆ ಎಂದು ನಂಬಲಾಗುತ್ತದೆ. ಸ್ತ್ರೀವಾದ ಎನ್ನುವುದೇ ಮೂಲತಃ ರಾಜಕೀಯ ಚಳುವಳಿ ಅಧಿಕಾರಗಳನ್ನು ಪುನರ್ರಚನೆ ಮಾಡಬೇಕು ಮತ್ತು ಆ ಮೂಲಕ ಸಮಾನತೆಯನ್ನು ಸಾಧಿಸಬೇಕು ಎನ್ನುವ ಆಶಯವುಳ್ಳದ್ದಾಗಿತ್ತು ಬಂಡಾಯದ ಸಂವೇದನೆಗಳು ಚುರುಕುಗೊಂಡಿವೆ. ಲೇಖಕಿಯರ ಪ್ರಜ್ಞಾಪೂರ್ವಕ ಸಂವೇದನೆಗಳು ರೂಪುಗೊಳ್ಳುತ್ತ ಹೋದಂತೆ, ಅವರು ಅಭಿವ್ಯಕ್ತಿಯಾಗಿ ಹಲವಾರು ಮಾರ್ಗೋಪಾಯಗಳನ್ನು ಹುಡುಕಿಕೊಳ್ಳಲಾರಂಭಿಸಿದ್ದರು.

ಪುರಾಣ ಪ್ರಸಿದ್ಧವಾದ ಸ್ತ್ರೀ ವ್ಯಕ್ತಿತ್ವಗಳನ್ನು ಮಾನವೀಯ ನೆಲೆಯಲ್ಲಿ ನೋಡುವ ಪ್ರಯತ್ನ ಇತ್ಯಾದಿ ಅಂಶಗಳು ಇಲ್ಲಿ ಗಮನಾರ್ಹವಾಗುತ್ತದೆ. ಸೀತೆ, ದ್ರೌಪದಿ, ದಮಯಂತಿ, ಮಾಧವಿ– ಈ ಪಾತ್ರಗಳನ್ನು ಪುನರ್ ಕಟ್ಟಿಕೊಳ್ಳುವಿಕೆಯು ಸಂಭವಿಸಿದ್ದು ಈ ಹಂತದಲ್ಲಿಯೇ. ಎಚ್.ವಿ. ಸಾವಿತ್ರಮ್ಮನವರ 'ದಮಯಂತಿ', ಅನುಪಮಾ ಅವರ 'ಮಾಧವಿ' ಕಾದಂಬರಿಗಳು ಈ ನಿಟ್ಟಿನಲ್ಲಿವೆಯಾಗಿ ಅವನ್ನು ಇಲ್ಲಿ ಉದಾಹರಿಸಬಹುದು. ಕಾಮದ ಪರಿಕಲ್ಪನೆಯೂ ಸಹ ನಮಗೆ ಸಮಾಜದಿಂದಲೇ ನಿರ್ದೇಶಿತವಾಗುತ್ತದೆ. ಅದು ಸಹಜ ಗುಣವಾಗಿದ್ದರೂ ಸಹ ಅದು ಪುರುಷನಿಗೆ ಸ್ತ್ರೀಗೆ ಬೇರೆ ಬೇರೆಯಾಗಿ ಒದಗುತ್ತದೆ. ಮಹಿಳಾ ಬರವಣಿಗೆಗಳಲ್ಲಿ ಕಾಮವನ್ನು ಸಹಜ ದೇಹವಾಂಛೆಯಂತೆ ನೋಡುವುದು ಒಂದು ರೀತಿಯಾದರೆ, ಇನ್ನೊಂದು ಪುರುಷ ದೃಷ್ಟಿಕೋನದಲ್ಲಿ ಭೋಗವೇ ಪ್ರಧಾನವಾಗಿ ಹೆಣ್ಣಿನ ಶೋಷಣೆಯ ಮೂಲವಾಗಿರುವ ಕಾಮವನ್ನು ಎಚ್ಚರಿಕೆಯಿಂದ ಪರಿಶೀಲಿಸುವುದು.

ದೇಹದ ನಿರ್ಬಂಧಗಳು ಸಮಾಜದಿಂದ ವಿಧಿಸಲ್ಪಡುತ್ತವೆ. ಸಮಾಜವು ಪುರುಷ ಕೇಂದ್ರವಾಗಿದ್ದು ಲೈಂಗಿಕತೆಯನ್ನು ನಿರ್ಧರಿಸುವುದು ಅದರ ಕೈಯಲ್ಲಿರುವುದರಿಂದ ಪುರುಷರಿಗೆ ಸಹಜವಾದ ಕಾಮವನ್ನು ನಿರಾಕರಿಸುತ್ತದೆ. ಇದನ್ನು ಅನೇಕ ಬರಹಗಾರ್ತಿಯರು ಪ್ರತಿರೋಧದ ನೆಲೆಯಲ್ಲಿ ಗ್ರಹಿಸುತ್ತಾರೆ. ಬಂಧಕ್ಕೆ ವಿರೋಧವಾಗಿ ಮುಕ್ತತೆಯನ್ನು ಬಿಂಬಿಸುವಲ್ಲಿ ಸ್ವಲ್ಪಮಟ್ಟಿನ ಪ್ರತಿರೋಧವನ್ನು ಕಾಣಬಹುದು. ಇದೊಂದು ಪ್ರತಿಭಟನೆಯ ದ್ಯೋತಕ ಹಾಗೂ ಸ್ವತಂತ್ರದ ರೂಪಕವೂ ಹೌದು. ಹಾಗೆಯೇ ಅಮೃತಮತಿ ತನ್ನಿಚ್ಛೆಯಂತೆ ಕಾಮವನ್ನು ಪಡೆಯುವ ಸ್ವತಂತ್ರ ಮನೋಭಾವವುಳ್ಳವಳಾಗಿ ಅವಳೂ ಹಲವಾರು ಬರಹಗಾರ್ತಿಯರಿಗೆ ರೂಪಕವಾಗಿದ್ದಾಳೆ.

ಅದೇ ದೇಹವು ಪುರುಷನ ಆಕ್ರಮಣಕ್ಕೆ ಭೋಗಕ್ಕೆ ತುತ್ತಾದಾಗ ಪ್ರತಿರೋಧವು ಆಕ್ರೋಶದ ನೆಲೆಯಲ್ಲಿ ವ್ಯಕ್ತವಾಗುತ್ತದೆ. ಸಂ.ಸ.ಉಷಾ ಅವರ 'ಈ ನೆಲದ ಹಾಡು' ಕವಿತೆಯ ಸಾಲುಗಳು ಹೀಗೆ ಬರುತ್ತವೆ.

"ನನ್ನ ತಾಯೆಂದು ಬಾಯೆಂದು
ಕೂಡ ಕರೆದು ಮೊಲಹಾಲ ಹೀರಿ ಬೆಳದ
ಕೃಷ್ಣ ಸಂತಾನವೇ, ಕಾಣಲಿಲ್ಲ ನಿಮಗೆ
ಮೊಲೆ ತೊಡೆಗಳ ಹೊರತಾಗ ಇನ್ನೊಂದು
ನಸುಗೆಂಪು ಆಸೆಗಳ ಹೊತ್ತ ಹೃದಯವುಂಟೆಂದು"[೭]

ಪ್ರತಿಭಾನಂದಕುಮಾರ್, ಮಲ್ಲಿಕಾಘಂಟಿ, ಶಶಿಕಲಾ ವೀರಯ್ಯಸ್ವಾಮಿ, ಗೀತಾನಾಗಭೂಷಣ ಇನ್ನೂ ಹಲವಾರು ಲೇಖಕಿಯರಲ್ಲಿ ಈ ರೀತಿಯ ಪ್ರತಿಭಟನೆಯ ದನಿಗಳಿವೆ. ವೀಣಾ ಶಾಂತೇಶ್ವರರ ಕತೆಗಳಲ್ಲೂ ಕೆಲಮಟ್ಟಿಗೆ ಈ ಅಂಶ ಕಾಣಬಹುದು. ಆದರೆ ಕವಿತೆಗಳಲ್ಲಿ ಈ ಅಂಶ ಇನ್ನೂ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ.

ಈ ಪ್ರಜ್ಞಾಪೂರ್ವಕ ನೆಲೆಯಲ್ಲಿ ಗಮನಿಸಬೇಕಾದ ರೀತಿಯೆಂದರೆ ಅಪ್ಪ-ಅಮ್ಮಂದಿರಂತಹ ಬಿಂಬಗಳನ್ನು ಅಧಿಕಾರ ಕೇಂದ್ರಗಳಾಗಿ ನೋಡುವುದು. ಇವನ್ನು ಕೆಡವಿ ಕಟ್ಟುವ ಹಂತದಲ್ಲಿ ಆತ್ಮ ನಿರೀಕ್ಷೆಯೂ ಸ್ವಲ್ಪಮಟ್ಟಿಗೆ ಇದೆ. ಹಲವಾರು ಬರಹಗಾರ್ತಿಯರು ಅದರಲ್ಲೂ ಕವಯಿತ್ರಿಯರು ಎದುರುಗೊಳ್ಳುವ ಅಮ್ಮನ ಬಿಂಬವು ಸಾಂಪ್ರದಾಯಿಕ ಪುರುಷ ಸಮಾಜವನ್ನೇ ಹೋಲುತ್ತದೆ. ಸ. ಉಷಾ ಕವಿತೆಯ ಸಾಲುಗಳನ್ನು ನೋಡಬೇಕು.

"ನಿನ್ನಮ್ಮ ಅವಳಮ್ಮ ಅವಳಮ್ಮ
ಲಾಗಾಯ್ತಿನಿಂದ ಊದಿದ ಪುಂಗಿ ನೀನೂ
ಓದಬೇಡ! ಈಗ ತಾನೇ ಹೆಡೆಯಾಡಿಸುತ್ತಿದ್ದೇನೆ
ಯಾರನ್ನಾದರೂ ಕಚ್ಚಿ ವಿಷವಿಳಿಸಿಕೊಳ್ಳುತ್ತೇನೆ
ನನಗೆ ದಾರಿ ಬಿಡು."[೮]

ಈ ಬಗೆಯ ಆಕ್ರೋಶ ಮತ್ತು ಲೈಂಗಿಕ ಆಸೆಗಳ ಅಭಿವ್ಯಕ್ತಿ ಗಮನಾರ್ಹವಾಗಿದೆ. ಸೀರೆಯನ್ನು ಬಂಧನದ ಸಂಕೇತವಾಗಿ ನೋಡಿ ತಿರಸ್ಕರಿಸುವುದನ್ನು ಇದೇ ಬಗೆಯ ಅಭಿವ್ಯಕ್ತಿಯ ಗುಂಪಿಗೆ ಸೇರಿಸಬಹುದು.

ಸ್ತ್ರೀಯರ ಲೋಕವೇ ವಿಶಿಷ್ಟವಾಗಿ ಅನಾವರಣಗೊಳ್ಳುವುದರಿಂದ ಇಲ್ಲಿ ಮಹತ್ತರ ಅನುಭವಗಳೇನೂ ಇರಬೇಕೆಂದಿಲ್ಲ. ಅವು ದೊಡ್ಡದಾಗಿರಲಿ, ಚಿಕ್ಕದಾಗಿರಲಿ ಅವನ್ನೇ ಸ್ತ್ರೀ ಕಂಡುಕೊಂಡ ರೀತಿಯಲ್ಲಿ ಅಭಿವ್ಯಕ್ತಗೊಳಿಸುವುದು ಮುಖ್ಯವಾಯಿತು. ಸ್ತ್ರೀಯರ ಏಕಾಂತ ಲೋಕವು ಆಪ್ತವಾಗಿ ತೆರೆದುಕೊಳ್ಳುತ್ತ ಹೋದಂತೆ ಅವರದೇ ಆದ ಜಾಗ, ಜಗತ್ತುಗಳ ಇರುವು ಕೂಡ ತೆರೆದುಕೊಂಡಿತು. 'ಹೆಣ್ಣಿನ ಚೀಲವನ್ನು ತೆಗೆದು ನೋಡಬಾರದು' ಎಂದು ಹೇಳುವ ಮೂಲಕವೇ ಸ್ತ್ರೀ ಖಾಸಗಿತನದ ಲೋಕವೊಂದು ಇದೆ ಎಂದು ತಿಳಿಯುವಂತೆ ಮಾಡುವುದನ್ನು ಇಲ್ಲಿ ಕಾಣಬಹುದು.

ವೈದೇಹಿಯವರ ಕಥನಗಳಲ್ಲಿ ಕಾಣುವ ಸ್ತ್ರೀಲೋಕ ತನ್ನ ವ್ಯಕ್ತಿ ವಿಶಿಷ್ಟತೆಗಳಿಂದಲೇ ಆಪ್ತವಾಗುವ ಧಾಟಿಯಲ್ಲಿ ನಿರೂಪಿತವಾಗಿವೆ. ಪುರುಷ ಪ್ರಧಾನ ಸಮಾಜವನ್ನು ಎದುರಿಸುವಾಗ ತನ್ನತನವನ್ನು ಕಾಪಿಟ್ಟು, ಪೋಷಿಸಿಕೊಳ್ಳುವ ಹೆಣ್ಣುಗಳು ವೈದೇಹಿಯವರ ಪ್ರಬಂಧವೊಂದರಲ್ಲಿ ಕಾಣುವ ಅಜ್ಜಯ್ಯನ 'ಈಸಿಛೇರು' ಕಂಬದ ಹಿಂದಿನಿಂದ ನಿಂತು ನೋಡುವ ಕಣ್ಣುಗಳಿಗೆ ಕಾಣುವ ರೀತಿ ಅಧಿಕಾರ ಸ್ವರೂಪದ್ದಾಗಿ ಕಾಣುತ್ತದೆ.

---

೭. ಸಂ.ಶ. ಉಷಾ : ಈ ನೆಲದ ಹಾಡು (ಕವನ ಸಂಕಲನ) ಪು. ಸಂ. ೧೩, ಅನನ್ಯ ಪ್ರಕಾಶನ ೨೦೦೮

೮. ಸಂ.ಶ. ಉಷಾ : ಈ ನೆಲದ ಹಾಡು (ಕವನ ಸಂಕಲನ) ಪು. ಸಂ. ೧೮, ಅನನ್ಯ ಪ್ರಕಾಶನ ೨೦೦೮

ಅದರ ಮೂಲಕ ಅಧಿಕಾರ ಕೇಂದ್ರದ ಅರಿವು ನಿರೂಪಿಸಲಾಗುತ್ತದೆ. ವೈದೇಹಿಯವರ ಇನ್ನೊಂದು ಪ್ರಬಂಧದಲ್ಲಿ ಸ್ತ್ರೀಯರ ವಯ್ಯಾರ, ಒನಪುಗಳನ್ನು ಯಕ್ಷಗಾನದ ಸ್ತ್ರೀ ಪಾತ್ರಧಾರಿಯೊಬ್ಬ ತೋರಿಸುವಾಗ ಅದನ್ನು ಅನುಮಾನಿಸುವ ಅರಿವು ಇದೆ. ಆದರೆ ಅದೂ ಸಹ ಅಬ್ಬರದಿಂದ ನಿರೂಪಿಸಲ್ಪಟ್ಟಿಲ್ಲ. 'ಸೌಗಂಧಿಯ ಸ್ವಗತಗಳು' ಕಥೆಯ ನಾಯಕಿಗೆ ತನ್ನತನದ ಅರಿವು ಸ್ಪಷ್ಟವಾಗಿದೆಯಾದರೂ ಅವಳು ಹೋರಾಟಗಾರ್ತಿಯಾಗಿ ಬರುವುದಿಲ್ಲ. ದೇಹವಾಂಛೆಯ ಬಗ್ಗೆ ತಿಳಿಸುವ ಮಹಿಳಾ ಪಾತ್ರಗಳು ಆಕ್ರೋಶದ ದನಿಯಲ್ಲಿ ಮಾತನಾಡುವುದಿಲ್ಲ ಎನ್ನುವುದೇ ಈ ನೆಲೆಯ ವಿಶಿಷ್ಟತೆಯಾಗುತ್ತದೆ. ಹೆರಿಗೆ, ಮುಟ್ಟು, ಕಾಮ, ಪ್ರೇಮಗಳು ಸಹಜತೆಯ ನೆಲೆಯಲ್ಲಿ ಒಪ್ಪಿತವಾಗುತ್ತವೆ ಮತ್ತು ತಮ್ಮದೇ ಆದ ಸ್ತ್ರೀ ಲೋಕವನ್ನು ತೆರೆದಿಡುತ್ತವೆ.

ಸ್ತ್ರೀ ಸಂವೇದನೆಯೆನ್ನುವುದು ಪುರುಷನಿಗೆ ಸಮಾನಾಂತರವಾಗಿ ಸವಾಲುಗಳನ್ನು ರೂಪಿಸುವುದಿಲ್ಲ. ಅದು ನಿತ್ಯದ ಅನುಭವಗಳಿಂದೇ ಆಗಿದೆ. ಇವನ್ನು ಬರಹದ ಮೂಲದ್ರವ್ಯವಾಗಿ ಬಳಸಿಕೊಳ್ಳಲಾಗಿದೆ. ಎ.ಕೆ. ರಾಮಾನುಜನ್‌ರ ನುಡಿಗಟ್ಟು ಬಳಸಿ ಹೇಳುವುದಾದರೆ 'ಅನುದಿನದ ಅಂತರಗಂಗೆ' ಪ್ರತಿಭಾ ನಂದಕುಮಾರ್ ಇದನ್ನು ತಮ್ಮ ಕಾವ್ಯದಲ್ಲಿ ಬಳಸಿಕೊಂಡಿರುವುದಲ್ಲದೆ, ಅಡುಗೆಯ ಪರಿಕರಗಳನ್ನು ಬಳಸಿ ಶಕ್ತಿಶಾಲಿಯಾದ ಅಭಿವ್ಯಕ್ತಿ ರೂಪಕಗಳನ್ನು ಸೃಷ್ಟಿಸುತ್ತಾರೆ. ಅವರಂತೆಯೇ ಅನೇಕ ಲೇಖಕಿಯರು ಎಗ್ಗಿಲ್ಲದೆ ತಮ್ಮ ಅನುಭವಗಳನ್ನು ದಾಖಲಿಸಲು ಬಯಸುತ್ತಾರೆ. ಅನುಭವವು ಅಡುಗೆ ಮನೆಯದ್ದೇ ಆದರೂ, ಅದರ ಶೋಧನೆಯ ದಿಕ್ಕು ದೆಸೆಗಳೆಲ್ಲ ಗಂಭೀರವಾದವು.

ಇನ್ನೊಂದು ಹಂತದಲ್ಲಿ ಸ್ತ್ರೀ ಸಂವೇದನೆಗಳ ಕುರಿತ ಸಾಹಿತ್ಯ ರಚನೆಯನ್ನು ಈ ರೀತಿ ಗುರುತಿಸಿಕೊಳ್ಳಬಹುದು.

ಅ) ಕಥಾನಕಗಳ ವಿಫುಲ ಸೃಷ್ಟಿ ಆ) ಬಹುಮುಖತ್ವದ ಶೋಧ

ಮೊದಲನೆಯದಾಗಿ ಕಥಾನಕಗಳು ಮಹಿಳಾ ಬರಹಗಾರ್ತಿಯರಿಂದ ಬರುತ್ತಿವೆ. ಇದರಲ್ಲಿ ಹಲವಾರು ಜನ ಹವ್ಯಾಸಿ ಲೇಖಕಿಯರೂ ಇದಾರೆ. ಬರಹವನ್ನು ವೃತ್ತಿಪರತೆಯಿಂದ ಸ್ವೀಕರಿಸಿ ಬರೆಯುತ್ತಿರುವವರೂ ಇದ್ದಾರೆ. ಈ ರೀತಿಯ ಬರವಣಿಗೆಗಳು ಈ ಎರಡು ಗುಂಪಿನಿಂದ ಬರುತ್ತಿವೆ. ಕನ್ನಡದ ನೇಮಿಚಂದ್ರ, ದು.ಸರಸ್ವತಿ, ಪಾರ್ವತಮ್ಮ, ತಮಹಾಲಿಂಗಶೆಟ್ಟಿ, ಎಚ್.ನಾಗವೇಣಿ, ಸವಿತಾ ನಾಗಭೂಷಣ, ಗಿರಿಜಮ್ಮ, ವಿಜಯಲಕ್ಷ್ಮಿ ಬಾಳೇಕುಂದ್ರಿ, ಲೀಲಾವತಿ ದೇವದಾಸ್ - ಹೀಗೆ ಹತ್ತು ಹಲವು ಲೇಖಕಿಯರೇ ಇಲ್ಲಿದ್ದಾರೆ.

ಎರಡನೆಯದಾಗಿ ಬಹುಮುಖತ್ವದ ಶೋಧದಲ್ಲಿ ಇಂದಿನ ಸ್ತ್ರೀ ಸಂವೇದನೆ ಕುರಿತ ವಿಚಾರಗಳನ್ನು ಕಾಣಬಹುದು. ಸ್ತ್ರೀತ್ವದ ಅನುಭವಗಳು ಸಾಮಾಜಿಕ ಪಾತಳಿಯಿಂದ ಹುಟ್ಟುವ ಜಾತಿ, ವರ್ಗ, ಸಂಸ್ಕೃತಿಗಳಿಂದ ನಿರೂಪಿಸಲ್ಪಡುತ್ತವೆ. ಅವು ಎಲ್ಲಿ ಸ್ತ್ರೀಯರಿಗೂ ಒಂದೇ ಆಗಿರುವುದಿಲ್ಲ. ಒಂದೇ ಪ್ರದೇಶಕ್ಕೆ ಸೇರಿದ ವೈದೇಹಿ ಮತ್ತು ಎಚ್. ನಾಗವೇಣಿಯವರ ಗ್ರಹಿಕೆಗಳು ಸಾಂಸ್ಕೃತಿಕ ನಿಶ್ಚಿತತೆಗಳಿಂದ ಭಿನ್ನವಾಗಿ ಕಾಣುತ್ತವೆ. ಮಧ್ಯಮ ವರ್ಗದ ಸುಶಿಕ್ಷಿತ ಪ್ರಜ್ಞೆಯು ಟಿಸಿಲಾಗಿ ಬರುತ್ತಿದ್ದ ಸ್ತ್ರೀ ಸಂವೇದನೆಗಳು ಇಂದು ಗೀತಾ ನಾಗಭೂಷಣ, ಬಿ.ಜಿ. ಜಾಹ್ನವಿ, ದು.ಸರಸ್ವತಿಯಂತಹ ಲೇಖಕಿಯರಿಂದ ಬಹುಮುಖತ್ವದ ನೆಲೆಗಳನ್ನು ವಿಸ್ತರಿಸಿಕೊಳ್ಳುವಂತಿದೆ. ಸುಮಂಗಲಾ ಅವರ ಕಥಾನಕಗಳು ವರ್ಗನಿಶ್ಚಿತತೆಯನ್ನು ಸೂಚಿಸುತ್ತಿದ್ದರೆ (ಅವರ ಕಥೆಗಳಲ್ಲಿ ಬರುವ ಮನೆಗೆಲಸದ ಹೆಣ್ಣುಗಳು), ಸವಿತಾ ನಾಗಭೂಷಣರ 'ಸ್ತ್ರೀಲೋಕವು ಸ್ತ್ರೀಯರದೆಲ್ಲ ಒಂದೇ ಲೋಕ ಅಲ್ಲ, ಜೈವಿಕತೆಯೂ ಅಲ್ಲಿ ಸಮಾನ ಅಂಶವಲ್ಲ ಎಂದು ತೋರಿಸುತ್ತದೆ. ಸಾರಾ ಅಬೂಬಕರ್ ಅವರ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು', 'ಚಂದ್ರಗಿರಿಯ ತೀರದಲ್ಲಿ'

ಕನ್ನಡದಲ್ಲಿ ಮುಸ್ಲಿಂ ಸ್ತ್ರೀ ಸಂವೇದನೆಯ ಹೊಸ ಮಗ್ಗುಲನ್ನು ತೆರೆದು ತೋರಿಸಿದವು. ಅವು ನಿಶ್ಚಿತತೆಗಳನ್ನು ನಿರೂಪಿಸುತ್ತಲೇ ಬಹುಮುಖಿಯಾದ ಸಂವೇದನೆಗಳನ್ನು ರೂಪಿಸಿಕೊಂಡಿದ್ದು ಕಥಾನಕಗಳಾಗಿ ಯಶಸ್ವಿಯಾಗಲು ಕಾರಣವಾಯಿತು.

ಕೊನೆಯಲ್ಲಿ ಹೇಳುವುದಾದರೆ ಮೇಲೆ ಹೇಳಿದ ಎಲ್ಲಾ ಅಂಶಗಳ ಕಾರಣಗಳಿಂದ ಸೃಜನಶೀಲ ನೆಲೆಗಳಿಂದ ಮಹಿಳಾ ಸಂವೇದನೆಗಳು ರೂಪುಗೊಳ್ಳುತ್ತಿರುವ ಸೂಚನೆ ಸಿಗುತ್ತಿದೆ. ಇದರಿಂದ ಇನ್ನಷ್ಟು ಹೆಚ್ಚು ನಿರೀಕ್ಷೆಗಳು ಮಹಿಳಾ ಸಂವೇದನೆಗಳಿಂದ ರೂಪುಗೊಳ್ಳುವುದು ಸಾಹಿತ್ಯದ ಮೇಲಿವೆ. ಚಳುವಳಿಗಳ ಬೆಂಬಲದ ನುಡಿಗಳಿಂದ ಹೊರಬಂದು ಅನುಭವಗಳಿಂದ ಬಿಚ್ಚಿಕೊಳ್ಳುತ್ತಿರುವ ಇಂದಿನ ಮಹಿಳಾ ಸಂವೇದನೆಯ ಸ್ವರೂಪವು ಸಾಹಿತ್ಯದಲ್ಲಿ ಹೊಸತನಗಳನ್ನು ಸೃಷ್ಟಿಸಿಕೊಳ್ಳುತ್ತಿದೆ. ಅದನ್ನು ಮತ್ತೆ ಮತ್ತೆ ಓದಿಸಿಕೊಳ್ಳುವ ಸಾಧ್ಯತೆಗಳನ್ನು ಸಾಹಿತ್ಯದಲ್ಲಿ ಸೃಷ್ಟಿಸುವುದು ಇದು ಹೆಚ್ಚು ಸಂಕೀರ್ಣವೂ, ಕ್ರಿಯಾಶೀಲವೂ ಆದ ಸವಾಲು. ಇದನ್ನು ಬಹುಪಾಲು ಬರಹಗಾರ್ತಿಯರ ಬರಹಗಳಲ್ಲಿ ಕಾಣುತ್ತಿರುವುದು ಒಂದು ಸೂಚನೆಯೇ ಆಗಿದೆ.

ಅಧ್ಯಾಯ -೪

ಕಾದಂಬರಿ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

ಅಧ್ಯಾಯ ೪

ಕಾದಂಬರಿ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

ಆಧುನಿಕ ಕನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ಉತ್ತಮವಾದ ಸಾಹಿತ್ಯದ ಹೊಳೆಯು ಹರಿದಿದ್ದು, ಇದರಿಂದ ಕನ್ನಡ ಸಾಹಿತ್ಯವು ಶ್ರೀಮಂತಗೊಳ್ಳಲು ಕಾರಣವಾಯಿತು. ಇಂತಹ ಶ್ರೀಮಂತಿಕೆಗೆ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳು ಕಾರಣೀಭೂತವಾಗಿವೆ. ಜನಸಾಮಾನ್ಯರ ಆಸೆ-ಆಕಾಂಕ್ಷೆಗಳನ್ನು ನೋವು ನಲಿವುಗಳನ್ನು, ದುಃಖ-ದುಮ್ಮಾನಗಳನ್ನು ಕಣ್ಣಿಗೆ ಕಟ್ಟಿದ ಹಾಗೆ ಮನೋಜ್ಞವಾಗಿ ಚಿತ್ರಿಸುವಲ್ಲಿ ಕಾದಂಬರಿಗಳು ಯಶಸ್ವಿಯಾಗಿವೆ. ಹೀಗಾಗಿ ಸಾಹಿತ್ಯ ಕ್ಷೇತ್ರಕ್ಕೆ ಕಾದಂಬರಿಗಳ ಕೊಡುಗೆ ಅಪಾರವಾಗಿದೆ.

ಕನ್ನಡ ಸಾರಸ್ವತ ಲೋಕದ ಬಹುತೇಕ ಕಾದಂಬರಿಗಳ ಮುಖ್ಯ ವಸ್ತು ಹೆಣ್ಣು. ತಾಯಿಯಾಗಿ, ಅಕ್ಕನಾಗಿ, ಚಿಕ್ಕಮ್ಮನಾಗಿ, ದೊಡ್ಡಮ್ಮನಾಗಿ, ತಂಗಿಯಾಗಿ, ಅತ್ತಿಗೆಯಾಗಿ, ನಾದಿನಿಯಾಗಿ, ಅಜ್ಜಿಯಾಗಿ, ಹೆಂಡತಿಯಾಗಿ ಹೀಗೆ ಹಲವಾರು ಪಾತ್ರಗಳನ್ನು ಏಕಕಾಲದಲ್ಲಿ ಸಮರ್ಥವಾಗಿ ನಿಭಾಯಿಸುವ ಹೆಣ್ಣು, ಎಲ್ಲಾ ಕೆಲಸಗಳಲ್ಲೂ ತನ್ನದೇ ಆದ ಛಾಪನ್ನು ಮೂಡಿಸಿರುವುದನ್ನು ಕಾಣುತ್ತೇವೆ. ಅವಳನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ಇರುವ ಈ ಕಾಲಘಟ್ಟದಲ್ಲೂ ಅವಳು ಮಿತಿಗಳಲ್ಲೇ ಬೆಳೆಯಬೇಕಾದ ಅನಿವಾರ್ಯತೆಯಿದ್ದು ಅದನ್ನು ಕಾದಂಬರಿಗಳು ಸಹ ಯಥಾವತ್ತಾಗಿ ದಾಖಲಿಸಿರುವುದನ್ನು ಕಾಣುತ್ತೇವೆ.

ಆಧುನಿಕ ಕನ್ನಡ ಸಾಹಿತ್ಯದ ಮೊದಲ ಲೇಖಕಿಯಾದ ನಂಜನಗೂಡು ತಿರುಮಲಾಂಬ ಅವರು ಪ್ರಕಾಶಕಿಯಾಗಿ, ಸಮಾಜ ಸೇವಕಿಯಾಗಿ, ಸೃಜನಶೀಲ ಲೇಖಕಿಯಾಗಿ ಹೆಸರು ಪಡೆದಿರುವ ಅವರು ಲೇಖನ ಕಲೆಯಲ್ಲಿ ಮಹಿಳೆಯರು ಹಿಂದಿದ್ದ ಆ ಸಂದರ್ಭದಲ್ಲಿ ಎಲ್ಲರೂ ತೊಡಗುವಂತೆ ಮಾಡಿ ಸಾಮಾಜಿಕ ಪ್ರಗತಿಗೆ ಕಾರಣರಾದವರು. ಬಾಲ್ಯದಲ್ಲೇ ವಿವಾಹವಾಗಿ ಹನ್ನೆರಡನೇ ವಯಸ್ಸಿಗೆ ವಿಧವೆಯಾದ ತಿರುಮಲಾಂಭರವರು ಪತ್ರಕರ್ತೆಯಾಗಿಯೂ ಗುರುತಿಸಿಕೊಂಡಿರುವರು. ಸಮಾಜ ಸೇವಾಕರ್ತೆಯ ಜವಾಬ್ದಾರಿಯನ್ನು ಹೊತ್ತುಕೊಂಡು ಕಾದಂಬರಿಗಳನ್ನು ರಚಿಸಿದರು. ವರದಕ್ಷಿಣೆ, ವಧೂದಹನ, ಬಾಲ್ಯ ವಿವಾಹ, ವೇಶ್ಯಾ ಸಮಸ್ಯೆ ಮುಂತಾದ ಅಂದಿನ ಕಾಲದ ಹೆಣ್ಣಿನ ಬದುಕಿನಲ್ಲಿ ನಡೆದ ಅಪಸ್ವರದ ಚಿತ್ರಣಗಳನ್ನು ಮಾಡಲಾಗಿದೆ. 'ಸುಶೀಲೆ' 'ನಭಾ' 'ವಿರಾಗಿಣಿ' 'ಗಿರಿಜಾಬಾಯಿ' ಮೊದಲಾದ ಹನ್ನೆರಡು ಕಾದಂಬರಿಗಳನ್ನು ರಚಿಸಿದ್ದಾರೆ. ಮೇಲಿನ ಎಲ್ಲಾ ಕಾದಂಬರಿಗಳಲ್ಲೂ "ಹೆಣ್ಣು ಸಂಪ್ರದಾಯದ ಭಾರದಡಿ ನರಳುತ್ತಾ ಹೊಸ ಗಾಳಿಗೆ ತುಡಿಯುವ ಕಾತರತೆ ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಮಹಿಳೆಯರ ಕತೆ ಕನ್ನಡದಲ್ಲಿ ನೆಲೆಗೊಂಡಿದ್ದು ಇಪ್ಪತ್ತನೆಯ ಶತಮಾನದಲ್ಲಿಯೇ ಎನ್ನುವುದು ನಿರ್ವಿವಾದ. ತಿರುಮಲಾಂಬಾರವರ ಕಾದಂಬರಿಗಳು ಸಾಮಾಜಿಕವಾಗಿದ್ದರೆ ಕತೆಗಳೆಲ್ಲ ಪೌರಾಣಿಕವಾದವು."[೧] ಹೊಸಗನ್ನಡದಲ್ಲಿ ಬರುವ ಮೊದಲ ಲೇಖಕಿಯರಾದ ತಿರುಮಲಾಂಭ ಮತ್ತು ಕಲ್ಯಾಣಮ್ಮನವರ ಬರಹಗಳಲ್ಲಿನ ಸಾಮ್ಯ ಗಮನಿಸಿದಾಗ ದ್ವಂದ್ವದಲ್ಲಿ ಕೂಡಿದ ಮನಸ್ಸುಗಳ ಚಿತ್ರಣವನ್ನು ಇಬ್ಬರೂ ಮಾಡಿದ್ದಾರೆ. ನಾಯಕಿಯು ಸನ್ನಡತೆಯವಳು, ಸುಶಿಕ್ಷಿತಳೂ ಆಗಿ ಸನಾತನ ಸಂಸ್ಕೃತಿಯನ್ನು ಬಿಂಬಿಸುವ ಮಾದರಿಯಾಗಿದ್ದಾಳೆ. ತಿರುಮಲಾಂಭರವರ ಕಾದಂಬರಿಗಳಲ್ಲಿನ ಸ್ತ್ರೀ, ಶಿಕ್ಷಣವನ್ನು ಪಡೆದು ಎಚ್ಚೆತ್ತ ಪ್ರಜ್ಞೆಯ ಹೊಳಹುಗಳಲ್ಲಿ ನಿಲ್ಲುತ್ತಾಳೆ. ಸನಾತನದಿಂದಲೂ ಮೂಲೆಗೊತ್ತಲ್ಪಟ್ಟು ಗಂಡಸರ ಸಮರ್ಥನೆಯಲ್ಲಿ ಮುನ್ನಡೆಯುತ್ತಿರುವ ಸ್ತ್ರೀ ಶೋಷಣೆಯನ್ನು, ಎಚ್ಚೆತ್ತ ಪ್ರಜ್ಞೆಯ ಪಾತ್ರಗಳು ಇಂದು ಪ್ರಶ್ನಿಸುತ್ತಿವೆ. ದಿಟ್ಟತನದಿಂದಲೂ ವಿರೋಧಿಸುತ್ತಿವೆ. "ತಿರುಮಲಾಂಭರವರ 'ಮಾತೃನಂದಿನಿ' ಕಾದಂಬರಿಯ ನಂದಿನಿ ಪಾತ್ರ ಸನಾತನಿಗಳೊಡನೆ ವಾದ ಹೂಡಿ ಗೆಲ್ಲುವುದನ್ನು 'ನಂದಿನಿ ಜಯಲಾಭ'ವೆಂಬ ಇಡೀ ಅಧ್ಯಾಯವು

---

೧. ಜಿ. ಎಸ್. ಅಮೂರ : ಕನ್ನಡ ಕಥನ ಸಾಹಿತ್ಯ ಸಣ್ಣಕತೆ, ಪು. ಸಂ. ೩೨೫, ಪ್ರಿಯದರ್ಶಿನಿ ಪ್ರಕಾಶನ ೨೦೦೩

ನಿರೂಪಿಸುತ್ತದೆ. ಹದಿನಾರು ವರ್ಷ ಮೀರಿದರೂ ಮದುವೆಯಾಗದೆ ಉಳಿದುದಕ್ಕಾಗಿ ಊಟಕ್ಕೆ ಬಂದ ಸನಾತನಗಳಿಂದ ಆಕೆ ಕಟುವಿಮರ್ಶೆಗೆ ಒಳಗಾಗುತ್ತಾಳೆ. ಹೆಣ್ಣು ಮಕ್ಕಳನ್ನು ಕಾಡುಮೃಗಗಳಂತೆ ಕಂಡು ಕ್ರೂರವಾಗಿ ದಂಡಿಸುತ್ತಿರುವ ಸಾಂಪ್ರದಾಯಿಕ ಸಮಾಜವನ್ನು ನಂದಿನಿ ಕಟುವಾಗಿ ವಿಮರ್ಶಿಸುತ್ತಾಳೆ. ಇಲ್ಲಿನ ನಂದಿನಿ ಸಮಾಜದ ಲೋಪದೋಷಗಳನ್ನು ಹೇಳಲು ಹಿಂದೆ ಸರಿಯುವುದಿಲ್ಲ. ತಿರುಮಲಾಂಭರವರ ಕಾದಂಬರಿಗಳು ಸಾಮಾನ್ಯವಾಗಿ ಮದುವೆಯನ್ನು ವಿರೋಧಿಸುತ್ತವೆ. "ವರದಕ್ಷಿಣೆಯನ್ನು ಕೊಡುವುದು, ಆ ಸಂದರ್ಭದಲ್ಲಿ ಹುಡುಗಿಯ ತಂದೆ ತಾಯಿಗಳು ಪಡುವ ವೇದನೆ ಹಾಗೂ ಮದುವೆಯ ಸಂದರ್ಭದಲ್ಲಿ ಮಾಡುವ ಆಡಂಬರಗಳನ್ನು ವಿರೋಧಿಸುವ ಕೆಲವು ಮುಖ್ಯ ಪಾತ್ರಗಳು ಮದುವೆಯಾಗದೆ ಉಳಿದು ದೇಶ ಸೇವೆಯ ವ್ರತವನ್ನು ಆದರ್ಶವಾಗಿ ಆಯ್ಕೆ ಮಾಡಿಕೊಳ್ಳುವ ಸ್ತ್ರೀಯರನ್ನು ಕಾಣಬಹುದು. ತನ್ನ ನಿಜಜೀವನದಲ್ಲಿ ತಾನು ಸ್ವತಃ ಅನುಭವಿಸಿದ ಕಷ್ಟಗಳು ವೈಧವ್ಯದ ಸಮಸ್ಯೆಗಳು 'ನಭಾ' ಮತ್ತು 'ವಿರಾಗಿಣಿ' ಕಾದಂಬರಿಗಳಲ್ಲಿ ಅಲ್ಲಲ್ಲಿ ಇಣುಕುತ್ತವೆ."[೧]

ಬಡತನದಿಂದ ಕೂಡಿದ ಸಂಸಾರ ಸಮಾಜದ ಕಾಮುಕ ಪುರುಷ ಸಂಬಂಧಿಗಳ ಕ್ರೌರ್ಯ, ಒಳಸಂಚು, ಸ್ತ್ರೀಯರಿಂದಲೇ ಮಾತ್ಸರ್ಯಕ್ಕೆ ಒಳಗಾಗಿ ಅವುಗಳನ್ನು ದಿಟ್ಟವಾಗಿ ಎದುರಿಸಿದ ಸಾಹಸದ ಕಥೆಯೇ 'ನಭಾ' ಮತ್ತು 'ವಿರಾಗಿಣಿ' ಕಾದಂಬರಿಗಳು. ಮರುಮದುವೆಯಾಗದೆ ವಿರಾಗಿಣಿ ವ್ರತದಿಂದ ಇದ್ದ ಹೆಣ್ಣನ್ನು ಪುರುಷ ಪ್ರಧಾನ ಸಮಾಜ ಯಾವ ರೀತಿ ಕ್ರೌರ್ಯವಾಗಿ ನಡೆಸಿಕೊಳ್ಳುತ್ತದೆ ಎನ್ನುವ ವಿವರಗಳನ್ನು ಈ ಕಾದಂಬರಿಗಳು ಸಮರ್ಥವಾಗಿ ಬಿಂಬಿಸುತ್ತವೆ. ನವೋದಯ ಕಾಲದಲ್ಲಿ ಪ್ರಕಟವಾಗಿರುವ ಕಾದಂಬರಿಗಳು ಸಹ ಸ್ತ್ರೀಯ ಸತ್ವವನ್ನೇ ಸಂಕೇತಿಸುತ್ತವೆ. ಬೇಂದ್ರೆ ಅವರ ಕಾವ್ಯನಾಮವಾದ 'ಅಂಬಿಕಾತನಯ'ತ್ವವು ಈ ಸಂಕೇತದಿಂದಲೇ ಮೂಡಿಬಂದಿದ್ದು. ಸಮಾಜದ ಹೊರಜಗತ್ತಿನಲ್ಲಿ ದುಡಿದು ದಣಿದು ವ್ಯಾವಹಾರಿಕ ಮಾಯೆಯಲ್ಲಿ ಸಿಲುಕಿದ ಪುರುಷನಿಗೆ ಮನೆಯಲ್ಲಿ ಸಾಂತ್ವನದ ವಾತಾವರಣವನ್ನು ನಿರ್ಮಿಸಿ ಕೊಡುವುದು ಸ್ತ್ರೀ ಪಾತ್ರಗಳೇ. ಬೇಂದ್ರೆಯವರ 'ಸಖೀಗೀತ'ದ ಸಖಿ, ಮನದನ್ನೆ, ಕಾಮಾಕ್ಷಿಯರು; ರಾಜರತ್ನಂರ ಮಲ್ಲಿ, ಪುಟ್ನಂಜಿಯರು; ಕಾರಂತರ ಕಾದಂಬರಿಗಳ ಮಾಗಿದ ಜೀವನಾನುಭವವುಳ್ಳ ಶ್ರಮಜೀವಿ ಮಹಿಳೆಯರು ಇವರೆಲ್ಲ ಸುಶಿಕ್ಷಿತರೇ ಆದರೂ ಶಿಕ್ಷಣದಿಂದ ವಂಚಿತರು. ಶಿಕ್ಷಣವೆಂಬುದು ಪಾಶ್ಚಾತ್ಯ ಸಂಸ್ಕೃತಿಯ ಮಾದರಿಯೆಂದು, ಅದನ್ನು ಭೋಗ ಸಂಸ್ಕೃತಿಯ ಪ್ರತಿನಿಧಿ ಎಂದೂ ತಿರಸ್ಕರಿಸಿದ ಪುರುಷರು ಅದಕ್ಕೆ ಎದುರಾಗಿ ಆಕೆಯನ್ನು ಸಹನೆ, ಕ್ಷಮೆ, ದಯೆ, ಪ್ರೇಮ, ತ್ಯಾಗ ವೈರಾಗ್ಯಗಳನ್ನು ಅಂತರಂಗದ ಸತ್ವವಾಗಿಸಿಕೊಳ್ಳಲು ಹೇಳಬೇಕೆಂಬ ಭಾವಪುರುಷದಲ್ಲಿದ್ದು, ಅಂತಹ ಸ್ತ್ರೀ ಮಾದರಿಗಳನ್ನೇ ನಿರೀಕ್ಷಿಸುತ್ತದೆ. ಅಲ್ಪಸ್ವಲ್ಪ ವಿದ್ಯಾಭ್ಯಾಸವನ್ನು ಪಡೆದರೆ ಅದು ಪುರುಷರು ಕಲ್ಪಿಸಿಕೊಟ್ಟ ಉದಾರ ಮನಸ್ಸಿನ ಕೊಡುಗೆ ಎಂಬುದಾಗಿ ಸಮಾಜ ಸುಧಾರಣಾ ಚಟುವಟಿಕೆಗಳು ಬಿಂಬಿಸುವಂತಿದ್ದವು. ತಿರುಮಲಾಂಭ ಅವರ 'ಸುಶೀಲೆ' ಕಾದಂಬರಿಯಲ್ಲಿನ ನಾಯಕಿ ಸುಶೀಲೆ ಪತ್ರಿಕೆಯನ್ನು ಓದುತ್ತಾಳೆಂದು ಅತ್ತೆಯ ಟೀಕೆಗೆ ಒಳಗಾಗುವ ಸಂದರ್ಭವನ್ನು ಚಿತ್ರಿಸಿದ್ದಾರೆ.

ಆರ್.ಕಲ್ಯಾಣಮ್ಮನವರು ತಿರುಮಲಾಂಭಾರವರಿಗಿಂತ ಒಂದು ಹೆಜ್ಜೆ ಮುಂದಿದ್ದಾರೆ. ಅವರ ಕಾದಂಬರಿಗಳು ಶಿಕ್ಷಣದ ಮಹತ್ವವನ್ನು ತಿಳಿಸುತ್ತಾ ಸ್ತ್ರೀ ಶಿಕ್ಷಣದ ಅವಶ್ಯಕತೆ, ಮರುವಿವಾಹದ ಅಗತ್ಯ ಇತ್ಯಾದಿಗಳ ಬಗೆಗೆ ಸ್ತ್ರೀ ಪರವಾದ ನಿಲುವುಗಳನ್ನು ತಿಳಿಸುತ್ತವೆ. ಅವರ 'ನಿರ್ಭಾಗ್ಯ ವನಿತೆ' ಕಾದಂಬರಿಯು ವಿಧವಾ ಪುನರ್ವಿವಾಹದ ಆದರ್ಶಗಳನ್ನು ಒಳಗೊಂಡ ಕಾದಂಬರಿಯಾಗಿದೆ. ಅಸಮ ದಾಂಪತ್ಯಕ್ಕೀಡಾದ ಸುಂದರೇಶ–ಇಂದಿರೆಯರು ಇಲ್ಲಿನ ಕಥಾ ನಾಯಕ ನಾಯಕಿಯರು ವಿಧುರ ಹಾಗೂ ವಿಧವೆಯರಾದ ನಂತರ ಇವರಿಬ್ಬರೂ ಪುನರ್ವಿವಾಹವಾಗುವ ಕತೆ ಇದು. "ಸಕೇಶಿಯಾಗೇ ಉಳಿದು, ಓದುಬರಹ ಮುಂತಾದ ಚಟುವಟಿಕೆಗಳಲ್ಲಿ ತೊಡಗಿ ಜೀವನ ಕಳೆಯುತ್ತಿರುವಾಗ ಇಂದಿರೆ ಸಮಾಜದ ಕಟುಟೀಕೆ, ಹಿಂಸೆ,

---

೧. ಎಸ್. ವಿ. ಪ್ರಭಾವತಿ : ಸ್ತ್ರೀವಾದ ಪ್ರಸ್ತುತತೆ, ಪು. ಸಂ. ೧೨, ಭಾರತೀಯ ಸಂಸ್ಕೃತಿ ವಿದ್ಯಾಪೀಠ ೨೦೦೦

ಕಾಮುಕರ ಕಿರುಕುಳಕ್ಕೆ ಒಳಗಾಗಬೇಕಾಗುತ್ತದೆ. ಇವರಿಬ್ಬರೂ ಒಪ್ಪಿ ಶಾಸ್ತ್ರೀಯವಾಗಿ ಸನಾತನಿಗಳಿಂದಲೇ ವಿಧವಾ ಪುನರ್ವಿವಾಹಕ್ಕೆ ಒಪ್ಪಿಗೆ ಪಡೆಯಲು ಪ್ರಯತ್ನಿಸಿ ವಿಫಲರಾಗುತ್ತಾರೆ. ಕೊನೆಗೆ ಬ್ರಹ್ಮ ಸಮಾಜದಲ್ಲಿ ನಾಯಕ ನಾಯಕಿಯರು ವಿವಾಹವಾಗುವುದರೊಂದಿಗೆ ಕತೆ ಸುಖಾಂತ್ಯವಾಗುತ್ತದೆ." [೩]

ಬಿ.ಟಿ. ಕೃಷ್ಣ ಅವರ ಹೆಂಡತಿ ಎಂದೇ ಪ್ರಸಿದ್ಧರಾದ ಕೊಡಗಿನ ಗೌರಮ್ಮ ತಮ್ಮ ಜೀವಿತದ ಅಲ್ಪಾವಧಿಯಲ್ಲಿ ಇಪ್ಪತ್ತಕ್ಕೂ ಮಿಗಿಲಾದ ಕಥೆ, ಕಾದಂಬರಿಗಳನ್ನು ಬರೆದವರು. ಅದರಲ್ಲಿ ಮುಖ್ಯವಾದ ಒಂದು ಕಾದಂಬರಿ, 'ಪುನರ್ ವಿವಾಹ' ಎಂಬುದು. ಇದರ ಶೀರ್ಷಿಕೆಯ ಹೆಸರೇ ಸೂಚಿಸುವಂತೆ ಒಬ್ಬ ವಿಧವೆಯ ಬಗೆಗಿನ ಕತೆ ಅವಳ ಜಿಗುಪ್ಸೆಗಳು, ಸಮಾಜದ ಕೆಟ್ಟ ಕಣ್ಣುಗಳು, ತಿರಸ್ಕಾರಗಳು, ಮರು ವಿವಾಹಕ್ಕೆ ಎದುರಾಗುವ ಅಡೆತಡೆಗಳ ವಿವಿಧ ಮಜಲುಗಳನ್ನು ಚಿತ್ರಿಸಿದ್ದರೂ ಅಂತಿಮವಾಗಿ ಅವಳ ಪುನರ್ ವಿವಾಹಕ್ಕೆ ಲೇಖಕಿಯ ವಿರೋಧ ವ್ಯಕ್ತವಾಗಿರುವ ಧ್ವನಿಯನ್ನು ಗುರುತಿಸಬಹುದು.

ಇನ್ನು ತಮ್ಮ 'ಚಂಡಶಾಸನ' ಪದ್ಯದ ಸ್ತ್ರೀವಾದೀ ನಿಲುವುಗಳಿಂದಲೇ ಗಮನ ಸೆಳೆದ ಬೆಳಗೆರೆ ಜಾನಕಮ್ಮ ಇವರಿಗೆ ಸಮಕಾಲೀನರಾಗಿಯೇ ಬರೆದ ಮುಕಾಂಬಿಕಮ್ಮ, ಗಿರಿಬಾಲೆ, ಶ್ಯಾಮಲಾದೇವಿ, ಹೆಚ್.ಎಸ್.ಕಾತ್ಯಾಯಿನಿ, ಸರಸ್ವತಿ ದೇವಿಗೌಡರು, ತಿರುಮಲೆ ರಾಜಮ್ಮ, ಎಚ್.ವಿ.ಸಾವಿತ್ರಮ್ಮ ಮುಂತಾದವರು ಕೂಡ ತಮ್ಮ ಕಾದಂಬರಿಗಳಲ್ಲಿ ಹೆಣ್ಣಿನ ಜೀವನದ ವಿವಿಧ ಮಜಲುಗಳನ್ನು ಸಂಸಾರದ ಸೆಳೆತಕ್ಕೆ ಸಿಕ್ಕಿ ಅನುಭವಿಸುವ ಹಲವಾರು ತುಮುಲಗಳನ್ನು ಕಣ್ಣಿಗೆ ಕಟ್ಟಿದಂತೆ ಚಿತ್ರಿಸಿದ್ದಾರೆ. ಇವರೆಲ್ಲರ ಸಾಹಿತ್ಯವು ಸ್ತ್ರೀ ಕೇಂದ್ರಿತವಾದುದು. ಹೆಣ್ಣಿನ ಬದುಕನ್ನು ಹೆಣ್ಣಿನ ಅನುಭವದ ದೃಷ್ಟಿಯಿಂದ ನೋಡಿದಾಗ ದಕ್ಕುವ ಒಳನೋಟಗಳನ್ನು ಇವರ ಸಾಹಿತ್ಯವು ಬಿಂಬಿಸುತ್ತದೆ. ಪುನರ್ ವಿಮರ್ಶೆಯಾಗಲಿ, ಪ್ರತಿರೋಧವಾಗಲಿ ನೇರ ಹಾಗೂ ಸ್ಪಷ್ಟವಾಗಿರದೆ ಪರೋಕ್ಷವೂ ಸೂಚ್ಯವೂ ಆಗಿರುವುದನ್ನು ಗಮನಿಸಬಹುದಾಗಿದೆ.

ಆರ್. ಕಲ್ಯಾಣಮ್ಮನವರಂತೆಯೇ ಸಾಮಾಜಿಕ ವಲಯದಲ್ಲಿ ತಮ್ಮನ್ನು ಸೃಜನಶೀಲವಾಗಿ ತೊಡಗಿಸಿಕೊಂಡವರು–ಶ್ಯಾಮಲಾದೇವಿ ಬೆಳಗಾಂವ್‌ಕರ. ಜಯಕರ್ನಾಟಕ ಪತ್ರಿಕೆಯ ಸಂಪಾದನೆ, ಪ್ರಕಾಶನ ಈ ಎಲ್ಲಾ ಕೆಲಸಗಳನ್ನು ನಿಭಾಯಿಸಿದವರು. ತಮ್ಮ ಸಾಹಿತ್ಯದಲ್ಲಿ ಹೆಚ್ಚಾಗಿ ಇಣುಕುವ ಸ್ತ್ರೀಯ ಪಾತ್ರಗಳು ಬಾಲವಿಧವೆ, ವಿಧವಾ ವಿವಾಹ ಮುಂತಾದ ಸುಧಾರಣೆಯ ಯತ್ನವನ್ನು ಮೀರಿನಿಂತ ಸ್ತ್ರೀ ಸಮಸ್ಯೆಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತಾರೆ. ತಮ್ಮವರಿಂದಲೇ ಕಷ್ಟಗಳಿಗೆ ಬಿದ್ದು ಬೇಯುವುದು, ತಮ್ಮ ಸಂಬಂಧಿಗಳಿಂದಲೇ ವೇಶ್ಯಾ ಜೀವನಕ್ಕೆ ದೂಡಿಸಿಕೊಂಡ ಹೆಣ್ಣುಗಳ ಬವಣೆಯನ್ನು 'ಕರುಳಕತ್ತರಿ' 'ತಾಯಿ ಮಾತಾಯಿ' 'ಸ್ನೇಹದರ್ಶನ' ಕಾದಂಬರಿಗಳು ಹಿಡಿದಿಟ್ಟಿವೆ. ತಮ್ಮ ಕೈ ಮೀರಿ ಹೋದ ಪ್ರಸಂಗಗಳಲ್ಲಿ ಈ ಕಥೆಯ ನಾಯಕಿಯರು ಪಾರಾಗಲು ಹೋರಾಡುವ ಕಥನಗಳಾಗಿವೆ. ಇತರೆ ಕಾದಂಬರಿಗಳಲ್ಲಿ ಹೆಚ್ಚಾಗಿ ಚಿತ್ರಿತಗೊಂಡಿರುವುದು "ಆಧುನಿಕ ಸಮಾಜದಲ್ಲಿ ಇರುವ ವಿಷಮವಾದ ಆಡಂಬರದ ವಿವಾಹಗಳು ವರದಕ್ಷಿಣೆಯ ಸಮಸ್ಯೆಗಳು ಇತ್ಯಾದಿಯಾದಂತಹ ಹೆಣ್ಣಿನ ಸಮಸ್ಯೆಗಳನ್ನು ಚಿತ್ರಣ ಮಾಡಲಾಗಿದೆ.। [೪]

ಮತ್ತೊಂದು ವರ್ಗದ ಜನ ಸೃಜನಾತ್ಮಕ ಕಾದಂಬರಿಗಳನ್ನು ಸೃಷ್ಟಿಸುವಾಗ ಪುಟಗಳನ್ನು ಹೆಚ್ಚಿಸುವುದಕ್ಕಾಗಿ ಬರೆದದ್ದುಂಟು. ಅಂತಹ ಸಂದರ್ಭದಲ್ಲೂ ಉತ್ತಮ ಕಾದಂಬರಿಗಳನ್ನು ನೀಡಿದವರು ತ್ರಿವೇಣಿಯವರು. ಸ್ತ್ರೀ ಪಾತ್ರಗಳನ್ನೇ ಹೆಚ್ಚಾಗಿ ಸೃಷ್ಟಿಸಿ ಪುರುಷ ದ್ವೇಷಿ ಎಂಬುದನ್ನು ತಮ್ಮ ಕಾದಂಬರಿಗಳಲ್ಲಿ ಬಿಂಬಿಸಿದ್ದಾರೆ. ಶೌರ್ಯದ ಜೊತೆಗೆ ಕ್ರೌರ್ಯದ ಕಠೋರತೆ ಪುರುಷನಲ್ಲಿ ತುಂಬಿರುವುದನ್ನು ತ್ರಿವೇಣಿಯವರ 'ಕೀಲುಗೊಂಬೆ' ಕಾದಂಬರಿ ದಾಖಲಿಸುತ್ತದೆ. ವೇದಗಳ ಕಾಲದಲ್ಲಿಯ ವಿದ್ವಾಂಸರು ಮಗಳನ್ನು ಕೋರುವ

೩. ಕನ್ನಡ ಸಾಹಿತ್ಯದ ಹಿನ್ನೆಲೆ ಮತ್ತು ಪ್ರಭಾವ : ಪು. ಸಂ. ೨೦, ಮೈಸೂರು ವಿಶ್ವವಿದ್ಯಾಲಯ ೨೦೦೮

೪. ಮಹಿಳಾ ಸಾಹಿತ್ಯ : ವಿವಿಧ ದೃಷ್ಟಿ ಧೋರಣೆಗಳು (ವಿಮರ್ಶೆ), ಮಾನಸ ಗಂಗೋತ್ರಿ, ಮೈಸೂರು ಪು. ಸಂ. ೨೩

ಪದ್ಧತಿ ಈ ರೀತಿ ಇತ್ತು. "ಓ ದೇವರೆ ಮಗಳನ್ನು ಬೇರಾರಿಗಾದರೂ ನಮಗೆ ಮಾತ್ರ ಮಗನೇ ಇರಲಿ"[೫] ಎಂಬ ಪ್ರಾರ್ಥನೆ ಪ್ರಧಾನವಾಗಿತ್ತು. ಇದನ್ನು ಹಿನ್ನೆಲೆಯಾಗಿಟ್ಟುಕೊಂಡು ಸಾಹಿತ್ಯವನ್ನು ಹಲವಾರು ಮಂದಿ ರಚಿಸಿದರು.

ಮಧ್ಯಮ ವರ್ಗದ ಮಹಿಳೆಯರಿಗೆ ಸಾಂಸಾರಿಕ ಜೀವನದಲ್ಲಿ ಗಟ್ಟಿಧ್ವನಿಯನ್ನು ತುಂಬಿಸಿದವರು ಅನುಪಮಾ ನಿರಂಜನರವರು. ಪೌರಾಣಿಕ ಪಾತ್ರಗಳನ್ನು ಸ್ತ್ರೀ ಸಂವೇದನೆಯ ದೃಷ್ಟಿಯಲ್ಲಿ ಕಂಡವರು. ಇವರ ಎಲ್ಲಾ ಪ್ರಕಾರದ ಕಾದಂಬರಿಗಳು ಶೋಷಣೆಗೆ, ದಮನಕ್ಕೆ ಒಳಗಾದ ಸ್ತ್ರೀಯ ಧ್ವನಿಯನ್ನು ಎತ್ತಿ ಹಿಡಿಯುತ್ತವೆ.

ತಮ್ಮ ಲವಲವಿಕೆಯ ಶೈಲಿಯಲ್ಲಿ ಉತ್ತಮ ಸಂಭಾಷಣಾ ಕ್ರಮದಲ್ಲಿ ಜನರ ಮೆಚ್ಚುಗೆ ಗಳಿಸಿರುವುದು ಉಷಾನವರತ್ನರಾಮ್. ಇವರ ಕಾದಂಬರಿಗಳು ಬದುಕನ್ನು ಮೇಲು ಮೇಲಿಂದ ನೋಡಿ ಮುಂದೆ ಸಾಗುವ, ಸಮಸ್ಯೆಗಳು ಉದ್ಭವಿಸಿ ಬಹುಬೇಗ ಪರಿಹಾರ ಸೂತ್ರವನ್ನು ಹುಡುಕುವ ಕ್ರಮ ವಿಶಿಷ್ಟವಾಗಿದೆ. ಪ್ರೇಮ ವಿವಾಹ ಸಂಬಂಧಗಳಿಗೆ ಸಿಲುಕುವುದು, ಅಣ್ಣ-ತಮ್ಮಂದಿರಿಬ್ಬರನ್ನೂ ಒಂದೇ ಹುಡುಗಿ ಪ್ರೀತಿಸುವುದು, ಇಲ್ಲವೇ ಪುರುಷನ ನೆರಳಿನಲ್ಲೆ ಬಾಳ್ವೆ ಮಾಡುವ ಸ್ತ್ರೀ ಸಂವೇದನೆಗಳುಳ್ಳ ವಿಶಿಷ್ಟ ತಿರುಳು ಇವರ ಕಾದಂಬರಿಗಳಾಗಿವೆ.

ಎಂ.ಕೆ. ಇಂದಿರಾ ಅವರ ಉತ್ತರಾಧಿಕಾರಿಯೇನೋ ಎನ್ನುವ ರೀತಿಯಲ್ಲಿ ಸಾಹಿತ್ಯವನ್ನು ರಚಿಸಿದ ಮತ್ತೊಬ್ಬ ಲೇಖಕಿ ವೈದೇಹಿಯವರು. ಎಲ್ಲಾ ಪ್ರಕಾರಗಳಲ್ಲಿ ಸಾಹಿತ್ಯವನ್ನು ರಚಿಸಿದ್ದ ಇವರು ಎಲ್ಲಾ ಜನಸಾಮಾನ್ಯರಿಗೂ ತಮ್ಮ ಸಾಹಿತ್ಯ ಅರ್ಥವಾಗುವ ರೀತಿಯಲ್ಲಿ ಬರೆದಿದ್ದಾರೆ. ಪ್ರಾದೇಶಿಕ ಭಾಷೆಯ ಸೊಗಡಿನಲ್ಲಿ 'ಅಸ್ಪೃಶ್ಯರು' 'ಅಡಿಗೆ ಮನೆ ಹುಡುಗಿ' ಕಾದಂಬರಿಯಂತಹ ಇನ್ನಿತರ ಸಮೃದ್ಧ ಸಾಹಿತ್ಯ ಸೃಷ್ಟಿಯನ್ನು ಮಾಡಿದ್ದಾರೆ.

"ಮಹಿಳೆಯರ ಕೆಲವು ಸಾಮಾಜಿಕ ಸಮಸ್ಯೆಗಳನ್ನು ಕನ್ನಡ ಸಾಹಿತ್ಯದಲ್ಲಿ ಶಕ್ತಿಯುತವಾಗಿ ಬಿಂಬಿಸಿದವರು ಎಂ.ಕೆ.ಇಂದಿರಾ. ದೇವದಾಸಿ ಪದ್ಧತಿಯನ್ನಿಟ್ಟುಕೊಂಡು ಇವರು ರಚಿಸಿದ್ದು ಗೆಜ್ಜೆಪೂಜೆ. ಇದರ ಕಥಾ ನಾಯಕಿ ಚಂದ್ರಿಯ ಮನೆತನವೇ ದೇವದಾಸಿಯರ ಮನೆತನ. ಆದರೆ ವಿದ್ಯಾವಂತೆಯಾದ ಚಂದ್ರಿ ಕುಲಕಸುಬನ್ನು ಮುಂದುವರೆಸಲು ನಿರಾಕರಿಸಿ ವೈವಾಹಿಕ ಬದುಕಿನ ಕನಸು ಕಾಣುತ್ತಾಳೆ."[೬] ಇವಳ ತೊಳಲಾಟವನ್ನು, ಹಂಬಲವನ್ನು ಹೆಣ್ಣಿನ ತುಮುಲಗಳನ್ನು ಚಿತ್ರಿಸಿದ್ದಾರೆ.

ಇವರೆಲ್ಲರಿಗಿಂತಲೂ ಮತ್ತೊಂದು ವರ್ಗ ಸ್ವಲ್ಪ ಭಿನ್ನ ದಾರಿಯಲ್ಲಿ ನಡೆಯಿತು. ಸಮಾಜದಲ್ಲಿ ಮಹಿಳಾ ಸ್ವಾತಂತ್ರ್ಯಕ್ಕೆ ಕಾಲ ಇನ್ನೂ ಪಕ್ವತೆಯನ್ನು ಪಡೆದುಕೊಂಡಿಲ್ಲ ಎನ್ನುವ ಧೋರಣೆ ಹೊಂದಿರುವ ಶಾಂತಾರವರು, ಅಲ್ಪ ಸಂಖ್ಯಾತರು ಹಾಗೂ ದಲಿತ ವರ್ಗದ ಸಂವೇದನೆಗಳನ್ನು ಮುಕ್ತವಾಗಿ ಹರಿಯಬಿಟ್ಟಿರುವ ಬಿ.ಟಿ.ಲಲಿತಾನಾಯಕ್, ಸಾರಾ ಅಬೂಬಕರ್, ನಾಗವೇಣಿಯಂತಹ ಲೇಖಕಿಯರು ಬಂಡಾಯದ ಧ್ವನಿಯ ಮೂಲಕ ಹೆಣ್ಣಿನ ಚಿತ್ರಣ ಮಾಡಿದ್ದಾರೆ. ಸಮಾಜದಲ್ಲಿ ಸ್ತ್ರೀಯರಿಗೆ ಇರುವ ಸ್ಥಾನಮಾನ ಅವಳನ್ನು ನಡೆಸಿಕೊಳ್ಳುವ ರೀತಿ, ಮೂಲೆಗುಂಪು ಮಾಡಿ ಪೌರುಷ ತೋರುವ ಗಂಡಿನ ದರ್ಪ, ಈ ಶೋಷಣೆಗಳಿಗೆ ಒಳಗಾಗುವ ಹೆಣ್ಣಿನ ನಾನಾ ಸ್ತರಗಳನ್ನು ಚಿತ್ರಿಸಿದ್ದಾರೆ.

ಮುಸ್ಲಿಂ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನ ಆ ಕೋಮಿನ ಗಂಡಸರು ಸ್ತ್ರೀಯರ ಬಗೆಗೆ ಹೊಂದಿರುವ ವಿವಿಧ ಮುಖಗಳನ್ನು ಮನಕಲಕುವಂತೆ ಸಾರಾ ಅಬೂಬಕರ್ ಪರಿಚಯಿಸಿದ್ದಾರೆ. ಅವರ 'ಚಂದ್ರಗಿರಿಯ ತೀರದಲ್ಲಿ' ಎಂಬ ಕಾದಂಬರಿಯು ಮುಖ್ಯವಾಗಿ ತಲಾಖ್ (ವಿವಾಹ ವಿಚ್ಛೇದನ)ನ ಬಗ್ಗೆ

---

೫. ವಿಜಯಾ ದಬ್ಬೆ : ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಪು. ಸಂ. ೧೪

೬. ಸಾ.ರಾ. ಅಬೂಬಕರ್ : ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ, ಪು. ಸಂ. ೮೦, ಕನ್ನಡ ವಿಶ್ವವಿದ್ಯಾಲಯ ೨೦೦೬.

ಹೆಚ್ಚು ಬೆಳಕನ್ನು ಬೀರುತ್ತದೆ. ಶಾಸ್ತ್ರ ಮತ್ತು ಧರ್ಮಗಳು ಎಂದಿಗೂ ಪ್ರಶ್ನಾರ್ಹವಲ್ಲ ಎಂಬ ಮಹಾಭಾರತದಲ್ಲಿನ ಅರ್ಜುನನ ಮಾತಿನಂತೆ ಅರಳಿ ಸಂತೋಷದಿಂದ ಇರಬೇಕಾದ ಪ್ರೀತಿಯ ಜೀವಗಳನ್ನು, ಬಾಡಿಸಿ ಧರ್ಮದ ನಿಯಮಗಳು ಮಸುಕಾಗಿಸುತ್ತವೆ. ಇಂತಹ ಧರ್ಮಗಳನ್ನು ಪ್ರಶ್ನಿಸುವ ಗೋಜಿಗೆ ಹೋಗದೆ 'ನಾದಿರಾ' ಭೂಮಿಯ ಋಣವನ್ನು ಕಳೆದುಕೊಳ್ಳುವ ಹೆಣ್ಣಿನ ವೇದನೆಯು ಮನೋಜ್ಞವಾಗಿ ಚಿತ್ರಿತವಾಗಿದೆ.

ಈ ಹಿನ್ನೆಲೆಯಲ್ಲಿ ಗಂಡು ಭಾಷೆಯಿಂದಲೇ ಪರಿಚಿತವಾಗಿರುವ ಉತ್ತರ ಕರ್ನಾಟಕದ ಭಾಷೆಯಲ್ಲಿ ಬರೆದು ಎಲ್ಲರ ಮೆಚ್ಚುಗೆ ಗಳಿಸಿರುವ ಲೇಖಕಿ ಗೀತಾ ನಾಗಭೂಷಣ್ ತನ್ನ ಗ್ರಾಮೀಣ ಗಡುಸು ಭಾಷೆಯಲ್ಲೆ ದಲಿತ ಕೇರಿಯ ಹೆಣ್ಣು ಮಕ್ಕಳ ಮೇಲಾಗುತ್ತಿರುವ ಧಾರ್ಮಿಕ ಮತ್ತು ಸಾಮಾಜಿಕ ಶೋಷಣೆಗಳನ್ನು ತಮ್ಮ ಕಾದಂಬರಿಗಳಲ್ಲಿ ವಿವರಿಸಿದ್ದಾರೆ. ಅವರ 'ದಂಗೆ' 'ಹಸಿಮಾಂಸ ಮತ್ತು ಹದ್ದುಗಳು' ಹಳ್ಳಿಯ ಮುಗ್ಧ ಜನರ ಮೌಢ್ಯತೆಯನ್ನು ಬಂಡವಾಳವಾಗಿಸಿ ಹೆಣ್ಣನ್ನು ಬಳಸಿಕೊಳ್ಳುವ ರೀತಿಯನ್ನು ಯಾವ ರಿವಾಜು ಇಲ್ಲದೆ ತಮ್ಮ ಕಾದಂಬರಿಗಳಲ್ಲಿ ತಂದಿದ್ದಾರೆ.

ಈ ರೀತಿಯಾಗಿ ಹೆಣ್ಣು ಎಂದರೆ ಮನೆಯ ಪಾತ್ರೆ ತೊಳೆಯುವವಳು, ತೊಟ್ಟಿಲು ತೂಗಲಷ್ಟೆ ಯೋಗ್ಯಳು ಎಂದು ಮೂಲೆಗುಂಪು ಮಾಡಿರುವ ಸಂದರ್ಭದಲ್ಲಿ ಸಾಹಿತ್ಯ ರಚನೆಯಲ್ಲಿ ಸ್ತ್ರೀಯರು ತಮ್ಮನ್ನು ಸಕ್ರಿಯರಾಗಿ ತೊಡಗಿಸಿಕೊಂಡು ಪ್ರಗತಿಪರ ನೆಲೆಯಲ್ಲಿ ಆಲೋಚನೆ ಮಾಡುತ್ತಿರುವುದು ನಿಜಕ್ಕೂ ಒಂದು ಆರೋಗ್ಯಕರ ಸಮಾಜ ನಿರ್ಮಾಣವಾಗುವ ದಿನಗಳನ್ನು ಎದುರು ನೋಡಲು ಸಾಧ್ಯವಾಗಬಹುದು. ತಮ್ಮ ನೋವು ನಲಿವುಗಳನ್ನು ಹಂಚಿಕೊಳ್ಳಲಾಗದ ಸಂದರ್ಭದಲ್ಲಿ ಬರವಣಿಗೆ ಮೂಲಕ ತಮ್ಮ ದುಃಖವನ್ನು ತೋಡಿಕೊಂಡರು. ಮಹಿಳಾ ಸಾಹಿತ್ಯ ಎಂದರೆ ಅಡಿಗೆ ಮನೆ ಸಾಹಿತ್ಯವಾಗದೇ ಅದರಾಚೆನದೂ ಆಗಿದೆ ಎನ್ನುವುದು ಇವರ ಸಾಹಿತ್ಯ ಸ್ಪಷ್ಟಪಡಿಸುತ್ತದೆ. ಹೆಣ್ಣಿನ ಶೋಷಣೆಯ ಮೇಲ್ಪದರವನ್ನು, ಆಂತರಿಕ ನೆಲೆಯನ್ನು ವಿವಿಧ ಮಜಲುಗಳಾಗಿ ಚಿತ್ರಣ ಮಾಡಿದ್ದಾರೆ. ಬೇರೊಬ್ಬರ ಅನುಭವಕ್ಕೆ ಸರಿಯಾಗಿ ದಕ್ಕದ, ಸ್ತ್ರೀಯರು ಮಾತ್ರವೇ ಅನುಭವಿಸಿದ ವಿಚಿತ್ರ ಅನುಭವಗಳನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ಅಧ್ಯಾಯ - ೩

ಡಾ. ವಿಜಯಾ ಸುಬ್ಬರಾಜ್‌ರವರ ಬದುಕು-ಬರಹ

ಡಾ. ವಿಜಯಾ ಸುಬ್ಬರಾಜ್‌ರವರ ಬದುಕು – ಬರಹ

ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಮಹತ್ವದ ಕಾಲ. ಈ ಕಾಲಘಟ್ಟದಲ್ಲಿ ಎತ್ತರದ ಬಹುಸಂಖ್ಯೆಯ ಸಾಹಿತಿಗಳು ಏಕಕಾಲಕ್ಕೆ ಹುಟ್ಟಿಕೊಂಡು "ವೈವಿಧ್ಯಮಯವಾದ, ಚಲನಶೀಲತೆಯನ್ನು ಹಾಗೂ ಸಮೃದ್ಧಿಯನ್ನು ತಂದಂತಹ ಕಾಲ" ಇಂತಹ ಕಾಲಘಟ್ಟದಲ್ಲಿ ತಮ್ಮ ಸಮಕಾಲೀನ ಸಾಹಿತ್ಯರೊಂದಿಗೆ ನಿರಂತರವಾದ ಸಂವಾದವನ್ನು, ಏರ್ಪಡಿಸಿಕೊಂಡು ಸಮಾಜಕ್ಕೆ ಈ ಪರಿಸರಕ್ಕೆ ಸಲ್ಲಿಸುವುಂತಹ ಕೊಡುಗೆ ಏನು? ಎಂಬುದನ್ನು ಕಂಡುಕೊಳ್ಳಬೇಕಾಗಿದೆ. "ಸಾಹಿತ್ಯ ನಿಂತ ನೀರಲ್ಲ, ಸಮಕಾಲೀನ ಜೀವನ ಸಾಹಿತಿಗಳ ಮೇಲೆ ಪರಿಣಾಮ ಮಾಡುತ್ತದೆ.

"ಸಾಹಿತಿ ಪರಿಸರದ ಕೂಸು. ಯುಗದ ಧ್ವನಿ. ಆಯಾ ಕಾಲದ ಅವಶ್ಯಕತೆ ಹಾಗೂ ಬೇಡಿಕೆಗಳಿಗೆ ಅನಿವಾರ್ಯ ಅಗತ್ಯತೆಗಳಿಗೆ ಯಾವ ನಿಟ್ಟಿನಲ್ಲಿ ಸ್ಪಂದಿಸುವನು ಎಂಬುದು ಸತ್ಯ. ಪ್ರಜ್ಞಾವಂತರನ್ನು ಕಾಲವೇ ಚೆನ್ನಾಗಿ ದುಡಿಸಿಕೊಳ್ಳುತ್ತದೆ. ಹಾಗೆಯೇ ಸಾಹಿತಿ ಕೂಡ ಒಬ್ಬ ಪ್ರಜ್ಞಾವಂತ. ಜವಾಬ್ದಾರಿಯುತವಾದಂತಹ ಪ್ರಜ್ಞಾವಂತ ಲೇಖಕ. ತನ್ನ ಕಾಲಮಾನದ ಪ್ರೇರಣೆ ಹಾಗೂ ಧೋರನೆಗಳಿಗೆ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಾನೆ. ಈ ಎಲ್ಲಾ ವಿಚಾರಗಳ ಜೊತೆಗೆ ಸಾಹಿತಿಯು ತನ್ನ ಗತ ಬದುಕಿನ ಛಾಯೆಗಳು, ತನ್ನ ಬದುಕಿನ ಆಶಾಕಿರಣಗಳು ಅವರ ಬರಹದಲ್ಲಿ ಮೈಚಾಚಿಕೊಳ್ಳುತ್ತವೆ. ಮುಂದೆ ಆತನ ಆಶಯಗಳುಮ ಅಳಿಯದೆ ಬರಹದ ರೂಪದಲ್ಲಿ ಎಳಿಯುತ್ತದೆ. ಒಬ್ಬ ಲೇಖಕ ಅವುಗಳಿಂದ ಹೊರಗುಳಿಯಲು ಸಾಧ್ಯವಿಲ್ಲ."[೧] ತಾನು ಒಡನಾಡಿದ ಪರಿಸರ ಹಾಗೂ ತನ್ನ ಜೀವನಾನುಭವ ನೋಡಿದ, ಕೇಳಿದ ಘಟನೆಗಳು ಸಾಹಿತ್ಯ ರಚನೆಯ ಮೇಲೆ ಪ್ರಭಾವ ಬೀರುತ್ತದೆ.

ತಮ್ಮ ಸಹಜವಾದ ಪ್ರತಿಭೆ, ಪರಿಶ್ರಮ, ಪಾಂಡಿತ್ಯ, ಸೃಜನಶೀಲ ಕ್ರಿಯೆಗಳಿಂದ ಕನ್ನಡನಾಡು – ನುಡಿಯ ಸೇವೆ ಮಾಡಿ, ಕನ್ನಡ ನಾಡಿಗೆ, ಭಾರತೀಯ ಸಂಸ್ಕೃತಿಗೆ ತನ್ನದೇ ಆದಂತಹ ವಿಶಿಷ್ಟ ಕೊಡುಗೆ ನೀಡಿ ನಾಡಿನ ಸಾಹಿತಿಗಳ ಸಂಸ್ಕೃತಿಗೆ ತನ್ನದೇ ಆದಂತಹ ವಿಶಿಷ್ಟ ಕೊಡುಗೆ ನೀಡಿ ನಾಡಿನ ಸಾಹಿತಿಗಳ ಸಾಲಿನಲ್ಲಿ ಚಿರಸ್ಥಾನ ಪಡೆದಂತಹ ಹಲವಾರು ಸಾಹಿತಿಗಳು ಆಗಿ ಹೋಗಿದ್ದಾರೆ. ಅಂತವರ ಸಾಲಿನಲ್ಲಿ ವಿಭಿನ್ನವಾದ ಸಂವೇದನಾಶೀಲ ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದವರು ಡಾ॥ ವಿಜಯಾ ಸುಬ್ಬರಾಜ್‌ರವರು. ಬದುಕು ಎಷ್ಟೇ ವೈಯಕ್ತಿಕವಾದರೂ ಸಾಮಾಜಿಕ ಪರಿಸರ ಹಾಗೂ ಕೌಟುಂಬಿಕ ವಾತಾವರಣದಿಂದ ಹೊರಗುಳಿಯಲು ಸಾಧ್ಯವಿಲ್ಲ. ಇಂತಹ ಕುಟುಂಬ ವಿಚಾರಗಳನ್ನು, ಸಾಮಾಜಿಕ ಸಂಗತಿಗಳನ್ನು, ಸ್ತ್ರೀ ಸಂವೇದನಾ ನೆಲೆಗಳನ್ನು, ಸಮಾಜದಲ್ಲಿನ ಲಿಂಗ ತಾರತಮ್ಯ, ದೌರ್ಜನ್ಯಗಳನ್ನು ತಮ್ಮ ಕೃತಿಗಳಲ್ಲಿ ಎಳೆ ಎಳೆಯಾಗಿ ಚಿತ್ರಿಸುವ ಮೂಲಕ ಸಮಕಾಲೀನ ಗಣ್ಯ ಲೇಖಕಿಯರ ಸಾಲಿನಲ್ಲಿ ನಿಲ್ಲುವಂತವರು ಡಾ. ವಿಜಯಾ ಸುಬ್ಬರಾಜ್‌ರವರು. ಯಾವುದೇ ವಿಚಾರವನ್ನೇ ಆಗಲಿ ಯಾವ ಮುಲಾಜಿಲ್ಲದೇ ನೇರವಾಗಿ ನಿಷ್ಠುರವಾಗಿ ವ್ಯಕ್ತಪಡಿಸುವ ಮತಿಯುಳ್ಳ ಸಾಹಿತಿಯಾಗಿದ್ದಾರೆ.

೧, ನಾ. ಪ್ರಭಾಕರ್ : ನವ ಕರ್ನಾಟಕ ಸಾಹಿತ್ಯ ಸಂಪದ, ಪು. ಸಂ. ೧೩, ೨೦೦೫

ಬಾಲ್ಯ ಜೀವನ :

ಕರ್ನಾಟಕದ ರಾಜಧಾನಿ ಬೆಂಗಳೂರು ರಾಜಕೀಯವಾಗಿ ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ವಿಭಿನ್ನವಾದ ನೆಲೆಯಿಂದ ಕೂಡಿದ ನಗರ ಪ್ರದೇಶವಾಗಿದೆ. ಕನ್ನಡ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ಚಟುವಟಿಕೆಗಳು ಇಲ್ಲಿ ಸದಾ ನಡೆಯುವ ಕೇಂದ್ರ ಸಾಧನವಾಗಿದೆ. ಇಂತಹ ಕನ್ನಡ ವಾತಾವರಣದಿಂದ ಕಂಗೊಳಿಸುವ ಬೆಂಗಳೂರಿನಲ್ಲಿ ಡಾ. ವಿಜಯ ಸುಬ್ಬರಾಜ್ ರವರು ೨೦-೦೪-೧೯೪೭ ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ದಿವ್ಯ ವರ್ಷದಲ್ಲಿ ಜನಿಸಿದರು. ತಂದೆ ಸಿ.ಟಿ. ಸೀತರಾಮ್, ತಾಯಿ ಶ್ರೀಮತಿ ಲಕ್ಷ್ಮಿನಾಂಚರ್. ಓರ್ವ ಅಕ್ಕ ಮತ್ತು ಇಬ್ಬರು ತಮ್ಮಂದಿರ ಪ್ರೀತಿಯ ಸಹೋದರಿ ಇವರು. ಇವರ ತಂದೆ ವೃತ್ತಿಯಲ್ಲಿ ಚಲನಚಿತ್ರ ವಿತರಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

"ಸುಂದರ ಕನಸುಗಳನ್ನು ಕಾಣುತ್ತಾ ಶಾಲೆಯಲ್ಲಿ ಓರಗೆಯ ಮಕ್ಕಳೊಡನೆ ಆಡುತ್ತಾ, ಹಾಡುತ್ತಾ, ಕುಣಿಯುವ ಬಾಲ್ಯದ ದಿನಗಳನ್ನು ಕಳೆಯಬೇಕಾದ ವಿಜಯಾಗೆ ತಂದೆಯವರ ಹಠಾತ್ ನಿಧನದಿಂದಾಗಿ ಶಾಲಾ ಸಮಯವನ್ನು ಹೊರತುಪಡಿಸಿ ಮಿಕ್ಕ ವೇಳೆಯಲ್ಲಿ ಮನೆಯ ಮಂದಿಯ ಜೊತೆಯಲ್ಲಿ ಅಗರಬತ್ತಿ ಪ್ಯಾಕಿಂಗ್‌ನಲ್ಲಿ ನಿರತರಾಗಬೇಕಾದ ಸಂದಿಗ್ಧ ಪರಿಸ್ಥಿತಿ ಎದುರಾಯಿತು."[೨] ಈ ಸಮಯದಲ್ಲಿ ಬಾಲಕಿಯಾದ ವಿಜಯಾ ಸ್ವಾಭಿಮಾನದಿಂದ ದುಡಿಯಲೇಬೇಕಾದ ಅವಶ್ಯಕತೆ. ಆದರೂ ಎದೆಗುಂದದ ಈ ಬಾಲಕಿ ಛಲದಿಂದ ಮನೆಯ ಪಾಠಗಳನ್ನು ಹೇಳಿಕೊಟ್ಟು ಮನೆಯ ಖರ್ಚಿನ ಜೊತೆಗೆ ತಮ್ಮ ಖರ್ಚುಗಳನ್ನು ನಿಭಾಯಿಸಿಕೊಂಡು ತಮ್ಮ ವಿದ್ಯಾಭ್ಯಾಸ ಪೂರ್ಣಗೊಳಿಸಿಕೊಂಡ ಛಲಗಾತಿ.

ವಿದ್ಯಾಭ್ಯಾಸ :

ಡಾ॥ ವಿಜಯಾ ಸುಬ್ಬರಾಜ್‌ರವರು ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಸರ್ಕಾರಿ ಶಾಲೆಗಳಲ್ಲಿ ಮಾಡಿದರು. ವಿಜ್ಞಾನದ ವಿದ್ಯಾರ್ಥಿನಿಯಾದ ಇವರು ಬಿ.ಎಸ್ಸಿ ಪದವಿಯನ್ನು ಮಹಾರಾಣಿ ಕಾಲೇಜಿನಲ್ಲಿ ಪೂರ್ಣಗೊಳಿಸಿದರು. "ತಾನೊಂದು ಬಗೆದರೆ ದೈವವೊಂದು ಬಗೆದಂತೆ ವೈದ್ಯೆಯಾಗಲು ಕನಸು ಕಂಡಿದ್ದ ವಿಜಯಾರವರು ಕನ್ನಡ ಭಾಷೆ, ಸಾಹಿತ್ಯದ ಸೆಳೆತಕ್ಕೆ ಒಳಗಾದರು. ಕನ್ನಡದಲ್ಲಿ ಸ್ನಾತಕೋತ್ತರ ಪದವಿಗೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೇರಿ ಎಂ.ಎ ಪದವಿಯಲ್ಲಿ ಅತಿ ಹೆಚ್ಚು ಅಂಕ ಗಳಿಸುವ ಮೂಲಕ ರ್‍ಯಾಂಕ್ ಗಳಿಸಿ ಚಿನ್ನದ ಪದಕ ಗಿಟ್ಟಿಸಿಕೊಂಡರು. ಅನಂತರ ಕನ್ನಡ ಸಾಹಿತ್ಯದ ಸಂಶೋಧನೆ ವಿದ್ಯಾರ್ಥಿಯಾಗಿ "ಕನ್ನಡದಲ್ಲಿ ಗೀತನಾಟಕಗಳು : ಒಂದು ಅಧ್ಯಯನ" ಎಂಬ ಮಹಾ ಪ್ರಬಂಧ ಮಂಡಿಸಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿ.ಹೆಚ್ಡಿ ಗೌರವಕ್ಕೆ ಪಾತ್ರರಾದರು. ಇದರ ಜೊತೆಗೆ ಇಂಗ್ಲೀಷ್‌ನಲ್ಲಿ ಎಂ.ಎ. ಪದವಿ ಕಾನೂನು ಪದವಿ, ಡಿಪ್ಲೋಮೊ (ಫ್ರೆಂಚ್), ಸಾಹಿತ್ಯ ರತ್ನ (ಹಿಂದಿ) ಪದವಿಗಳನ್ನು ಪಡೆದುಕೊಂಡರು.

ವಿದ್ಯಾರ್ಥಿ ದೆಸೆಯಿಂದಲೇ ಕಾಲೇಜಿನ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದರು. ಕನ್ನಡ, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳ ಚರ್ಚಾ ಸ್ಪರ್ಧೆಗಳಲ್ಲಿ ಭಾಗಿಯಾಗಿ ಅಧಿಕಾರಯುತವಾಗಿ ಮಾತನಾಡಬಲ್ಲ ಚರ್ಚಾಪಟುವಾಗಿದ್ದರು. ಬಾಲ್ಯದಿಂದಲೇ ಆಸಕ್ತಿಯಿದ್ದ ನೃತ್ಯ – ಸಂಗೀತ, ಸಾಹಿತ್ಯ ಕಾರ್ಯ ಕ್ರಮಗಳಲ್ಲಿ ಭಾಗಿಯಾಗಿ ಜನಪ್ರಿಯರಾದರು. ಇವುಗಳಿಂದ ದೊರೆತ ಬಹುಮಾನಗಳ ಸುರಿಮಳೆ ವಿಜಯಾರನ್ನು ಇನ್ನಷ್ಟು ಸಾಧಿಸಲು ಪ್ರೇರೇಪಣೆ ನೀಡಿದವು. ಎಲ್ಲದರಲ್ಲೂ ತಾನೇ ಮೊದಲು ಬರಬೇಕು ಎಂಬ ತವಕ, ಛಲ ವಿಜಯಾರದ್ದು ಇಲ್ಲಿಯವರೆಗೂ ಇದನ್ನೇ ಸಾಧಿಸಿಕೊಂಡು ಬಂದಿದ್ದಾರೆ.

---

೨. ಡಿ.ವಿ.ಎಸ್. ಗುಪ್ತ : ಇಗೋ ನಮ್ಮವರು, ಮು. ಸಂ. ೧೫೫೧, ಸರಸ್ವತಿ ಪ್ರಕಾಶನ ೨೦೦೦

ವೈವಾಹಿಕ ಜೀವನ :

1975ರಲ್ಲಿ ಆಂಧ್ರಪ್ರದೇಶದ ವಿದ್ಯುತ್ ಇಲಾಖೆಯಲ್ಲಿ ಇಂಜಿನಿಯರ್ ಆಗಿದ್ದ ಶ್ರೀ ಸುಬ್ಬರಾಜುರವರೊಡನೆ ವಿವಾಹವಾದ ವಿಜಯಾರವರ ವೈವಾಹಿಕ ಜೀವನ ಸುಂದರವೂ ಸುಖಮಯವೂ ಆಗಿದೆ. ಇವರ ಏಕಮಾತ್ರ ಪುತ್ರಿ ಚಿ.ಸೌ, ಮೃಣಾಲಿನಿಯವರು ಕ್ಲಿನಿಕಲ್ ಸೈಕಾಲಜಿಯಲ್ಲಿ ಎಂ.ಎಸ್ಸಿ ಮಾಡಿದ್ದಾರೆ. ಡಾ. ವಿಜಯಾ ಸುಬ್ಬರಾಜ್‌ರವರ ಅಳಿಯ ಹೆಚ್.ಎಸ್. ಶ್ರೀ ಹರ್ಷ ಆಟೋ ಮೊಬೈಲ್ ಇಂಜಿನಿಯರ್. ಟೊಯೋಟ ಕಿರ್ಲೋಸ್ಕರ್ ಕಂಪನಿಯಲ್ಲಿ ಸೀನಿಯರ್ ಇಂಜಿನಿಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪತಿ ಸುಬ್ಬರಾಜ್‌ರವರ ಪ್ರೀತಿಯ ಬೆಂಬಲ ಪ್ರೋತ್ಸಾಹಗಳಿಂದಾಗಿ ವಿಜಯಾರವರು ತಮ್ಮ ಸಾಹಿತ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಕಾರಣವಾಗಿದೆ ಎಂಬುದನ್ನು ಈಗಲೂ ಸ್ಮರಿಸುತ್ತಾರೆ.

ವೃತ್ತಿ ಜೀವನ :

ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಪ್ರತಿಷ್ಠಿತ ಎಂ.ಇ.ಎಸ್ ಕಾಲೇಜಿನಲ್ಲಿ ಅಧ್ಯಾಪಕಿಯಾಗಿ ಸೇರಿದ ವಿಜಯಾ ಸುಬ್ಬರಾಜ್‌ರವರು ಅಲ್ಲಿಯೇ ಸುಮಾರು 35 ವರ್ಷಗಳ ಕಾಲ ಸುದೀರ್ಘವಾಗಿ ಸೇವೆ ಸಲ್ಲಿಸಿ ಸಾವಿರಾರು ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ ಸಾಹಿತ್ಯದ ಬೋಧನೆ ಮಾಡಿ ನಿವೃತ್ತರಾದರು. ನಿವೃತ್ತಿ ನಂತರವೂ ಇದೇ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಮುಂದುವರೆಸುತ್ತಿದ್ದಾರೆ. ಇದರ ಜೊತೆಗೆ ಬೆಂಗಳೂರಿನ ಮಾಯಾರಾವ್‌ರವರ ನಾಟ್ಯ ಇನ್ಸಿಟ್ಯೂಟ್ ಆಫ್ ಕಥಕ್ ಅಂಡ್ ಕೋರಿಯಾಗ್ರಫಿ ಸಂಸ್ಥೆಯಲ್ಲಿ ಅತಿಥಿ ಪ್ರಾಧ್ಯಾಪಕರಾಗಿ ಇಂಗ್ಲೀಷ್ ಬೋಧನೆ, ಶೇಷಾದ್ರಿಪುರಂ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಅತಿಥಿ ಪ್ರಾಧ್ಯಾಪಕಿ. ಕಳೆದ ೭ ವರ್ಷಗಳಿಂದ ಬಸವನಗುಡಿಯಲ್ಲಿರುವ ಹಂಪಿ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರವಾದ ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನದಲ್ಲಿನ ಸಂಶೋಧನಾ ಕೇಂದ್ರದ ಸಂಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಮಾರ್ಗದರ್ಶನದಲಿ ೨೦ಕ್ಕೂ ಹೆಚ್ಚು ಎಂ. ಫಿಲ್. ವಿದ್ಯಾರ್ಥಿಗಳು ಪದವಿ ಪಡೆದುಕೊಂಡಿದ್ದಾರೆ. ಹೀಗೆ ನಿವೃತ್ತಿ ನಂತರವೂ ಸುಮ್ಮನೆ ಕೂರದೆ ಸದಾ ಸಾಹಿತ್ಯದ ಒಂದಲ್ಲಾ ಒಂದು ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ :

ನವ್ಯಕವಿ ಗೋಪಾಲಕೃಷ್ಣ ಅಡಿಗರಿಂದ ಪ್ರೇರಣೆಗೊಂಡ ಡಾ॥ ವಿಜಯಾ ಸುಬ್ಬರಾಜ್‌ರವರು ಮೊದಲು ಕವಿತೆಗಳ ರಚನೆಯಲ್ಲಿ ತೊಡಗಿಸಿಕೊಂಡರು. ಅನಂತರ ಕನ್ನಡ ಸಾಹಿತ್ಯದ ವಿವಿಧ ಪ್ರಕಾರದಲ್ಲಿ ಕೃತಿ ರಚನೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡ ಇವರು ಇದುವರೆಗೆ ಸುಮಾರು ೭೫ ಪ್ರಕಟಿತ ಕೃತಿಗಳ ಮೂಲಕ ಕನ್ನಡ ಸಾಹಿತ್ಯದ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ೧೯೮೨ರಲ್ಲಿ ಪ್ರಕಟವಾಗದ 'ತ್ರಿಶಂಕು' ಇವರ ಮೊದಲ ಕವನ ಸಂಕಲನ. ನಂತರ ಅನೇಕ ಕವನ ಸಂಕಲನಗಳು ಹೊರಬಂದವು. ಕಾದಂಬರಿಗಳು, ಕಥಾ ಸಂಕಲನಗಳು ಜೀವನ ಚರಿತ್ರೆಗಳು, ನಾಟಕಗಳು, ಪ್ರವಾಸಕಥನ ಮಕ್ಕಳ ಸಾಹಿತ್ಯ ಸಂಶೋಧನೆ, ವಿಮರ್ಶೆ, ಅನುವಾದ ಸಾಹಿತ್ಯ ಹೀಗೆ ಹತ್ತು ಹಲವು ರೀತಿಯಲ್ಲಿ ಸಾಹಿತ್ಯ ಕೃಷಿಗೈದರು. ಇವುಗಳ ಜೊತೆಗೆ ಆಕಾಶವಾಣಿ ಬರಹಗಳು, ಸಂಭಾವನಾ ಗ್ರಂಥಗಳಿಗೆ ಲೇಖನಗಳು, ಪತ್ರಿಕೆಗಳಿಗೆ, ಅಂಕಣ ವಿಮರ್ಶೆಗಳನ್ನು ಬರೆದು ಅತ್ಯುತ್ತಮ ವಿಮರ್ಶಕಿಯಾಗಿ ಸಾರಸ್ವತ ಲೋಕದಲ್ಲಿ ಪ್ರಸಿದ್ಧರಾಗಿದ್ದಾರೆ. ತರಂಗ ವಾರಪತ್ರಿಕೆಯಲ್ಲಿ 'ಶಾಲ್ಮಲಿ' ಕಾದಂಬರಿ ಮತ್ತು 'ಕನ್ನಡ ಕಾವ್ಯ ಪರಂಬರೆಯಲ್ಲಿ ಪ್ರೀತಿಯ ನೆಲೆಗಳು 'ಧಾರವಾಹಿಗಳಾಗಿ

ಪ್ರಕಟಗೊಂಡಿವೆ. ಪತ್ರಿಕೆಗಳಿಗೆ, ವಿಶೇಷಾಂಕಗಳಿಗೆ ಬರೆದ ಕಥೆ, ಕವನ ಲೇಖನಗಳ ಮೂಲಕ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ವಿಮರ್ಶೆ ಮಾಡುವ ಪ್ರೌಢಿಮೆ ಇರುವ ಏಕಮಾತ್ರರೆಂದು ಗುರುತಿಸಿಕೊಂಡಿದ್ದಾರೆ. ಹೀಗೆ ಸಾಹಿತ್ಯದ ರಚನಾತ್ಮಕ ಚಟುವಟಿಕೆಗಳಲ್ಲಿ ಸೃಜನಶೀಲರಾಗುವ ಮೂಲಕ ಸಾಹಿತ್ಯದ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಛಾಪನ್ನು ಒತ್ತಿದ್ದಾರೆ.

ಪ್ರಕಟಿತ ಕೃತಿಗಳು :

ಕವನ ಸಂಕಲನಗಳು :– 1)ತ್ರಿಶಂಕು 2)ಏನು ಹೇಳಲಿ ಗೆಳೆಯ 3)ಹಾಡೇನ ಪಾಡೇನ 4) ಈ ತೆರೆದ ನಿರೀಕ್ಷೆಯಲ್ಲಿ 5)ವಸುಂಧರೆಯ ಪ್ರಾಯ 6) ಸಖಿ ಬಾ ಸಂಚಾರಕೆ 7) ಅಕ್ಕನ ವಚನಗಳು (ಇಂಗ್ಲೀಷಿಗೆ ಅನುವಾದ) 8)ಅಂಬಿಗರ ಚೌಡಯ್ಯ (ಇಂಗ್ಲಿಷಿಗೆ ಅನುವಾದ) 9) ಮಾತು ಮೌನಗಳ ನಡುವೆ (ಸಮಗ್ರ ಕಾವ್ಯ) 10) ಪರ್ಷಿಯನ್ ಕವಿತೆಗಳು (ಅನುವಾದ) 11) ನೆನಪು ನೆರಳಿನ ಹಾದಿಯಲ್ಲಿ

ಕಾದಂಬರಿಗಳು : – 1)ಸೌರಭಸೇತು / ಬುವಿಯಿಂದ ಬಾನಿಗೆ 2)ಹರಿದತ್ತ ಹರಿವ ಚಿತ್ತ 3) ತಪ್ಪಿದ ಹೆಜ್ಜೆಗಳು 4) ನಡು ವಯಸ್ಸಿನಲ್ಲಿ 5) ಶಾಲ್ಮಿಲಿ (ಅನುವಾದ) 6) ಕಾದಂಬರಿ ಲೋಕ 7)ಸೂರ್ಯಕಾಂತಿಗಳ ಮಡಿಲಲ್ಲಿ (ಅನುವಾದ) 8) ಪ್ರಾಣಿಗಳ ಪ್ರಭುತ್ವ (ಅನುವಾದ) 9) ಒಂದು ನೂರು ವರ್ಷಗಳ ಏಕಾಂತ (ಅನುವಾದ) 10) ಶಿಶಿರ ಕಾವ್ಯ (ಅನುವಾದ) 11) ಡೋರಿಯನ್ ಗೇನ ಭಾವಚಿತ್ರ 12) ಬೆಸುಗೆಯ ಬಂಧನದಲ್ಲಿ

ಕಥಾ ಸಂಕಲನಗಳು :– 1) ಮಾ ನಿಷಾದ 2) ಅದೇ ಮುಖ 3) ಕಾಣದ ದಿಕ್ಕಿನತ್ತ 4) ಲುಷುನ್‌ರ ಎರಡು ನೀಳ್ಗತೆಗಳು (ಚೀನೀ ಭಾಷೆಯಿಂದ ಕನ್ನಡಕ್ಕ) 5) ಹುಚ್ಚನ ದಿನಚರಿ ಮತ್ತು ಇತರ ಕತೆಗಳು (ಚೀನೀ ಭಾಷೆಯಿಂದ ಕನ್ನಡಕ್ಕೆ) 6) ಕನ್ನಡ ಕಾವ್ಯ ಪರಂಪರೆಯಲ್ಲಿ ಪ್ರೀತಿಯ ನೆಲೆಗಳು (ಕನ್ನಡ ಕಾವ್ಯಗಳಲ್ಲಿನ ಪ್ರೀತಿ ಸಂದರ್ಭಗಳ ಕಥಾರೂಪಗಳು) 7) ಕಥಾಂತರಂಗ (ಕಥಾ ಸಮಗ್ರ)

ಜೀವನ ಚರಿತ್ರೆ :– 1) ಮಹಾದೇವಿ ವರ್ಮಾ 2) ಅಕ್ಕಮಹಾದೇವಿ (ಕನ್ನಡದಿಂದ ಇಂಗ್ಲಿಷಿಗೆ) 3)ಹರಿಹರನ ಕಾವ್ಯದಲ್ಲಿ ಬಸವಣ್ಣ 4)ರಾಘವಾಂಕನು ಚಿತ್ರಿಸಿದ ಸಿದ್ಧರಾಮ 5) ಚಾಮರಸನ ಪ್ರಭುಲಿಂಗ ಲೀಲೆಯಲ್ಲಿ ಅಲ್ಲಮಪ್ರಭು 6) ನಿಜಗುಣ ಶಿವಯೋಗಿ 7) ಬಾಲ ಲೀಲಾ ಮಹಾಂತ ಶಿವಯೋಗಿ 8) ನಲುಗಿ–ಮಿನುಗಿದವರು 9) ಪೊಟ್ಟಿ ಶ್ರೀರಾಮುಲು 10) ಪ್ರೊ॥ ಮಳಗಿ 11) ಪ್ರೊ॥ ವಿ.ಎಂ. ಇನಾಂದಾರ್

ನಾಟಕಗಳು :– 1) ಪಾಂಚಾಲಿ 2) ಪಾದ್ರಿಯೊಬ್ಬನ ಕತೆ 3) ನಗರ ಮದು ಸಾಲವತಿ 4) ಮತ್ತೊಂದು ಮಹಾಭಾರತ 5) ಮಿಲನ 6) ದಂಗೆಯೆದ್ದವಳು 7) ಪ್ರೇಮ ಸಮಾಧಿ 8) ಕಟಕಟೆಯಲ್ಲಿ ನಿಂತು 9) ರಂಗದಂಗಳ (ನಾಟಕ ಸಮಗ್ರ) 10) ಶ್ರೀ ಪೃಥ್ವೀವಲ್ಲಭ (ಧಾರಾವಾಹಿಯಾಗಿ ಆಕಾಶವಾಣಿಯಲ್ಲಿ ಪ್ರಸಾರವಾದ ನಾಟಕ) 11) ಜನಮೇಜಯನ ನಾಗಯಜ್ಞ (ಅನುವಾದ) 12)ಆಷಾಢದ ಒಂದು ದಿನ.
ಪ್ರವಾಸ ಕಥನ : 1) ಸ್ವರ್ಗ ದೀಪದ ಕನಸಿನ ಬೆನ್ನೇರಿ

ಸಂಶೋಧನೆ ವಿಮರ್ಶೆ 1) ಕನ್ನಡದಲ್ಲಿ ಗೀತನಾಟಕಗಳ ಅಧ್ಯಯನ (ಸಂಶೋಧನೆ) 2) ಸ್ಪಂದನ 3)ಸಮಾಲೋಚನ 4) ಅಕ್ಕನ ವಚನಗಳಲ್ಲಿ ಪ್ರತಿಭಟನೆ ಮತ್ತು ಅನುಭವ 5) ಪು.ತಿ.ನಗೀತನಾಟಕಗಳಲ್ಲಿ ತಾತ್ವಿಕ ಚಿಂತನೆಗಳು 6) ಮಂಥನ 7) ಸಂಸ್ಕೃತಿ ದನಿಗಳು (ಅಂಕಣ ವಿಮರ್ಶೆ) 8) ಭೃಂಗಯಾನ.

ಮಕ್ಕಳ ಸಾಹಿತ್ಯ : 1) ಕಾಗಾಯಣ – ನಾಟಕ 2)ರಾಮಾಯಣ – ಕನ್ನಡ 3) ರಾಮಾಯಣ – ಕನ್ನಡದಿಂದ ಇಂಗ್ಲಿಷಿಗೆ 4) ಮಹಾಭಾರತ – ಕನ್ನಡ 5) ಮಹಾಭಾರತ – ಕನ್ನಡದಿಂದ ಇಂಗ್ಲಿಷಿಗೆ 6) ಹನುಮಾನ್ (ಅಚ್ಚಿನಲ್ಲಿ) 7) ಶ್ರೀಕೃಷ್ಣ (ಅಚ್ಚಿನಲ್ಲಿ) 8) ಪೌರಾಣಿಕ ಏಕಾಂಕಗಳು (ಅಚ್ಚಿನಲ್ಲಿ) 9) ಬಸವಣ್ಣ 10) ಪಂಚತಂತ್ರ (ನಾಟಕ ರೂಪಾಂತರ) (ಕನ್ನಡದಲ್ಲಿ) 11) ಪಂಚತಂತ್ರ (ನಾಟಕ ರೂಪಾಂತರ) (ಇಂಗ್ಲಿಷಿನಲ್ಲಿ) 12) ಪುಣ್ಯಕೋಟಿ (ನಾಟಕ) 13) ಕಿಂದರಿ ಜೋಗಿ (ನಾಟಕ)

ಪ್ರಶಸ್ತಿಗಳು/ಗೌರವ ಪುರಸ್ಕಾರಗಳು :

ಡಾ. ವಿಜಯಾ ಸುಬ್ಬರಾಜ್‌ರವರು ಕನ್ನಡ ಭಾಷೆ, ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿದ ಅನೇಕ ಸಂಘಸಂಸ್ಥೆಗಳು ಇವರಿಗೆ ಸುಮಾರು 30 ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಪ್ರಶಸ್ತಿಗಳ ಜೊತೆಗೆ ಅನೇಕ ರೀತಿಯ ಗೌರವ ಪುರಸ್ಕಾರಗಳು ಇವರ ಮುಡಿಗೇರಿಕೊಂಡಿವೆ.

ಪ್ರಶಸ್ತಿಗಳು

1. ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ವಿ.ಪ್ರಥಮರ್‍ಯಾಂಕ್‌ಗಾಗಿ ಸುವರ್ಣಮಹೋತ್ಸವದ ಚಿನ್ನದ ಪದಕ.
2. ಎಂ.ಇ.ಎಸ್. ಕಾಲೇನಿಂದ 'ಏನು ಹೇಳಲಿ ಗೆಳೆಯಾ' ಕವನ ಸಂಕಲನಕ್ಕೆ ರಜತೋತ್ಸವ ಪದಕ.
3. ಕನ್ನಡ ಸಾಹಿತ್ಯ ಪರಿಷತ್ ಪ್ರಶಸ್ತಿ 'ಏನು ಹೇಳಲಿ ಗೆಳೆಯಾ' ಕವನ ಸಂಕಲನಕ್ಕೆ
4. ನೀಲಗಂಗಾ ಪ್ರಶಸ್ತಿ – 'ಹಾಡೇನ ಪಾಡೇನ' ಕವನ ಸಂಕಲನಕ್ಕೆ
5. ಅತ್ತಿಮಬ್ಬೆ ಪ್ರಶಸ್ತಿ 'ಹಾಡೇನ ಪಾಡೇನ' ಕವನ ಸಂಕಲನಕ್ಕೆ
6. ಕಡಂಗೋಡ್ಲು ಸಂಕರಭಟ್ಟರ ಪ್ರಶಸ್ತಿ – 'ಈ ತೆರದ ನಿರೀಕ್ಷೆಯಲ್ಲಿ' ಕವನ ಸಂಕಲನಕ್ಕೆ
7. ಪರ್ಲ ಪ್ರಶಸ್ತಿ– 'ವಸುಂಧರೆಯ ಪ್ರಾಯ' ಕವನ ಸಂಕಲನಕ್ಕೆ
8. ದೊಂಬಿವಲಿ ಕರ್ನಾಟಕ ಸಂಘ ಪ್ರಶಸ್ತಿ – 'ಅಮ್ಮ' ಕವನಕ್ಕೆ.
9. ಮಹಾಮಸ್ತಕಾಭಿಷೇಕ ಪ್ರಶಸ್ತಿ – 'ರೂಪದರ್ಶಿ' ಕವನಕ್ಕೆ
10. ಕಂದಗಲ್ ಹಣಮಂತರಾವ್ ಪ್ರಶಸ್ತಿ – 'ಪಾದ್ರಿಯೊಬ್ಬನ ಕತೆ' ನಾಟಕಕ್ಕೆ
11. ಗೊರೂರು ಪ್ರಶಸ್ತಿ – 'ಪಾಂಚಾಲಿ ಮತ್ತು ಇತರ ನಾಟಕಗಳು' ಸಂಕಲನಕ್ಕೆ
12. ಸಂಜೀವಾಣಿ ಪ್ರಶಸ್ತಿ – 'ಪಾಂಚಾಲಿ' ನಾಟಕಕ್ಕೆ
13. ಮಲ್ಲಿಕಾ ಪ್ರಶಸ್ತಿ – 'ಪಾಂಚಾಲಿ ಮತ್ತು ಇತರ ನಾಟಕಗಳು' ಸಂಕಲನಕ್ಕೆ
14. ದೊಂಬಿವಲಿ ಕರ್ನಾಟಕ ಸಂಘ ಪ್ರಶಸ್ತಿ – 'ಸ್ವರ್ಗ ದ್ವೀಪದ ಕನಸಿನ ಬೆನ್ನೇರಿ' ಲೇಖನಕ್ಕೆ
15. ಗೊರೂರು ಪ್ರಶಸ್ತಿ – 'ಸ್ವರ್ಗ ದ್ವೀಪದ ಕನಸಿನ ಬೆನ್ನೇರಿ' ಪ್ರವಾಸ ಕಥನಕ್ಕೆ
16. ಶಾರದಾ ಸಾಹಿತ್ಯ ಶ್ರೀ ಪ್ರಶಸ್ತಿ – 'ಬುವಿಯಿಂದ ಬಾನಿಗೆ' ಕಾದಂಬರಿಗೆ
17. ಆದರ್ಶ ಶಿಕ್ಷಕ ಪ್ರಶಸ್ತಿ – 2002. ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದಿಂದ
18. ಸುಭದ್ರಾ ಕುಮಾರಿ ಚೌಹಾನ್ ಶತಮಾನೋತ್ಸವ ಪ್ರಶಸ್ತಿ.
19. ಕೆಂಪೇಗೌಡ ಪ್ರಶಸ್ತಿ – 2005 ಸಾಹಿತ್ಯ ಸಾಧನೆಗೆ
20. ಅತ್ತಿಮಬ್ಬೆ ಪ್ರಶಸ್ತಿ – 2006 ಸಾಹಿತ್ಯ ಸಾಧನೆಗೆ
21. ಕರ್ನಾಟಕ ಅನುವಾದ ಅಕಾಡೆಮಿ ಪ್ರಶಸ್ತಿ–2007 'ಶಾಲ್ಮಲಿ ಕಾದಂಬರಿಯ ಅನುವಾದಕ್ಕೆ
22. ಎಚ್.ವಿ. ಸಾವಿತ್ರಮ್ಮ ದತ್ತಿ ಪ್ರಶಸ್ತಿ ('ಸೂರ್ಯಕಾಂತಿಗಳ ಮಡಿಲಲ್ಲಿ' ಕಾದಂಬರಿಗೆ).
23. ಆರ್ಯಭಟ ಪ್ರಶಸ್ತಿ
24. ಡಾ॥ ಅನುಮಪ ಪ್ರಶಸ್ತಿ
25. ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ
26. ಕಮಲಾಂಜಿನಿ ಪ್ರಶಸ್ತಿ.
27. ಕುವೆಂಪು ಭಾಷಾ ಭಾರತಿ ಗೌರವ ಪ್ರಶಸ್ತಿ

28. ಕರ್ನಾಟಕ ಸಂಘದ ಎಸ್.ವಿ. ಪರಮೇಶ್ವರಭಟ್ಟ ಪ್ರಶಸ್ತಿ
29. ಅಂತಾರಾಷ್ಟ್ರೀಯ ಶಾಂತಿ ಪ್ರಶಸ್ತಿ
30. ಮನುಶ್ರೀ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.

ಬಹುಮುಖ ವ್ಯಕ್ತಿತ್ವದ ಡಾ. ವಿಜಯಾ ಸುಬ್ಬರಾಜ್‌ರವರು ಕನ್ನಡ ಸಾಹಿತ್ಯ ಪರಿಷತ್‌ನಿಂದ ಪ್ರಕಟವಾಗುವ ಮಾಸಿಕ ಪತ್ರಿಕೆಯಾದ "ಕನ್ನಡ ನುಡಿ" ಪತ್ರಿಕೆಯ ಮೊಟ್ಟ ಮೊದಲ ಮಹಿಳಾ ಸಂಪಾದಕಿಯಾಗಿದ್ದರು. ಕರ್ನಾಟಕ ಲೇಖಕಿಯರ ಸಂಘ'ದ ಉಪಾಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದ್ದಾರೆ. ನಂಜನಗೂಡು ತಿರುಮಲಾಂಬ ಪ್ರಶಸ್ತಿ ಸಮಿತಿ, ರತ್ನಮ್ಮ ಹೆಗಡೆ ಪ್ರಶಸ್ತಿ ಸಮಿತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿ ಆಯ್ಕೆ ಸಮಿತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿ ಆಯ್ಕೆ ಸಮಿತಿ, ಕರ್ನಾಟಕ ಸರ್ಕಾರದ ದಾನ ಚಿಂತಾಮಣಿ, ಅತ್ತಿಮಬ್ಬೆ ಪ್ರಶಸ್ತಿ ಆಯ್ಕೆ ಸಮಿತಿ, ಕನ್ನಡ ಪುಸ್ತಕ ಪ್ರಾಧಿಕಾರದ ಪುಸ್ತಕ ಪ್ರಕಟಣೆ ಆಯ್ಕೆ ಸಮಿತಿಯಲ್ಲಿ ಗೌರವ ಸದಸ್ಯೆಯಾಗಿ ತಮ್ಮ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ.

ಕನ್ನಡ ಸಾಹಿತ್ಯದಲ್ಲಿ ಆಸಕ್ತಿಯುಳ್ಳ ಯುವಜನಾಂಗಕ್ಕೆ ಮಾರ್ಗದರ್ಶನ ನೀಡಲು ವಿಜಯಾ ಸುಬ್ಬರಾಜ್ ಸದಾ ಸಿದ್ಧರು. ಕಥೆ, ಕವನ, ಕಾದಂಬರಿ, ನಾಟಕ, ವಿಮರ್ಶೆ, ಭಾಷಣ, ಕಲೆ ಮುಂತಾದವುಗಳಲ್ಲಿ ಶಿಭಿರಗಳನ್ನು ಆಯೋಜಿಸುವವರಿಗೆ ಸೂಕ್ತ ಸಲಹೆ ಹಾಗೂ ಬೆಂಬಲ ನೀಡುತ್ತಾರೆ. ನಾಡಿನ ಅನೇಕ ಸಂಘ-ಸಂಸ್ಥೆಗಳು ಇವರ ಭಾಷಾ ಪ್ರೌಢಿಮೆ, ವಿದ್ವತ್‌ಗಳನ್ನು ಗುರುತಿಸಿ ಸದುಪಯೋಗ ಪಡೆದುಕೊಳ್ಳುತ್ತಿವೆ. 'ಬೆಳಗಾಗ ನಾನೆದ್ದು ಯಾರ್ಯಾರ ನೆನೆಯಲಿ' ಎಂಬ ಮಾತಿನಚಿತೆ ನಮ್ಮ ಸಾಹಿತಿಗಳನ್ನು ನೆನೆಯುವಾಗ ಮೊದಲ ಸಾಲಿನಲ್ಲಿ ಡಾ. ವಿಜಯಾ ಸುಬ್ಬರಾಜ್‌ರವರು ನಿಲ್ಲುತ್ತಾರೆ.

ಕೊನೆಯದಾಗಿ ಡಾ. ವಿಜಯಾ ಸುಬ್ಬರಾಜ್‌ರವರ ಬಗ್ಗೆ ಹೇಳುವುದಾದರೆ "ಅಹಮಿಕೆಯನ್ನು ಹತ್ತಿರ ಸುಳಿಯಲು ಬಿಡದ ಅವರೊಳಗೆ ಎಲ್ಲರನ್ನು ಅಕ್ಕರೆಯಿಂದ ಬರಮಾಡಿಕೊಳ್ಳುವ ತಾಯಿ ಇದ್ದಾಳೆ. ನಿರ್ವಿಕಾರ ಭಾವದಿಂದ ಎಲ್ಲವನ್ನು ಕಾಣುವ ಮಗುವಿನ ಮನಸ್ಸಿದೆ; ಇಳಿ ವಯಸ್ಸಿನಲ್ಲಿಯೂ ಉತ್ಸಾಹವನ್ನು ಪುಟಿದೇಳಿಸುವ ಯುವಚೇತನ. ಶ್ರದ್ದೆಯೇ ಮೂರ್ತಿವೆತ್ತ ವಿದ್ಯಾರ್ಥಿ; ಮಮಕಾರದ ಸಾಕಾರ ಮೂರ್ತಿಯಂತಿರುವ ಅವರ ಮಾತು ಮೃದುವಚನ. ಕೇಳುತ್ತಿದ್ದರೆ ಕೇಳುತ್ತಲೇ ಇರಬೇಕೆಂಬ ಇಂಪು, ಮೊಗೆದರೂ ಮುಗಿಯದ ವಿದ್ವತ್ತು. ಇವರಲ್ಲಿ ಕಾಣಬಹುದು."[೩] ಹೀಗೆ ಬಹುಮುಖ ಕ್ಷೇತ್ರಗಳ ಸೇವೆ. ಸಾಹಿತ್ಯ ಸಂಶೋಧನೆ ಸಂಘಟನೆ ಮುಂತಾದ ರಂಗಗಳಲ್ಲಿ ಅವರು ಸಲ್ಲಿಸಿರುವ ಸೇವೆ ಅನನ್ಯವಾದುದು. ಪ್ರಾಧ್ಯಾಪಕರಾಗಿ ಅಸಂಖ್ಯ ಶಿಷ್ಯರಿಗೆ ಬೋಧಿಸುತ್ತಲೇ, ತಾವೂ ವಿದ್ಯಾರ್ಥಿಯಂತೆ ಓದಿನ ಒಡನಾಟವನ್ನು ಇಟ್ಟುಕೊಂಡ ಡಾ. ವಿಜಯಾ ಸುಬ್ಬರಾಜ್‌ರವರು ಸಾಧನೆಯ ಎತ್ತರಕ್ಕೇರಿದರು.

---

೩. ಡಾ. ಕೊಂ. ವೆಂ. ರಾಮಕೃಷ್ಣೇಗೌಡ : ಸಮಕಾಲೀನ ಪುಟಸಂಖ್ಯೆ – ೪೨ ಅವ್ವ ಪ್ರಕಾಶನ ೨೦೧೭

ಅಧ್ಯಾಯ ೬

ಬೆಸುಗೆಯ ಬಂಧನದಲ್ಲಿ ಕಾದಂಬರಿಯಲ್ಲಿನ ಸ್ತ್ರೀ ಸಂವೇದನೆಯ ನೆಲೆಗಳು

ಅ) ದಾಂಪತ್ಯದ ನೆಲೆಯಲ್ಲಿ

ಆ) ಕೌಟುಂಬಿಕ ನೆಲೆಯಲ್ಲಿ

ಇ) ಸಾಮಾಜಿಕ ನೆಲೆಯಲ್ಲಿ

ಅಧ್ಯಾಯ ೬

ಬೆಸುಗೆಯ ಬಂಧನದಲ್ಲಿ ಕಾದಂಬರಿಯಲ್ಲಿನ ಸ್ತ್ರೀ ಸಂವೇದನೆಯ ನೆಲೆಗಳು

ಪ್ರಪಂಚದ ಎಲ್ಲಾ ಸ್ತ್ರೀಯರು ಪುರುಷ ಪ್ರಧಾನ ವ್ಯವಸ್ಥೆಯ ಕಾರಣವಾಗಿ ಒಂದಿಲ್ಲೊಂದು ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾರೆ. ಭಾರತೀಯ ಸಾಮಾಜಿಕ ಜನಜೀವನದಲ್ಲಿಯಂತೂ ಹೆಣ್ಣು ಸಾಕಷ್ಟು ಶೋಷಣೆ ಅನುಭವಿಸಿದ್ದಾಳೆ. ಭಾರತೀಯ ಸಾಹಿತ್ಯದಲ್ಲಿ ಕೂಡ ಹೆಣ್ಣನ್ನು ತ್ಯಾಗಮಯಿ, ಕರುಣಾಮಯಿ ಎಂಬಂತೆಯೇ ಚಿತ್ರಿಸಲಾಯಿತು. ಅದಕ್ಕೂ ಹೆಚ್ಚಾಗಿ ಹೆಣ್ಣು ಅಲ್ಪ ಬುದ್ದಿಯಾಕೆ, ಸ್ವವಿವೇಚನೆ ಇಲ್ಲದಾಕೆ, ಎಲ್ಲ ಸಮಸ್ಯೆಗಳಿಗೂ ಮೂಲವಾದವಳು ಎಂಬಂತಹ ದೂಷಣೆಗಳಿಗೇನೂ ಕೊರತೆಯಿಲ್ಲ. ಸಾಂಕೇತಿಕವಾಗಿ ಮಾತ್ರ ಹೆಣ್ಣನ್ನು ಹಾಡಿ ಹೊಗಳುವ ಭಾರತದಲ್ಲಿ ಅದಿಯಿಂದಲೂ ಹೆಣ್ಣು ಶೋಷಣೆಗೀಡಾಗಿಯೇ ಬದುಕು ನಡೆಸಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಸ್ತ್ರೀಯರು ಪ್ರಜ್ಞಾವಂತರಾಗಿ ಪುರುಷನ ಪರಮಾಧಿಕಾರವನ್ನು ತಿರಸ್ಕರಿಸಿ, ಸಮಬದುಕಿನ ಸಲುವಾಗಿ ಹೋರಾಟ ಆರಂಭವಾದರೂ ಅದು ಭಾರತಕ್ಕೆ ಕಾಲಿಡಲು ತುಂಬ ಕಾಲ ಕಾಯಬೇಕಾಯಿತು. ಕನ್ನಡ ಸಾಹಿತ್ಯವನ್ನು ತೆಗೆದುಕೊಂಡಾಗಲೂ ಅಲ್ಲಿ ಬರುವ ವಿಚಾರಗಳು ಹೆಣ್ಣನ್ನು ತೀರಾ ಉದಾತ್ತಗೊಳಿಸುವ ಮತ್ತು ತೀರ ಕ್ಷುಲ್ಲಕಗೊಳಿಸುವ ಮಾದರಿಗಳೇ ಕಂಡುಬರುತ್ತವೆ. ವಚನ ರಚನ ಕಾಲದ ಹನ್ನೆರಡನೆಯ ಶತಮಾನದಲ್ಲಿ 20ರಷ್ಟು ಪ್ರಖರ ವಿಚಾರಧಾರೆಯ ಮೂಲಕ ಚಲನೆ ಕಂಡುಬಂದಿತಾದರೂ ಅದು ಅನಂತರದಲ್ಲಿ ಮರೆಯಾಯಿತು.

"ಸ್ತ್ರೀವಾದದ ಹಿನ್ನೆಲೆಯಲ್ಲಿ ಇಂದು ವ್ಯಾಪಕವಾಗಿ ಸ್ತ್ರೀಪರ ದೃಷ್ಟಿಕೋನವೊಂದು ಬೆಳೆಯುತ್ತಿರುವ ಪರಿಣಾಮವಾಗಿ ಹೆಣ್ಣು ಪಾತ್ರಗಳ ವಿವೇಚನೆ ಮಾಡುವ ಮತ್ತು ಆ ಮೂಲಕ ಚರಿತ್ರೆಯನ್ನು ಪುನರ್ಪರಿಶೀಲಿಸುವ ಪ್ರಯತ್ನಗಳು ನಡೆಯುತ್ತ ಬಂದಿದ್ದು ಸಾಹಿತ್ಯ ಓದಿಗೆ ಒಂದು ಸ್ತ್ರೀವಾದಿ ಶಿಸ್ತಿನ ಆಯಾಮ ಒದಗಿಸಿಕೊಡುತ್ತದೆ. ಸಾಹಿತ್ಯದ ಬಹುಮುಖೀ ಓದುಗಳಿಗೆ ಇದು ನಮ್ಮನ್ನು ಪರಿಚಯಿಸುವುದಾದರೂ ಸಾಕಷ್ಟು ಬಿಕ್ಕಟ್ಟುಗಳಿಗೂ ದಾರಿ ಮಾಡಿಕೊಟ್ಟಿದೆ. ಹೆಣ್ಣೆಂಬ ಜೀವಿಯ ಅಸ್ತಿತ್ವಕ್ಕೆ ಮಹತ್ವಕೊಟ್ಟು ಅವಳ ಜಗತ್ತು ಪೂರ್ವಗ್ರಹ ಇಲ್ಲದೆ ಉದಾರವಾಗಿ ನೋಡುವ ಪ್ರಯತ್ನಗಳ ದಿಸೆಯಲ್ಲೇ ಸರಳೀಕರಣದ ಓದಿನ ನಮ್ಮನ್ನು ಒಯ್ಯುವ ಅಪಾಯಗಳನ್ನು ತಂದೊಡ್ಡಿದೆ."[೧]

ಈ ಅಪಾಯಗಳಲ್ಲಿ ಮೊದಲನೆಯದು ಸ್ತ್ರೀ ಅಸ್ಮಿತೆಯ ಏಕಶಿಲಾ ರೂಪದ ಗ್ರಹಿಕೆ ಬಹುಮುಖೀ ವ್ಯಕ್ತಿತ್ವಗಳ ಸಾಧ್ಯತೆಯನ್ನು ಅಳಿಸಿ ಹಾಕುವಂತದ್ದು. ಉದಾಹರಣೆಗೆ ಜಾತೀಯತೆಯಿಂದ ಕೂಡಿದ ನಮ್ಮ ಸಮಾಜದಲ್ಲಿ ಬ್ರಾಹ್ಮಣ ಸ್ತ್ರೀಯ ಅನುಭವಗಳು ದಲಿತ ಸ್ತ್ರೀಯ ಅನುಭವಗಳು ಭಿನ್ನವಾಗಿರಲು ಸಾಧ್ಯ. ಇದಲ್ಲದೆ ಜಾತಿಯೊಳಗೆ ಇರುವ ಉಪಜಾತಿ, ಮೇಲ್ವರ್ಗ, ಕೆಳವರ್ಗ, ಸಂಸ್ಕೃತಿ, ಬುಡಕಟ್ಟು ಸಂಸ್ಕೃತಿ ಹೀಗೆ ಹಲವಾರು ವೈವಿಧ್ಯಗಳು ತುಂಬಿರುವ ಸಮಾಜದಲ್ಲಿ ಬದುಕುತ್ತಿರುವ ಮಹಿಳೆಯರ ಅನುಭವಗಳು ಏಕರೂಪವಾಗಿರುವುದಿಲ್ಲ.

ಎರಡನೆಯದಾಗಿ ಪುರುಷ ಸಮಾಜದ ಲೋಪದೋಷಗಳ ಹಿನ್ನೆಲೆಯಲ್ಲಿ ಸ್ತ್ರೀ ಸಂವೇದಿಯಾದ ಪ್ರತಿಭಟನೆ ಹೊಮ್ಮುವ ಸಾಧ್ಯತೆಯಲ್ಲೂ ಸಾಮ್ಯತೆ ಇಲ್ಲ. ಸ್ತ್ರೀಯರ ಹೋರಾಟಗಳಲ್ಲಿ ಭಿನ್ನ ಸ್ತರಗಳಿವೆ. ಮುಖ್ಯವಾಗಿ ಅವು ಹೋರಾಟಗಳಾಗಿ ನಿರೂಪಿಸಲ್ಪಡುವುದು ಜಾತಿ, ವರ್ಗ, ಸಂಸ್ಕೃತಿ ನಿಶ್ಚಿತತೆಗಳಿಂದಾಗಿದೆ.

ಮೂರನೆಯದಾಗಿ ಸ್ತ್ರೀಪರ ಪುರುಷ ದೃಷ್ಟಿಕೋನವು ಅತಿಯಾದ ಲಾಲನೆಯಿಂದ ಕೆಲವೊಮ್ಮೆ ವಿಭಿನ್ನತೆಯ ವೈಕಲ್ಯಕ್ಕೂ ಒಳಗಾಗಬಹುದು.

---

೧. ಸ್ತ್ರೀವಾದಿ ಪರಿಕಲ್ಪನೆಗಳು : ಕೆ. ಕೇಶವ ಶರ್ಮಾ, ಪು. ಸಂ. ೩೪೦, ದೇಸೀ ಪ್ರಕಾಶನ ೨೦೧೩

ನಾಲ್ಕನೆಯದಾಗಿ ಪ್ರತಿಭಟನೆಯ ನೆಲೆಯಲ್ಲಿಯೇ ಹುಟ್ಟುವ ಸ್ತ್ರೀ ಸಂವೇದಿ ನಿಲುವುಗಳು ಸಾಹಿತ್ಯದ ಸಾಧ್ಯತೆಗಳನ್ನು ಮಿತಿಗೊಳಿಸಿ ವಾಚ್ಯತೆಯಲ್ಲಿಯೇ ನಿಲ್ಲುವ ಸಾಧ್ಯತೆ ಇದೆ.

ಸ್ತ್ರೀಯರ ಬರವಣಿಗೆಗಳು ಈ ಎಲ್ಲಾ ಅಪಾಯಕಾರಿ ಹಂತಗಳನ್ನು ಎದುರಿಸುತ್ತಲೇ ಬಂದಿದ್ದು, ಈಗ ಬರೆಯುತ್ತಿರುವ ಅನೇಕ ಬರಹಗಾರ್ತಿಯರು ಈ ಸವಾಲುಗಳನ್ನು ಎದುರಿಸಿ ನಿಂತಿದ್ದಾರೆ. ಕ್ರಿಯಾಶೀಲವಾಗಿ ಅಭಿವ್ಯಕ್ತಿಸಿ ಸಂವೇದನೆಗಳನ್ನು ರೂಪಿಸಿಕೊಂಡ ಈ ಬರಹಗಾರ್ತಿಯರಲ್ಲಿ ಬರಹತ್ವದೆಡೆಗೆ ತುಡಿಯುವ ಕಾತುರ ಇರುವುದು ಕಾಣತೊಡಗಿದೆ. ಇದೊಂದು ಆಶಾದಾಯಕ ಸೂಚನೆ ಮತ್ತು ಸಾಹಿತ್ಯದ ಮಟ್ಟಿಗೆ ಒಂದು ಹೊಸ ಮಜಲು ಎನ್ನುವಂತಿದೆ.

ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು ಎನ್ನುವ ವಿಷಯವು ಬಹುದೊಡ್ಡ ವ್ಯಾಪ್ತಿಯುಳ್ಳದ್ದು. ಈ ವಿಷಯವನ್ನು ಒಂದು ಕಾದಂಬರಿಗೆ ಅನ್ವಯಿಸಿ ಹೇಳುವುದು ತುಂಬಾ ಕಷ್ಟಕರ ವಿಷಯವಾಗಿದೆ. ಅದರಲ್ಲಿ ತಿರುಮಲಾಂಬ ಅವರಿಂದ ಹಿಡಿದು ವೈದೇಹಿಯವರ ತನಕ ಈ ನಿಟ್ಟಿನಲ್ಲಿ ಚರ್ಚೆಗಳು ನಡೆದಿದ್ದು ಅನಂತರದ ಬರಹಗಳನ್ನು ನೋಡಬೇಕಾದ ಅಗತ್ಯವಿದೆ. ಸ್ತ್ರೀ ಸಂವೇದನೆಯ ನೆಲೆಗಳು ಮುಟ್ಟುತ್ತಿರುವ ಹಾದಿಗಳನ್ನು ಗುರುತಿಸುವ ಪುಟ್ಟ ಪ್ರಯತ್ನ ಇದಾಗಿದೆ. ಸ್ತ್ರೀ ಸಂವೇದನೆಯ ನೆಲೆಗಳನ್ನು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಗುರುತಿಸುವಾಗ ಸಹಜನೆಲೆ ಎಂದೂ ಪ್ರಜ್ಞಾಪೂರ್ವಕ ನೆಲೆ ಎಂದೂ ವಿಶಾಲಾರ್ಥದಲ್ಲಿ ವಿಂಗಡಿಸಿಕೊಳ್ಳಬಹುದು 'ಬೆಸುಗೆಯ ಬಂಧನದಲ್ಲಿ' ಕೃತಿಯ ಕಾದಂಬರಿಯೂ ಹೌದು, ದಾಂಪತ್ಯದ ಕಥನ, ದಾಂಪತ್ಯ ಚರಿತ್ರೆಯೂ ಹೌದು. ಹಾಗಾಗಿ ಇಲ್ಲಿ ದಾಂಪತ್ಯದ ನೆಲೆಯಲ್ಲಿ, ಕೌಟುಂಬಿಕ ನೆಲೆಯಲ್ಲಿ, ಹಾಗೂ ಸಾಮಾಜಿಕ ನೆಲೆಯಲ್ಲಿ ಸಂದರ್ಭನುಸಾರಿಯಾಗಿ ಹೊರ ವಿವರಗಳಿಂದ, ಸ್ವಗತಗಳಿಂದ ಅಂತರ್-ಬಹಿರ್ ಚಿತ್ರವನ್ನು ಸಮಗ್ರವಾಗಿ ಕಟ್ಟಿಕೊಡುವ ಪ್ರಯತ್ನವಾಗಿದೆ.

ಅ) ದಾಂಪತ್ಯದ ನೆಲೆಯಲ್ಲಿ

ಕುಟುಂಬವೂ ಒಂದು ರಥವಿದ್ದಂತೆ ಗಂಡ ಹೆಂಡತಿಯರಿಬ್ಬರೂ ರಥದ ಚಕ್ರಗಳು. ರಥದ ಒಂದು ಚಕ್ರ ವಾಲಿದರೂ ರಥ ಉರುಳುತ್ತದೆ. ಹಾಗೆಯೇ ಗಂಡ ಹೆಂಡತಿಯರಿಬ್ಬರೂ ದಾಂಪತ್ಯದಲ್ಲಿ ಸಮಪಾಲನ್ನು ಹೊಂದಿರಬೇಕು. ಪ್ರೀತಿ, ಪ್ರೇಮ ತ್ಯಾಗ ಸಹನೆಗಳು ಇಬ್ಬರಲ್ಲೂ ಇದ್ದಾಗ ಮಾತ್ರ ಒಬ್ಬರನ್ನೊಬ್ಬರು ಅರ್ಥೈಸಿಕೊಂಡು ಸುಖವಾಗಿರಲು ಸಾಧ್ಯ. ದಾಂಪತ್ಯದಲ್ಲಿ ಎಂದಿಗೂ ಪ್ರಥಮ ಪ್ರಾಶಸ್ತ್ಯ ದೊರೆಯುವುದು ಪ್ರೀತಿಗೆ "ಗಂಡನೇ ಸರ್ವಸ್ವ ಪತಿಯೇ ಪರದೈವ" ಎಂದು ನಂಬಿರುವ ಮಹಿಳೆ ತನ್ನ ಸರದಾರನ ಪ್ರೀತಿಯಲ್ಲಿಯೇ ಸೇರುವ ಬಳಗವನ್ನು ದುಃಖ ದುಮ್ಮಾನಗಳನ್ನು ಮರೆಯಬಲ್ಲಳು. 'ಹಾಸಿಗೆ ಹಾಸೆಂದಾ, ಮಲ್ಲಿಗಿ ಮುಡಿಯಂದಾ, ಬ್ಯಾಸತ್ತರ ಮಲಗೆಂದಾ ನನ್ನ ರಾಯ ನನ್ನ ನೋಡಿ ತವರ ಮರೆಯಂದಾ "ಇಂಥ ಅನ್ಯೋನ್ಯ ದಾಂಪತ್ಯವಿದ್ದಲ್ಲಿ ಗರತಿಯ ಬದುಕು ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಿರುತ್ತದೆ." "ಕಷ್ಟ ಬರಲಿ ಸುಖ ಬರಲಿ ಸದಾ ಗಂಡನೊಂದಿಗೆ ಇರಲು ಇಚ್ಛಿಸುತ್ತಾಳೆ. ತನ್ನ ಗಂಡ ಸಮೀಪವಿದ್ದಾಗ ಅಡವಿಯ ಅರಮನೆಯಂತೆ ಕಾಣುವ ಗರತಿಗೆ ಆತ ದೂರ ಹೋದನೆಂದರೆ ಇದ್ದ ಅರಮನೆಯೂ ಆಕೆಗೆ ಮಸಣವಾಗುತ್ತದೆ.

ಮದುವೆಯ ಸದ್ದುಗದ್ದಲ ನಿಂತಿತು. ಕಸ್ತೂರ ಬಾ ಅತ್ತೆಯ ಮನೆಯತ್ತ ಹೊರಡಲು ಗಾಡಿ ಹತ್ತಿದಳು. ಸಾಕಷ್ಟು ಪ್ರಯಾಣದ ನಂತರ ಅತ್ತೆ ಮನೆ ತಲುಪಿದ ಕಸ್ತೂರಳಿಗೆ ಸಣ್ಣಗೆ ಹೆದರಿಕೆಯಾಯಿತು. ತಾನು ಹೋಗುತ್ತಿರುವ ಪರಿಸರ, ಮನೆಯೊಳಗಿನ ಜನ ಹೇಗಿರುತ್ತಾರೋ, ಯಾವ ರೀತಿ ತನ್ನನ್ನು ಎದುರುಗೊಳ್ಳುತ್ತಾರೋ ಎಂದು ಯೋಚಿಸಿದಳು. ಅತ್ತೆಯಾದ ಪುತಲಿಬಾಯಿ ಪ್ರೀತಿಯಿಂದ 'ಹೊಸ್ತಿಲಲ್ಲಿ

ಇರಿಸಿರುವ ಅಕ್ಕಿಯ ಪಾತ್ರೆಯನ್ನು ಕಾಲಿನ ಹೆಬ್ಬೆರಳಿನಿಂದ ಒದ್ದು ಒಳಗೆ ಬಾ ಮಗು" ಎಂದು ಪ್ರೀತಿಯಿಂದ ಹೇಳಿದಳು. ಇಲ್ಲಿಂದ ಕಸ್ತೂರ ಬಾಳ ದಾಂಪತ್ಯ ಕಥನ ಆರಂಭವಾಗುತ್ತದೆ.

"ಹಿಂದೂ ಸಮಾಜದಲ್ಲಿ ಆ ಕಾಲದಲ್ಲಿ ಪ್ರತಿಯೊಬ್ಬ ಪುರುಷನೂ ತಾನು ಗಂಡನಾಗಿ ಕೈ ಹಿಡಿದ ಹೆಂಡತಿಯಿಂದ ವಿನಯ, ವಿಧೇಯತೆ, ಪತಿನಿಷ್ಠೆ, ಪತಿಭಕ್ತಿ, ಪ್ರಾಮಾಣಿಕತೆಗಳನ್ನು ನಿರೀಕ್ಷಿಸುವುದು ಸಾಮಾನ್ಯವಾಗಿತ್ತು. ಅಲ್ಲದೆ ಆ ರೀತಿಯ ನಿರೀಕ್ಷೆ ತಮ್ಮ ಜನ್ಮಸಿದ್ಧ ಹಕ್ಕು ಪುರುಷಾಂಕಾರದ ಭಾರವೆಂದು ಪರಿಗಣಿಸಲಾಗಿತ್ತು. ಇದಕ್ಕೆ ಕಸ್ತೂರ ಬಾಳ ಗಂಡ ಮೋಹನದಾಸನೂ ಹೊರತಾಗಿರಲಿಲ್ಲ.

ಹೆಂಡತಿಯ ಮೇಲೆ ಅಧಿಕಾರ ಚಲಾಯಿಸುವುದು ಪತಿಯಾದ ತನ್ನ ಧರ್ಮವೆಂದೇ ಭಾವಿಸಿದ. ಅವಳನ್ನೇ ಕರೆದು ತನಗೆ ತಿಳಿಸದೆ ಮನೆಯಿಂದ ಹೊರಗೆ ಹೆಜ್ಜೆ ಇಡಬಾರದೆಂದು ತನ್ನ ಅಪ್ಪಣೆಯಿಲ್ಲದೆ ಏನನ್ನು ಮಾಡಬಾರದೆಂದೂ ತಾಕೀತು ಮಾಡಿದ. ಆಗ ಕಸ್ತೂರ ಬಾಳು ತನಗೆ ಮಾತ್ರವೇ ಏಕೆ ಈ ನಿರ್ಬಂಧ ಎಂದು ತನ್ನಲ್ಲೆ ಪ್ರಶ್ನಿಸಿಕೊಂಡಳು.

ಮೊದಲ ಬಸಿರು. ತಿಂಗಳು ತಿಂಗಳು ಸರಿದಂತೆ ತನ್ನೊಳಗೆ ಆಗುತ್ತಿದ್ದ ಬದಲಾವಣೆಗಳ ಪುಳಕ ಅನುಭವಿಸುತ್ತಿದ್ದಳು. ಹುಟ್ಟುವ ಮಗುವಿನ ಕಲ್ಪನೆಯಲ್ಲಿ ಏನೇನೋ ಕನಸುಗಳು! ಜೊತೆಗೆ ಮನೆ ಮಂದಿಯೆಲ್ಲ ಬಸಿರಿ ಹೆಂಗಸಾದ ತನ್ನ ಬಗ್ಗೆ ತೋರುತ್ತಿದ್ದ ಕಾಳಜಿ, ಪ್ರೀತಿಗಳು ಅವಳನ್ನು ಮುಗ್ಧಳಾಗುವಂತೆ ಮಾಡಿದ್ದವು. ತಾಯಿಯಾಗುವ ಸಿಹಿ ಅನುಭವದ ಜೊತೆಗೆ ಹೆರಿಗೆಯ ಸಂಕಷ್ಟಗಳು ನೆನಪಾದಂತೆ ಸಣ್ಣಗೆ ಕಂಪಿಸುತ್ತಿದ್ದಳು. ಏನಾದರೂ ಅನಾಹುತವಾದರೆ! ಎಂದು ಯೋಚಿಸುತ್ತಿದ್ದಳು. ಆದರೆ ಮರುಕ್ಷಣವೇ ಎಷ್ಟೊಂದು ಮಂದಿ ತನ್ನಂತೆ ಮಕ್ಕಳನ್ನು ಹಡೆದಿಲ್ಲ! ತನ್ನ ಅತ್ತೆಯೇ ಕಣ್ಮುಂದಿದ್ದಾರೆ! ಹಾಗಿರುವಾಗ ತಾನೇಕೆ ಹೆದರಬೇಕು ಎಂದು ತನಗೆ ತಾನೇ ಧೈರ್ಯ ತಂದುಕೊಳ್ಳುತ್ತಿದ್ದಳು.

ಮನೆಯಲ್ಲಿ ವಿಚಿತ್ರ ವಾತಾವರಣ ನಿರ್ಮಾಣವಾಯಿತು. ಆ ಮನೆಯಲ್ಲಿ ಶಾಪವೆಂಬಂತೆ ದುರಂತದ ಮೇಲೆ ದುರಂತ ಸಂಭವಿಸಿತು. ಸಾವಿನ ಶೋಕ ಮತ್ತು ಮಗುವಿನ ಜನನದ ಸಂತೋಷ ಈ ಎರಡೂ ವೈರುಧ್ಯಗಳು ಒಟ್ಟಿಗೆ ಇರಬಾರದೆಂದೇ ಬಹುಶಃ ಕರಮಚಂದರ ಸಾವಿನ ನಾಲ್ಕು ದಿನಗಳ ನಂತರ ಕಸ್ತೂರ ಬಾಳಿಗೆ ಮಗು ಹುಟ್ಟಿತಾದರೂ ಅದೂ ಕೂಡ ಕೇವಲ ನಾಲ್ಕೇ ದಿನಗಳಿದ್ದು ಭೂಮಿಯ ಋಣ ತೀರಿಸಿಕೊಂಡಂತೆ ಸಾವನ್ನಪ್ಪಿತು. ಮೊದಲ ಸಂತಾನವೇ ದುರಂತದ ಕಾರ್ಮೋಡ ಕವಿಸಿ ಕಾಣದಾಯಿತು. ಈ ಆಘಾತ ಕಸ್ತೂರಳನ್ನು ಹಿಂಡಿ ಹಿಪ್ಪೆ ಮಾಡಿತು. ಮಾವನ ಸಾವಿಗೆ ಅಳಬೇಕೇ, ಮಗುವಿನ ಸಾವಿಗೆ ಅಳಬೇಕೇ? ದಿಕ್ಕು ತೋಚದಾಯಿತು. ಎರಡೂ ಸಾವುಗಳು ಮನೆ ಮಂದಿಯನ್ನು ಜರ್ಝರಿತಗೊಳಿಸಿತ್ತಾದರೂ, ವಯಸ್ಸಾಗಿದ್ದ, ಅನಾರೋಗ್ಯ ಪೀಡಿತರಾಗಿದ್ದ ಕರಮಚಂದರ ಸಾವಿಗಿಂತ ಮೊಳಕೆಯೊಡೆದು ಚಿಗುರಿ ಹೆಮ್ಮರವಾಗಬೇಕಿದ್ದ ವಂಶದ ಕುಡಿ ಅಕಾಲದಲ್ಲಿ ಮುರುಟಿ ಹೋದದ್ದು ಹೆಚ್ಚಿನ ದುಃಖವನ್ನು ಉಂಟುಮಾಡಿತ್ತು. ಮಗನನ್ನು ಕಳೆದುಕೊಂಡ ದುಃಖ ಒಂದು ಕಡೆ ತೀಕ್ಷ್ಣವಾಗಿ ಕಾಡುತ್ತಿದ್ದರೆ ಕಸ್ತೂರಳ ಪುತ್ರ ಶೋಕ ಅವಳಲ್ಲಿ ಸಾಕಷ್ಟು ಬದಲಾವಣೆ ತಂದಿತು. ಮುಖದಲ್ಲಿ ಮೊದಲಿನ ಗೆಲುವಿರಲಿಲ್ಲ. ಅದೇ ಮಗು ಬದುಕಿದ್ದರೆ ಎಂಥ ಸಂಭ್ರಮವಿರುತಿತ್ತು. ನೆಂಟರು, ಸ್ನೇಹಿತರು, ಬಂಧು-ಬಳಗ, ಹಾಡು, ಕುಣಿತ, ಉಡುಗೊರೆ ಹೀಗೆಲ್ಲಾ ಕಲ್ಪಿಸಿಕೊಂಡಷ್ಟೂ ಅವಳೆದೆಯಾಳದ ನೋವು ಬೆಂಕಿಯಂತೆ ಸುಡುತ್ತಿತ್ತು. ಆದರೂ ಅಂತಹ ನೋವನ್ನು ಯಾರ ಮುಂದೆಯೂ ಹೇಳಿಕೊಳ್ಳಲಿಲ್ಲ. ಮೌನವಾಗಿ ನುಂಗಿಕೊಂಡು ದಿನನಿತ್ಯದ ಕೆಲಸಗಳಲ್ಲಿ ಸ್ವಲ್ಪಮಟ್ಟಿಗೆ ಮರೆಯಲು ಯತ್ನಿಸಿದಳು.

ಗಂಡ ಹೆಂಡಿರ ಸಂಬಂಧದಲ್ಲಿ ಯಾವುದೇ ಏರುಪೇರು ಇಲ್ಲದಿದ್ದರೂ ಆಘಾತಕಾರಿಯಾದ ಕೆಲವು ಸಂಗತಿಗಳು ಜರುಗಿದವು. ಮೋಹನದಾಸನ ಹಿರಿಯಣ್ಣ ಕೃಷ್ಣದಾಸನ ಸ್ನೇಹಿತನಾಗಿದ್ದ ಷೇಕ್ ಮೆಹತಾಬ್ ಎಂಬುವವನ ಸ್ನೇಹಕ್ಕೆ ಬಿದ್ದಿರುವ ಗಂಡನ ವಿಚಾರ ಕಸ್ತೂರಳ ಗಮನಕ್ಕೆ ಬಂತು. ಆ ಹೊಸ ಸ್ನೇಹಿತನ ನಡತೆ ಅಷ್ಟು ಚೆನ್ನಾಗಿರಲಿಲ್ಲ. ಮಾಂಸಹಾರ, ಕುಡಿತಗಳ ಚಟಕ್ಕೆ ಬಿದ್ದಿರುವ ಗಂಡನಿಗೆ ಎಷ್ಟೋ ಸಲ ಬುದ್ಧಿ ಹೇಳಿದಳು. ಅಂಥವನ ಸಹವಾಸದಿಂದ ದೂರವಿರಲು ಬಹಳವಾಗಿ ಕೇಳಿಕೊಂಡಳು. ಕಸ್ತೂರ ಬಾ ಇಲ್ಲಿ ಅಂದಿನ ಸಮಾಜದ ಶ್ರೇಷ್ಠ ಆದರ್ಶ ಗೃಹಿಣಿಯಂತೆ ಮೂಡಿ ಬರುತ್ತಾಳೆ.

"ನೋಡಿ, ನೀವು ನನ್ನ ಪತಿ. ನಾನೇ ನನ್ನ ಪತಿಯನ್ನು ಅವಮಾನಕ್ಕೆ ಗುರಿ ಮಾಡುತ್ತೇನೆಯೇ? – ಆದರೆ ಎಂದೂ ಸುಳ್ಳು ಹೇಳಲು ಇಷ್ಟಪಡದ ನೀವು ಈ ಸುಳ್ಳನ್ನು ನಿಮ್ಮ ತಂದೆ ತಾಯಿ ಎದುರು ಇಷ್ಟು ನಿರಾಳವಾಗಿ ಒಂದಿಷ್ಟು ಅನುಮಾನ ಬಾರದಂತೆ ಹೇಳಲು ಸಾಧ್ಯವಾದದ್ದಾದರೂ ಹೇಗೆ? ಇದೇ ರೀತಿ ಸುಳ್ಳನ್ನು ಮುಂದುವರೆಸಿ ನೀವು ಮಾಂಸವನ್ನು ಸೇವಿಸುತ್ತಲೇ ಇರಬಹುದು, ಸೇವಿಸಿದರೂ ನನಗೇನೂ ತಿಳಿಯುವುದಿಲ್ಲ. ಆದ್ದರಿಂದ ತಿನ್ನುವುದು, ಬಿಡುವುದು ನಿಮ್ಮ ನಿರ್ಧಾರಕ್ಕೆ ಬಿಟ್ಟದ್ದು" ಎಂದ ಸುಮ್ಮನಾದಳು. ಸಾಮಾನ್ಯ ಮನೆತನದ ಸ್ತ್ರೀಯಾದರೂ ತಾಳ್ಮೆ, ಸಹನೆಯ ಅಧಿದೇವತೆಯಂತೆ ಇಲ್ಲಿ ಕಸ್ತೂರ ಬಾ ಕಂಗೊಳಿಸುತ್ತಾಳೆ.

ಗೆಳೆಯಾ ಮೆಹತಾಬನ ಮಾತಿನಿಂದ ಪ್ರೇರಣೆಗೊಂಡ ಮೋಹನದಾಸ ಕಸ್ತೂರ ಬಾ ಮೇಲೆ ಅನುಮಾನ ವ್ಯಕ್ತಪಡಿಸಿದನು. ಒಂದು ದಿನ ರಾತ್ರಿ "ನಿಜ ಹೇಳು, ನೀನು ನನ್ನನ್ನು ಪ್ರೀತಿಸುತ್ತಿರುವೆಯಾ, ನಾನು ನಿನಗೆ ಗಂಡನಾಗಿರುವುದು ಇಷ್ಟವಿಲ್ಲವೇ? ನನಗೂ ಮೊದಲು ಯಾರನ್ನಾದರೂ ಪ್ರೀತಿಸಿದ್ದೆಯಾ? ಎಂದು ಕೇಳಿದನು. ಮೋಹನ ದಾಸನ ಮಾತನ್ನು ಕೇಳಿದ ಕಸ್ತೂರ ಬಾ ಗೆ ನೋವಾದರು ಭೂಮಿ, ಜಲ, ಲಕ್ಷ್ಮಿ, ಶಾರದೆ ಎಲ್ಲವೂ ಸಹ ಹೆಣ್ಣಿಗೆ ಕ್ಷಮಯಾ ಧರಿತ್ರಿ ಎಂದಿದ್ದಾರೆ. ಹಾಗೆ ಇಲ್ಲಿ ಕಸ್ತೂರ ಬಾ ವರ್ತಿಸುತ್ತಾಳೆ.

ಮೋಹನದಾಸನು ಇಂಗ್ಲೆಂಡಿಗೆ ಹೋಗಿ ವಕೀಲಿ ಓದಿ ಬ್ಯಾರಿಸ್ಟರ್ ಪದವಿ ಪಡೆಯಲು ಹೋಗುವ ಸಂದರ್ಭದಲ್ಲಿ "ಹೊತ್ತಲ್ಲದ ಹೊತ್ತಲ್ಲಿ ಕಸ್ತೂರಳ ಬಳಿಗೆ ಬಂದು "ಕಸ್ತೂರ' ಎಂದು ಹೆಸರಿಡಿದು ಕರೆದ. ಗಂಡನೆಡೆಗೆ ಒಮ್ಮೆ ನೋಟ ಹರಿಸಿದಳು. ಯಾವುದೋ ಸಮಸ್ಯೆಯಲ್ಲಿ ಸಿಲುಕಿದ್ದಂತೆ ಕಾಣಿಸಿದ.

"ಏನು ಬಂದಿರಿ? ಯಾಕೆ ಮುಖ ಬಾಡಿದೆ? ಏನಾದರೂ ಸಮಸ್ಯೆಯೇನು?" ಎಂದು ಕೇಳಿ ಒಂದೆರಡು ಕ್ಷಣ ಬಿಟ್ಟು "ಸಮಸ್ಯೆ ನಿಮಗೇನಿರಲು ಸಾಧ್ಯ? ಈಗಂತೂ ನೀವು ವಿದೇಶಕ್ಕೆ ಹೋಗಲಿದ್ದೀರಿ. ದೊಡ್ಡ ದೊಡ್ಡ ಓದು, ಪದವಿ, ಅಲ್ಲಿ ಸುಖವಾಗಿರುತ್ತೀರಿ. ನಿಮಗೆ ಹೆಂಡತಿ ಮಕ್ಕಳ ಚಿಂತೆಯಾದರೂ ಯಾಕೆ ಬೇಕು?" ಎಂದಳು.

"ಕಸ್ತೂರ ನೀನಾಡುವ ವ್ಯಂಗ್ಯದ ಮಾತುಗಳು ಏನೆಂದು ಅರ್ಥ ಮಾಡಿಕೊಳ್ಳಬಲ್ಲೆ, ಅವು ನಿನ್ನ ಸಿಟ್ಟಿನಿಂದ ಹುಟ್ಟಿದುದಲ್ಲ. ನನ್ನ ಮೇಲಿನ ಪ್ರೀತಿಯಿಂದ ಹುಟ್ಟಿವೆ. ನನ್ನ ಅಗಲಿಕೆ ನಿನಗೆ ನೋವುಂಟು ಮಾಡಿದೆ. ಗೊತ್ತು. ನನಗೂ ಅದೇ ರೀತಿಯಲ್ಲಿ ನೋವಾಗಿದೆ. ಈಗ ನನ್ನ ಮುಂದಿರುವ ಸಮಸ್ಯೆಗೆ ಪರಿಹಾರ ಸಿಕ್ಕರೆ ಮಾತ್ರವೇ ಈ ಅಗಲಿಕೆ ಮಾತುಗಳು" ಎಂದು ಸುಮ್ಮನಾದ.

"ಮೊದಲು ನಿಮ್ಮ ಸಮಸ್ಯೆ ಏನೆಂದು ಹೇಳಿದರೆ ತಾನೇ ಪರಿಹಾರ ಯೋಚಿಸುವುದು" ಎಂದಳು. "ನನ್ನ ವಿದೇಶ ಪ್ರಯಾಣಕ್ಕೆ ಬೇಕಾದ ಹಣ ಹೊಂದಿಸುವುದು ಬಹುಶಃ ಸಾಧ್ಯವಾಗದೆಯೇ ಹೋಗಬಹುದು. ಎಲ್ಲಿಂದಲೂ, ಯಾರಿಂದಲೂ ಅಲ್ಪ ಸಹಾಯವೂ ಸಿಗುತ್ತಿಲ್ಲ. ಈ ಪ್ರಯಾಣ ನೂರು, ಹತ್ತರ ಬಾಬ್ತಲ್ಲ.

ಕನಿಷ್ಠ ಪಕ್ಷ ಐದಾರು ಸಾವಿರವಾದರೂ ಬೇಕಾದೀತು. ನೀನು ಬೇಸರ ಮಾಡಿಕೊಳ್ಳುವುದಿಲ್ಲವಾದರೆ ಒಂದೇ ಒಂದು ದಾರಿ ಇದೆ.

"ನಿನ್ನ ಒಡವೆಗಳನ್ನು ಮಾರುವುದು, ಅದರಿಂದಲೂ ಪೂರ್ತಿ ಹಣ ಸಿಗುವುದಿಲ್ಲ. ಮತ್ತೆ ಬೇರೆ ಪ್ರಯತ್ನ ಮಾಡಬೇಕು" ಎಂದ.

ಕಸ್ತೂರ ಸ್ವಲ್ಪ ಹೊತ್ತು ಯೋಚಿಸಿ "ನೋಡಿ ನಿಮ್ಮ ಅಗತ್ಯಕ್ಕೆ ಅವು ಉಪಯೋಗಕ್ಕೆ ಬರುವುದೆಂದಾದರೆ ಹಾಗೆಯೇ ಮಾಡಿ, ನಾನೇನೂ ಅವುಗಳನ್ನು ಮೈಮೇಲೆ ಹೇರಿಕೊಂಡು ತಿರುಗಾಡಬೇಕಾದ್ದಿಲ್ಲ" ಎಂದಳು.

ಹೆಂಗಸರಿಗೆ ಒಡವೆಗಳೆಂದರೆ ಪ್ರಾಣ, ಗಂಡನನ್ನಾದರೂ ಬಿಟ್ಟುಕೊಟ್ಟಾರು ಆದರೆ ಒಡವೆಗಳನ್ನು ಬಿಟ್ಟುಕೊಡುವುದಿಲ್ಲ. ಅಂಥಾದ್ದರಲ್ಲಿ ಒಂದಿಷ್ಟು ಗೊಣಗಾಟವಿಲ್ಲದೆ ಮುಂದಾಗುತ್ತಿದ್ದಾಳೆ. ಎಂದು ಅಚ್ಚರಿ ಪಟ್ಟಿದ್ದೇ ಅಲ್ಲದೆ, ಅವಳ ಬಗ್ಗೆ ಹೃದಯತುಂಬಿ ಬಂತು. "ಇದಲ್ಲವೆ ಹಿಂದೂ ಸ್ತ್ರೀಯರ ತ್ಯಾಗ! ಎಂದು ಮನದಲ್ಲಿಯೇ ಯೋಚಿಸಿದನು.

ಸದಾ ಅವನ ಯೋಚನೆಯಲ್ಲೇ ಕಳೆಯುತ್ತಿದ್ದಳು. ಹೋಗಿ ಆಗಲೇ ಒಂದು ವರ್ಷವಾಗಿ ಹೋಗಿತ್ತು. ಮೊದಲಿನ ಹಾಗೆಯೇ ಇರುತ್ತಾನೆಯೇ? ಎಲ್ಲಿರುತ್ತಾನೆ? ಏನು ತಿನ್ನುತ್ತಾನೆ? ಯಾರ ಸಹವಾಸ ಮಾಡಿರಬಹುದು? ಕೆಟ್ಟ ಚಾಳಿಗಳಿಗೆ ಬಿದ್ದಿರಲಾರ ತಾನೆ? ಎಂದು ಸ್ವಲ್ಪ ಆತಂಕದಿಂದ ಏನೇನೋ ಊಹಿಸಿಕೊಳ್ಳುತ್ತಿದ್ದಳು. ಜೊತೆಗೆ ಇಂಗ್ಲೀಷ್ ಹುಡುಗನಾಗಿ ಹೇಗೆ ಕಾಣಬಹುದು ಎಂದು ಊಹಿಸಿಕೊಂಡು ಮುಸಿ ಮುಸಿ ನಗುತ್ತಿದ್ದಳು.

ಕಸ್ತೂರಬಾಳು ಅನುಭವಿಸಿದ ಒಂಟಿತನವೂ ಸಾಮಾನ್ಯವಾಗಿರಲಿಲ್ಲ. ಮಧುರ ಮಿಲನದ ಈ ಕ್ಷಣಗಳ ಆನಂದಾನುಭೂತಿಯ ಅನುಭವವಾಗುತ್ತಿದ್ದಂತೆ ಇಲ್ಲಿಯವರೆಗೆ ತಾನು ಕಳೆದುಕೊಂಡ ಕ್ಷಣಗಳು ಎಷ್ಟು ಅಮೂಲ್ಯವಾದದ್ದೆಂಬುದರ ಅರಿವಿನಿಂದ ಒಂದು ಕ್ಷಣ ಕಂಪಿಸಿದಳು. ಈ ಮಿಲನದಲ್ಲಿ ಅವನು ತೋರಿದ ಪ್ರೀತಿ, ನೀಡಿದ ಸುಖ ತನ್ನ ಗಂಡ ತನ್ನಿಂದ ದೂರದ ಇಂಗ್ಲೆಂಡಿನಲ್ಲಿ ಇದ್ದರೂ ಬದಲಾಗಿಲ್ಲವೆಂಬ ಸಮಾಧಾನ ಅವಳಿಗಾಯಿತು. ತನ್ನಲ್ಲಿ ಅವನ ಆಸಕ್ತಿ ಇನ್ನೂ ಅಚ್ಚ ಹಸುರಾಗಿಯೇ ಇತ್ತು.

ಮೋಹನದಾಸ ಇಂಗ್ಲೀಷ್ ಓದಿದ ವಕೀಲನಾದ್ದರಿಂದ ಹೆಚ್ಚಿನ ಶುಲ್ಕವನ್ನು ನಿರೀಕ್ಷಿಸುವುದು ಸಹಜವಾಗಿತ್ತು. ಆದರೆ ಆ ನಿರೀಕ್ಷೆಯ ಶುಲ್ಕವನ್ನು ನೀಡುವ ಕಕ್ಷಿಗಾರರು, ಸ್ಥಳಿಯರಲ್ಲಿ ಇರುವುದು ಸಾಧ್ಯವಿರಲಿಲ್ಲ. ಆದ್ದರಿಂದ ಮುಂಬಯಿಗೆ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ಗಮನಿಸಿ ಎಲ್ಲವೂ ಸಮರ್ಪಕವಾಗಿದೆಯೆಂದೆನಿಸಿದ ಮೇಲೆ ಹೆಂಡತಿ, ಮಕ್ಕಳನ್ನು ಕರೆದೊಯ್ಯಬಹುದೆಂದುಕೊಂಡು ಕಸ್ತೂರ ಬಾಳಿಗೆ ಈ ವಿಷಯವನ್ನು ತಿಳಿಸಿದ. ಮತ್ತೊಮ್ಮೆ ಅಗಲಿಕೆ ಅವಳ ಪಾಲಿಗೆ ಬಂದಿತ್ತು. ಅಗಲಿಕೆಯ ನೋವಿನ ಸುಳಿವು ಕಾಣಿಸಿಕೊಳ್ಳದಂತೆ ನಗುಮೊಗದಿಂದ ಅವನನ್ನು ಬೀಳ್ಕೊಟ್ಟಳು; ಶುಭ ಹಾರೈಸಿದಳು. ಅವನ ಆ ನಿರ್ಧಾರದಿಂದ ಮನೆಯ ಪರಿಸ್ಥಿತಿ ಸುಧಾರಿಸುವುದೇ ಅಲ್ಲದೆ ಅವನೊಬ್ಬ ಹೆಸರಾಂತ ವಕೀಲನಾಗಬೇಕೆಂಬ ಮನೆಯವರ ಕನಸೂ ಪೂರೈಸುವುದೆಂದು ಸಂತಸಪಟ್ಟಳು.

ಗಂಡ ಹಿಂತಿರುಗಿ ಬರುತ್ತಿದ್ದುದು ಅವಳಿಗೆ ಸಂತೋಷವಾದರೂ ಜೀವನ ಸಂಘರ್ಷದಲ್ಲಿ ಸೋತು ಹತಾಶನಾದ ಯೋಧನಂತೆ ಮರಳಿದ್ದು ಮಾತ್ರ ಅವಳಿಗೆ ನಾಚಿಕೆಯೆನಿಸಿತು. ಹೇಳಿಕೊಳ್ಳಲಾಗದ ಸಂಕಟವನ್ನು ಅನುಭವಿಸಿದಳು. ಉದ್ಯೋಗವಿಲ್ಲದ ಪುರುಷನ ಪ್ರೀತಿ ಎಷ್ಟಿದ್ದರೇನು? ಬೆಳೆಯುತ್ತಿರುವ ಸಂಸಾರ, ಜೀವನೋಪಾಯಕ್ಕೆ ದಾರಿಯಿಲ್ಲದೆ ದಿನ ಕಳೆಯುವುದಾದರೂ ಹೇಗೆ? ಎಂದೆಲ್ಲ ಚಿಂತಿಸಿದಳು.

ಸ್ವಲ್ಪ ಸಿಟ್ಟೂ ಬಂತು. ಆದರೂ ಸಂಭಾಳಿಸಿಕೊಂಡಳು. ತಾನೇ ಅಪರಾಧಭಾವದಿಂದ, ಅಸಹಾಯಕತೆಯಿಂದ ಬಳಲಿ ಬೆಂಡಾಗಿರುವಾಗ ತನ್ನ ಅಸಮಾಧಾನ, ಅವನನ್ನು ಮತ್ತಷ್ಟು ಕುದಿಯುವಂತೆ ಮಾಡುತ್ತದೆ ಎಂದು ಹೆದರಿ ಸುಮ್ಮನಾದಳು. ಬರುವ ಒಳ್ಳೆಯ ದಿನಗಳ ನಿರೀಕ್ಷೆಯಲ್ಲಿ ಮನೆಗೆ ಬಂದ ಹೊಸ ಅತಿಥಿ ತನ್ನೆರಡನೆಯ ಮಗ ಮಣಿಲಾಲನ ಮತ್ತು ಗಂಡನ ಸಾಮೀಪ್ಯದಲ್ಲಿ ಒಂದಷ್ಟು ಸಂತಸದ ದಿನಗಳನ್ನು ಕಳೆದಳು.

ಇದೇ ಸಂದರ್ಭದಲ್ಲಿ ಅನಿರೀಕ್ಷಿತವೆಂಬಂತೆ ಮೋಹನದಾಸನಿಗೆ ಪೋರಬಂದರಿನಲ್ಲಿ ಬಹುದೊಡ್ಡ ವ್ಯಾಪಾರ ಸಂಸ್ಥೆಯನ್ನು ನಡೆಸುತ್ತಿದ್ದ ಶ್ರೀಮಂತ ವ್ಯಾಪಾರಿ ಅಬ್ದುಲ್ಲಾ ತಮ್ಮ ದಾದಾ ಅಬ್ದುಲ್ಲಾ ಅಂಡ್ ಕಂಪನಿ, ದಕ್ಷಿಣ ಆಫ್ರಿಕಾದಲ್ಲಿದ್ದ ಇನ್ನೊಂದು ಭಾರತೀಯ ಕಂಪನಿಯ ವಿರುದ್ಧ ವಾದ ಮಾಡಲು ಮೋಹನದಾಸನನ್ನು ಆಯ್ಕೆ ಮಾಡಿದರು. ಕೇಸು ನಲವತ್ತು ಸಾವಿರ ಪೌಂಡುಗಳಿಗೆ ಸಂಬಂಧಪಟ್ಟಿದಾಗಿತ್ತು.

ಎಲ್ಲಿ ಗಂಡ ಬಂದ ಈ ಅವಕಾಶವನ್ನು ನಿರಾಕರಿಸಿ ಬಿಡುತ್ತಾನೋ ಎಂದು ಹೆದರಿದ್ದ ಕಸ್ತೂರಬಾಳಿಗೂ ಇದರಿಂದ ಸಮಧಾನವಾಯಿತು. ಮತ್ತೊಮ್ಮೆ ಅಗಲಿಕೆಯ ಅಗ್ನಿ ಪರೀಕ್ಷೆಗೆ ಸಜ್ಜಾಗಬೇಕಾಯಿತು. ಒಂದು ವರುಷಕ್ಕಾದರೂ ಚಿಂತೆಯಿಲ್ಲದೆ ಕುಟುಂಬ ಪೋಷಣೆಗೆ ದಾರಿಯಾಯಿತಲ್ಲ ಎನ್ನುವುದೂ ಮತ್ತೊಂದು ಸಂತಸದ ಸಂಗತಿಯಾಗಿತ್ತು.

"ಗಂಡ ಚೆನ್ನಾಗಿ ಸಂಪಾದಿಸಿ, ಸಮಾಜದಲ್ಲಿ ಗೌರವ ಪ್ರತಿಷ್ಠೆಗಳಿಂದ ಬಾಳುವುದನ್ನು ನೋಡಲು ಅವಳ ಒಳಮನಸ್ಸು ಹಾತೊರೆಯುತ್ತಿತ್ತು. ಈಗಿನ ಅವಕಾಶವಾದರೂ ಅವನಿಗೆ ಮುಂದೆ ಒಳ್ಳೆಯ ಭವಿಷ್ಯಕ್ಕೆ, ಕೀರ್ತಿ ಪ್ರತಿಷ್ಠೆಗಳಿಗೆ ದಾರಿ ಮಾಡುವಂತಾಗಲಿ ಎಂಬ ಮನೋಭಾವ ಪ್ರತಿಯೊಬ್ಬ ಧರ್ಮಪತ್ನಿಯ ಹಾರೈಕೆಯಾಗುತ್ತದೆ. ಎಂಬುದು ಇಲ್ಲಿ ಕಾಣಸಿಗುತ್ತದೆ.

ಈಗಾಗಲೇ ಸಾಕಷ್ಟು ಸಮಯ ಹೆಂಡತಿ ಮಕ್ಕಳಿಂದ ದೂರವಿದ್ದದ್ದೂ ಕೂಡ ಅವನನ್ನು ಕಾಡುತ್ತಿತ್ತು. ತನ್ನನ್ನು ಮದುವೆಯಾಗಿ ಕಸ್ತೂರಳು ನಿರಂತರ ಅಗಲಿಕೆಯ ಶಿಕ್ಷೆಯನ್ನು ಅನುಭವಿಸುತ್ತಿರುವುದು ನೆನಪಾಗಿ ಮತ್ತು ಸಂಕಟಕ್ಕೆ ಒಳಗಾದ. ಅವಳ ವಿಚಾರದಲ್ಲಿ ಮರುಕಗೊಂಡ. ಭಾರತಕ್ಕೆ ಬರುತ್ತಿದ್ದೇನೆ ಎಂದು ತಂತಿ ಕಳುಹಿಸಿದನು. ಗಂಡ ಬರಲಿರುವ ಸುದ್ದಿ ಕೇಳಿ ಕಸ್ತೂರಳ ಮನದ ನವಿಲು ಗರಿಗೆದರಿದರೂ, ಮರುಕ್ಷಣವೇ ಮತ್ತೆಲ್ಲಿ ಹೊರಡುವ ಮಾತು ತೆಗೆಯುತ್ತಾರೇನೋ ಎಂದು ಅಳುಕಿದಳು. ದೇವರೇ ನಮ್ಮಿಬ್ಬರನ್ನೂ ಎಲ್ಲಿಯೇ ಆಗಲಿ ಒಟ್ಟಿಗೆ ಇರುವಂತೆ ಕರುಣಿಸು ಎಂದು ಮನದಲ್ಲಿ ಪ್ರಾರ್ಥಿಸಿದಳು.

"ಕಸ್ತೂರ ನಿನ್ನ ಈ ಆಸೆಯೂ ಫಲಿಸುತ್ತೆ. ಸದ್ಯಕ್ಕೆ ಏನೂ ಹೇಳದಿದ್ದರೂ ನಿನ್ನ ಸಹಾಯ ಸಹಕಾರ ನನ್ನ ಭವಿಷ್ಯದ ಬದುಕಿಗೆ ಬಹಳವಾಗಿ ಬೇಕಾಗುವುದೋ ಏನೋ? ವಾಸ್ತವವಾಗಿ ನನಗೆ ಎಷ್ಟೋ ಸಲ ನಿನ್ನ ನೆನಪಾದದ್ದುಂಟು. ಅಂಥ ಗಳಿಗೆಗಳಲ್ಲಿ ನೀನು ಹೇಗೆ ವರ್ತಿಸುತ್ತಿದ್ದೆ ಎಂದೇ ಆಲೋಚಿಸುತ್ತಿದ್ದೆ. ಇನ್ನು ಮುಂದೆ. ನಿನಗೆ ನನ್ನನ್ನು ದೂರುವುದಕ್ಕೆ ಅವಕಾಶವನ್ನೇ ನೀಡುವುದಿಲ್ಲ. ನಾನು ನಿನ್ನನ್ನು ಸುಖವಾಗಿ ಇಡುತ್ತೇನೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಬದುಕುವ ರೀತಿಯಲ್ಲಿಯೇ ನನ್ನನ್ನು ಒಪ್ಪಿಕೊಳ್ಳುತ್ತೀ ಎಂದು ಭಾವಿಸುವೆ ಎಂದು ಹೇಳಿದಾಗ ಅವನ ದನಿಯಲ್ಲಿ ಗದ್ಗದತೆ ಇತ್ತು. ಕಸ್ತೂರಳ ಹೃದಯ ತುಂಬಿ ಬಂತು. ಅವನು ತೀರಾ ಭಾವುಕತೆಗೆ ಒಳಗಾಗಿದ್ದಾನೆಂದು ಭಾಸವಾಯಿತು.

"ಹಾಗೆಲ್ಲ ಮಾತನಾಡಬೇಡಿ, ನಿಮ್ಮ ಹೆಜ್ಜೆ ಜಾಡಿನಲ್ಲಿ ನಡೆದು ನನ್ನ ಕೊನೆಯುಸಿರಿನವರೆಗೂ ನಿಮ್ಮ ಸಹಚರಿಯಾಗಿ ಬಾಳುತ್ತೇನೆಯೇ ಹೊರತು ಹೆಂಡತಿಯೆಂಬ ಅಧಿಕಾರದಿಂದ ನಿಮ್ಮಿಂದ ನಾನು ಏನನ್ನೂ ಅಪೇಕ್ಷಿಸುವುದಿಲ್ಲ. ಸಪ್ತಪದಿ ತುಳಿದಾಗಿನ ವಚನದಂತೆ ನಿಮ್ಮೆಲ್ಲ ಕಷ್ಟ ಸುಖಗಳಲ್ಲಿ ನಾನು ಭಾಗಿಯಾಗುತ್ತೇನೆ" ಎಂದಳು.

"ಗಂಡನೇ ಗುರು ಅವ್ವ, ಗಂಡನೇ ದೇವರು ಕೇಳು
ಗಂಡನೇ ಹೊರತು ಗತಿಯಿಲ್ಲ ಹೆಣ್ಣಿಗೆ
ಗಂಡನೇ ಸಕಲ ಸೌಭಾಗ್ಯ"

ಎಂಬ ಜನಪದರ ಮಾತು ಇಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಪತಿ-ಪತ್ನಿಯರು ಪರಸ್ಪರ ಗೌರವಾದರತೆಗಳಿಂದ ಕೂಡಿರಬೇಕು ಎಂಬ ದೃಷ್ಟಿಕೋನ. ಇಲ್ಲಿ ಕಾಣಸಿಗುತ್ತದೆ.

ದಕ್ಷಿಣಾ ಆಫ್ರಿಕಾದ ಹುಡುಗರಿಂದ ಮೋಹನದಾಸನ ಮೇಲೆ ಹಲ್ಲೆ ನಡೆಸಲಾಯಿತು. ಆದರೆ ಮೋಹನದಾಸ ಹಲ್ಲೆಕೋರರ ಮೇಲೆ ಸಿಟ್ಟಾಗಲಿಲ್ಲ. ಪೋಲಿಸರಿಗೆ ದೂರು ನೀಡಲಿಲ್ಲ. ಗಂಡನ ಈ ಕ್ಷಮಾಗುಣ, ಎಂಥಾ ಪ್ರಸಂಗವಾದರೂ ಒಂದಿಷ್ಟು ಅಳಕು, ಅಳಲು ಇಲ್ಲದೆ ನಿಲ್ಲುವ ಎದೆಗಾರಿಕೆ! ತಾನು ಕೂಡ ಅವನ ಹೆಜ್ಜೆ ಜಾಡಿನಲ್ಲಿಯೇ ನಡೆಯಬೇಕು ವೀರವನಿತೆ ಎನಿಸಿಕೊಳ್ಳಬೇಕೆನಿಸಿತು. ನೀನು ಮಕ್ಕಳನ್ನು ಕರೆದುಕೊಂಡು ಹೋಗಿ ಗೆಳೆಯ ಜೀವನ್‌ಜಿ ರುಸ್ತುದಾರ್‌ಜಿ ಮನೆಗೆ ಹೋಗಿ ಎಂದಾಗ "ನಾವೇನೋ ಸುರಕ್ಷಿತವಾಗಿರಬೇಕೆಂದು ಬಯಸುತ್ತೀರಿ, ನಾವೂ ಹಾಗೆಯೇ ನಿಮ್ಮ ಸುರಕ್ಷೆ ಬಯಸುವುದು ನ್ಯಾಯವೂ, ಧರ್ಮವೂ? ಅಲ್ಲವೆ? ಎಂಬ ಹೃದಯ ತುಂಬಿದ ಮಾತುಗಳು ಕಸ್ತೂರಳಿಂದ ಹೊರಬರುತ್ತವೆ.

ಕಸ್ತೂರ ಆರೋಗ್ಯ ಹದಗೆಟ್ಟಾಗ ಮೋಹನದಾಸನು ಸಾಂತ್ವನದ ಪತ್ರ ಬರೆದು ಈ ರೀತಿ ಹೇಳುತ್ತಾನೆ. "ಇಷ್ಟಾಗಿ ಸಾಯುವುದೇ ನಿನ್ನ ಹಣೆಯಲ್ಲಿ ಬರೆದಿದ್ದರೆ ನನಗಿಂತ ಮೊದಲೇ ನೀನು ಸಾಯುವುದು ಒಳಿತು ಎಂದೆನಿಸುತ್ತದೆ. ನಿನಗೇ ಗೊತ್ತಿದೆ. ನಾನು ನಿನ್ನನ್ನು ಎಷ್ಟಾಗಿ ಪ್ರೀತಿಸುತ್ತೇನೆ ಎಂದು! ನೀನು ಬದುಕಿದ್ದಾಗ ನಿನ್ನನ್ನು ಎಷ್ಟು ಪ್ರೀತಿಸುತ್ತಿದ್ದೇನೆಯೋ ಅಷ್ಟೇ ನಂತರವೂ ಪ್ರೀತಿಸುತ್ತಿರುತ್ತೇನೆ" ಎಂದು ಗಂಡ-ಹೆಂಡತಿಯ ಅಮರವಾದ ಪ್ರೇಮದ ನುಡಿಗಳು ಹೊರಮೂಡಿರುತ್ತವೆ.

ಗಾಂಧಿಯೇ ಕಸ್ತೂರಳನ್ನು ಹೊತ್ತು ರಿಕ್ಷಾದಲ್ಲಿ ಕೂರಿಸಿದ. ಕಸ್ತೂರಳಿಗೆ ಮುಜುಗರವೋ ಮುಜುಗರ. ಇಷ್ಟೊಂದು ಜನ ನೋಡುತ್ತಿರುವಾಗ ಗಂಡ ಹೆಂಡತಿಯನ್ನು ಅಪ್ಪಿ ಹಿಡಿದು ಎತ್ತಿಕೊಳ್ಳುವುದೇ? ಸಂಕೋಚದಿಂದ ಮುದುಡಿ ಹೋದಳು. ಅವಳನ್ನು ಎತ್ತಿಕೊಂಡಾಗ, ಅವಳೆಷ್ಟು ಹಗುರವೆನ್ನುವುದು ಗಾಂಧಿ ಅನುಭವಕ್ಕೆ ಬಂದದ್ದೇ ಚಿಂತಿತನಾದ. ಎಷ್ಟೊಂದು ತೂಕ ಕಳೆದುಕೊಂಡಿದ್ದಾಳೆ ಎಂದು ದಿಗ್ಭ್ರಮೆಗೊಂಡ.

"ಬಹಳ ಸಂತೋಷ. ನನ್ನ ಹೆಂಡತಿ ನ್ಯಾಯಕ್ಕಾಗಿ ಹೋರಾಡುತ್ತಾ ಪ್ರಾಣ ಬಿಟ್ಟಳೆಂದು ಹೆಮ್ಮೆ ಪಡುತ್ತೇನೆ! ಹಾಗೆಯೇ ನಿನ್ನನ್ನು ದೇವತೆಯೆಂದು ಕೊಂಡಾಡಿ ಪೂಜಿಸುತ್ತೇನೆ. ನಿನ್ನ ಹೆಸರಿನಲ್ಲಿ ಒಂದು ಸ್ಮಾರಕವನ್ನು ಕಟ್ಟಿಸುತ್ತೇನೆ." ಎಂದಾಗ ಇಬ್ಬರೂ ಮುಗ್ಧ ಮಕ್ಕಳಂತೆ ನಕ್ಕರು. ಬಹುಶಃ ಈ ನಗು ಅವರ ಜೀವನದಲ್ಲಿ ಅವಿಸ್ಮರಣೀಯ ಕ್ಷಣಗಳಾಗಿ ಉಳಿದು ಬಿಟ್ಟಿರಬೇಕು. ಎಂತಹ ಆತ್ಮೀಯತೆ. ಒಬ್ಬರ ಆದರ್ಶ ಇನ್ನೊಬ್ಬರಿಗೆ ಮಾರ್ಗದರ್ಶಿ!.

"ಎಂದಿನಿಂದಲೂ ನಾನು ನನ್ನನ್ನು ನಿಮಗೆ ಅರ್ಪಿಸಿಕೊಂಡಿದ್ದೇನೆ. ಪ್ರತಿಕ್ಷಣವು ನಿಮ್ಮ ನೆರಳಾಗಿ ಹಿಂಬಾಲಿಸುತ್ತೇನೆ. ನಾನು ಅವಿದ್ಯಾವಂತಳು. ನಿಮಗೆ ನಾನು ಯೋಗ್ಯಳಲ್ಲ ಅನ್ನುವುದು ಗೊತ್ತಿದೆ. ಕಡೆಯ ಪಕ್ಷ ನಿಮ್ಮ ಸತ್ಯಾಗ್ರಹ ಅಹಿಂಸಾ ಹೋರಾಟ, ಆಶ್ರಮಗಳ ಸಮುದಾಯ ಬದುಕಿನ ನಿರ್ವಹಣೆಯಲ್ಲಿ ಹೆಗಲುಕೊಡುತ್ತೇನೆ. ನಿಮ್ಮದು ವಿಶಾಲವಾದ ಬದುಕು ಬಹುದೊಡ್ಡ ಕುಟುಂಬ, ನೀವು ದೇಶಕ್ಕೆ ಬೇಕು. ಹೂವಿನಿಂದ ನಾರಿಗೆ ಸ್ವರ್ಗ ಎಂಬಂತೆ ನೀವೇ ನನ್ನ ಶ್ರೇಯಸ್ಸಿನ ಏಣಿ" ಎಂದಳು.

ಗಂಡನ ಸಿಟ್ಟು, ಸೆಡುವು, ನಿರ್ಲಕ್ಷ್ಯ, ಅವಮಾನ, ಅಸಮಾಧಾನ, ಇವೆಲ್ಲವೂ ತಾನು ರೂಪುಗೊಳ್ಳುವುದಕ್ಕಾಗಿ ಸಹಿಸಿಕೊಳ್ಳಲೇಬೇಕು. ಅವನಿದ್ದಲ್ಲಿ ನಾನು. ಅವನಿಲ್ಲವೆಂದರೆ ನನ್ನ ಅಸ್ತಿತ್ವವೇ ಇರುವುದಿಲ್ಲ. ಇನ್ನೆಷ್ಟು ಕಾಲವಾದರೂ ಅವನ ಕೆಲಸಕಾರ್ಯಗಳ, ಅವನ ಕಷ್ಟ, ಸಂಕಟಗಳ, ಜೈಲುವಾಸ, ಉಪವಾಸಗಳ ಅವಿಚ್ಛಿನ್ನ ಭಾಗವಾಗಿ ನಾನು ಬದುಕಬೇಕು. ಕುಟುಂಬದಲ್ಲಿ ಪರಸ್ಪರ ಪ್ರೀತಿ, ವಾತ್ಸಲ್ಯ, ಮಮತೆ, ಕಷ್ಟ ಸುಖಗಳನ್ನು ಪರಸ್ಪರ ಸಮಾನವಾಗಿ ಹಂಚಿಕೊಂಡು ನೆಮ್ಮದಿಯಿಂದ ಸಹಬಾಳ್ವೆ ನಡೆಸುವುದರ ಪ್ರತೀಕವಾಗಿ ಕಸ್ತೂರ ಬಾ ಇಲ್ಲಿ ಕಂಡುಬರುತ್ತಾಳೆ.

ಗಾಂಧಿಯ ಈ ಸಾಂತ್ವನದ ಮಾತುಗಳಲ್ಲಿ, ಕಸ್ತೂರಬಾ ಬಗ್ಗೆ ಎದೆಯಾಳದಲ್ಲಿ ಹುದುಗಿದ್ದ ಅಪಾರ ಪ್ರೀತಿ ಅಡಗಿರುವುದು ಸ್ಪಷ್ಟವಾಗಿತ್ತು. ನೋಡಿದವರೆಲ್ಲರಿಗೂ ಅವರಿಬ್ಬರ ಅನನ್ಯತೆ, ಅನ್ಯೋನ್ಯತೆ ಒಬ್ಬರಿಗಾಗಿ ಒಬ್ಬರು ತಮ್ಮನ್ನು ಸಮರ್ಪಿಸಿಕೊಳ್ಳುತ್ತಿದ್ದ ರೀತಿಯು ಗೋಚರಿಸಿತ್ತು. ಗಾಂಧಿ ಹಲವು ಸಂದರ್ಭಗಳಲ್ಲಿ ರೇಗಾಡಿರಬಹುದಾದರೂ ಆಳದಲ್ಲಿ ಕಸ್ತೂರಳನ್ನು ತನ್ನ ಗುರುವೆಂದು, ಸತ್ಯ, ಅಹಿಂಸೆ ಶಾಂತಿಗಳ ಪ್ರತೀಕವೆಂದೂ ಭಾವಿಸಿದ್ದರು. ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡಿದ್ದರಲ್ಲದೆ, ಗಾಂಧಿ, ಕಸ್ತೂರಬಾಳನ್ನು ಅತಿಯಾಗಿ ಅವಲಂಬಿಸಿದ್ದರು. ಅವಳಿಲ್ಲದ ಬದುಕನ್ನು ತಾನೆಂದೂ ಊಹಿಸಿಕೊಳ್ಳಲಾರೆ ಎನ್ನುವ ಮಾತನ್ನು ಆಕೆ ಅನೇಕ ಸಲ ಅನೇಕ ಸಂದರ್ಭಗಳಲ್ಲಿ ವ್ಯಕ್ತಪಡಿಸಿದ್ದರು. ಅವಳಲ್ಲಿನ ಕಾರ್ಯಕ್ಷಮತೆ, ದಯೆ, ಕರುಣೆ, ದೀನ ದಲಿತರ ಬಗ್ಗೆ ಅಪಾರವಾದ ಅನುಕಂಪವನ್ನು ಮೆಚ್ಚಿಕೊಂಡಿದ್ದರು, ಗುರುತಿಸಿದ್ದರು. ಯಾವಾಗಲೂ ಅವಳು ಬಡವರ ಪರವಾಗಿಯೇ ನಿಲ್ಲುವಳೆಂಬ ಅಚಲ ನಂಬಿಕೆಗೆ ಸಾಕ್ಷಿಯಾಗುವಂತಹ ಅನೇಕ ಸಂಗತಿಗಳು ನಡೆದಿದ್ದವು.

ನಾನು ನಿಮ್ಮಗಳ ಹಾಗೆ ಈಗಿನ ಕಾಲದವಳಲ್ಲ ಗಂಡನನ್ನು ಹದ್ದು ಬಸ್ತಿನಲ್ಲಿ ಇಡಬೇಕು, ಇಲ್ಲದಿದ್ದರೆ ನಿನ್ನ ದಾರಿ ನಿನಗೆ ನನ್ನ ದಾರಿ ನನಗೆ ಎಂದು ಹೇಳುವ ಮಹಾನ್ ಸ್ವಾತಂತ್ರ್ಯ ನಮ್ಮಂಥ ಸನಾತನಿ ಹಿಂದೂಗಳಿಗೆ ಶೋಭಾಯಮಾನವಲ್ಲ. ಶಂಕರನೇ ತನ್ನ ಜನ್ಮ ಜನ್ಮಾಂತರದ ಪತಿ ಎನ್ನುವುದೇ ಪಾರ್ವತಿಯ ಪ್ರತಿಜ್ಞೆ ಆಗಿತ್ತು. ನನ್ನದೂ ಕೂಡಾ ಅಂಥದೇ ಒಂದು ಪ್ರತಿಜ್ಞೆಯಿದೆ. ನನ್ನ ಗಂಡನ ಬಗ್ಗೆ ಎಂದು ತನ್ನ ಮನಸ್ಸಿನಲ್ಲಿ ಗಂಡನ ಬಗ್ಗೆ ಇಟ್ಟುಕೊಂಡಿದ್ದ ಅಖಂಡ ಪ್ರೀತಿ, ವಿಶ್ವಾಸ, ಅಚಲವಾದ ನಿಷ್ಠೆ ನಂಬಿಕೆಗಳೇ ಗಂಡ-ಹೆಂಡಿರ ನಡುವಿನ ವಿಶ್ವಾಸ ಮುರಿದು ಮುಕ್ಕಾಗದಂತೆ ಇರಲು ಅನುವು ಮಾಡಿದ್ದವು.

ಕಸ್ತೂರಬಾ ಮೂಕ ಸಾಕ್ಷಿಯಾಗಿ ಎಲ್ಲವನ್ನೂ ಗಮನಿಸುತ್ತಿದ್ದಳೇ ಹೊರತು, ಅದರ ಕುರಿತು ಪ್ರಶ್ನಿಸುವುದಕ್ಕಾಗಲೀ, ಪ್ರತಿಭಟಿಸುವುದಕ್ಕಾಗಲೀ ಮುಂದಾಗಲಿಲ್ಲ. ಮನಸ್ಸಿನ ತುಂಬ ನೋವಿನ ಊಟೆಗಳು! ತನ್ನ ಜೊತೆಗೆ ತನ್ನ ಗಂಡ ಇಷ್ಟು ಆತ್ಮೀಯವಾಗಿ ನಡೆದುಕೊಳ್ಳಲಿಲ್ಲವೆಂದು ನೊಂದುಕೊಳ್ಳಲಿಲ್ಲ.

ಇಷ್ಟೆಲ್ಲ ರಾದ್ಧಾಂತ, ವದಂತಿಗಳ ಹರಿದಾಟ ನಡೆದಿದ್ದರೂ ಯಾರ ಯಾರ ತಪ್ಪಿಗೋ ತಾನು ಉಪವಾಸ ಮಾಡುತ್ತಿದ್ದವನು, ಸತ್ಯವಚನಕ್ಕೇ ಬದ್ಧನಾದವನು. ಸಪ್ತಪದಿ ತುಳಿದು ಜೀವನ ಸಂಗಾತಿಯಾಗಿ ಅವನೆಲ್ಲ ಧೋರಣೆಗಳಿಗೆ, ನಿಲುವು ನಡವಳಿಕೆಗಳಿಗೆ ತನ್ನನ್ನು ಕುಂಚಿಸುತ್ತಾ ಹಿಗ್ಗಲಿಸಿಕೊಳ್ಳುತ್ತಾ ಹೊಂದಿಕೊಂಡು ನಡೆಯುತ್ತಿದ್ದ 'ಬಾ' ಳ ಮುಂದೆ ತನ್ನ ದೌರ್ಬಲ್ಯ, ಸಂಕಟ, ಸಂದಿಗ್ಧ ಹೊಯ್ದಾಟಗಳನ್ನು ಮಾತ್ರ ತೋಡಿಕೊಳ್ಳಲೇ ಇಲ್ಲವಾದ್ದರಿಂದ ಮಹಾತ್ಮನಾದರೂ ಮನುಷ್ಯ ಸಹಜ ದೌರ್ಬಲ್ಯಗಳ ಸಂಕೋಲೆಯಿಂದ ಬಿಡಿಸಿಕೊಳ್ಳಲಾಗದ ಅಸಹಾಯಕತೆ ಅವನದಾಗಿತ್ತು ಎನ್ನುವುದನ್ನು ಸಾಬೀತುಮಾಡಿದ. ಆದರೆ ಕಸ್ತೂರಬಾ ಅವರಿಬ್ಬರ ಸಂಬಂಧಗಳ ಮಗ್ಗುಲುಗಳನ್ನು, ತಿರುವುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಇದ್ದಳು. ಜೊತೆಗೆ ತನ್ನ ಮಕ್ಕಳಾದ ರಾಮದಾಸ, ದೇವದಾಸರಿಂದ ಮಾಹಿತಿ, ವಿವರಣೆಗಳು ದೊರೆಯುತ್ತಿದ್ದವು ಕೂಡಾ!

ಇಷ್ಟೆಲ್ಲದರ ನಡುವೆಯೂ, ಕಸ್ತೂರಬಾ, ಗಂಡನ ಮನಸ್ಸಿನಲ್ಲಿ ನಡೆಯುತ್ತಿದ್ದ ಸಂಘರ್ಷಗಳನ್ನೂ, ಅವನಲ್ಲಿ ಉಂಟಾಗುತ್ತಿದ್ದ ಸಂಘರ್ಷಗಳನ್ನೂ ಅವನಲ್ಲಿ ಉಂಟಾಗುತ್ತಿದ್ದ ಉದ್ವಿಗ್ನತೆಗಳನ್ನೂ ಅರ್ಥಮಾಡಿಕೊಳ್ಳಲು, ಸಾಂತ್ವನ ನೀಡಲು ಪ್ರಯತ್ನಿಸುತ್ತಿದ್ದಳು. ಇಂತಹ ಮಾನಸಿಕ ಒತ್ತಡಗಳನ್ನು ತನ್ನ ಮೇಲೆ ಸಿಟ್ಟಾಗಲು ಅಸಮಾಧಾನಗೊಳ್ಳಲು, ಕಾರಣಗಳೆಂದು ಅರ್ಥೈಸುತ್ತಿದ್ದಳು. ಅವನ ರೇಗಾಟ, ಕೂಗಾಟ, ದಬ್ಬಾಳಿಕೆಗಳು ಅಂತರಂಗದ ಉದ್ವಿಗ್ನತೆ, ನೋವು ಸಂಕಟಗಳ ಹೊರರೂಪವಾಗಿದ್ದವು ಎಂದು ಗಂಡನ ಸಮರ್ಥನೆಯತ್ತಲೇ ಅವಳ ಯೋಚನೆಗಳು ಇರುತ್ತಿದ್ದವು. ಅವನ 'ಪ್ರೀತಿಯ ಕಸ್ತೂರ್' ಎನ್ನುವ ಸಂಬೋಧನೆಯಲ್ಲಿ ಗಂಡನ ಬೆಟ್ಟದಷ್ಟು ಪ್ರೀತಿ ಅಡಗಿದೆ ಎಂದು ಭಾವಿಸುತ್ತಿದ್ದಳು. ಅವನ ಮಾತುಗಳಲ್ಲಿ ಹಲವು ಬಾರಿ ಅವನಿಗೆ ತನ್ನ ಸಾಂತ್ವನ ಬೇಕಾಗಿದೆ ಎಂದು ಊಹಿಸುತ್ತಿದ್ದಳು.

"ಸರಿ ಸರಿ, ಏನೋ ಹೇಳಿ ಹೇಗೋ ಬಾಯಿ ಮುಚ್ಚಿಸಿಬಿಡುತ್ತೀರಿ. ನಾನೇನು ನಿಮ್ಮನ್ನು ಹೋರಾಟ ಮಾಡಬೇಡಿ ಎಂದು ಹೇಳಿ, ಹೇಡಿಯಂತಿರಲು ಸೂಚಿಸುತ್ತಿಲ್ಲ. ಒತ್ತಡಗಳ ನಡುವೆಯೂ ನಮ್ಮ ಕ್ಷೇಮ ಚಿಂತನೆ ಮಾಡಬೇಕಲ್ಲವೇ? ಆರೋಗ್ಯದ ಕಡೆ, ಊಟದ ಕಡೆ ಗಮನ ಹರಿಸಬೇಕಲ್ಲವೇ ಎಂದು ಪ್ರಶ್ನಿಸುತ್ತಿದ್ದೇನೆ. ಈಗ ಹೇಗಿದ್ದರೂ ಬಂದಿದ್ದೀರಿ, ಒಂದೆರಡು ದಿನ ಹೆಚ್ಚಿಗೆ ಇಲ್ಲಿದ್ದು ಹೊಟ್ಟೆ ತುಂಬ ಊಟ ಮಾಡಿ ಎಲ್ಲವನ್ನೂ ಮರೆತು ಕಣ್ತುಂಬ ನಿದ್ದೆ ಮಾಡಿ ಸುಧಾರಿಸಿಕೊಂಡು ಹೋಗಿ ಎಂದು ಮಾತ್ರ ಕೇಳಿಕೊಳ್ಳುತ್ತಿದ್ದೇನೆ" ಎಂದಳು. ಕುಟುಂಬದಲ್ಲಿ ಪ್ರೀತಿ ಎಷ್ಟು ಮುಖ್ಯ ಪಾತ್ರ ವಹಿಸುತ್ತದೆ ಮತ್ತು ಆತ್ಮೀಯ ಸಂಬಂಧಗಳಲ್ಲಿ ಮಮತೆ, ಕಾಳಜಿ ಎಷ್ಟಿರುತ್ತದೆ ಎನ್ನುವುದನ್ನು ಇಲ್ಲಿ ಕಾಣಬಹುದು.

ಗಾಂಧಿಯೇನೋ ದಿನದಿನಕ್ಕೂ ಮುಗಿಲೆತ್ತರ ಬೆಳೆಯುತ್ತಿದ್ದ. ಆದರೆ ಅವನು ಬೆಳೆದಷ್ಟೂ ಮತ್ತು ಠ್ಯಾಗೂರರು ಕೊಟ್ಟ ಬಿರುದಿನಂತೆ 'ಮಹಾತ್ಮ'ನೆಂದು ಗುರುತಿಸಿಕೊಂಡಷ್ಟೂ ಕಸ್ತೂರಬಾಳ ಕಷ್ಟಗಳು ಹೆಚ್ಚಾದವು. ಗಂಡನೊಂದಿಗೆ ಮಾತಾಡಲೂ ಅವಕಾಶ ಸಿಗುತ್ತಿರಲಿಲ್ಲ. ಮಹಾತ್ಮನ ಆರಾಧಕರಿಂದ ಅವಕಾಶ ಸಿಗುತ್ತಿರಲಿಲ್ಲ. ಮಹಾತ್ಮನ ಆರಾಧಕರಿಂದ ಗಂಡನ ಸೇವೆಯಿಂದಲೂ ವಂಚಿತಳಾಗಬೇಕಾಯಿತು. ಅವರ ಹಿಂಸೆ, ಅವಳಿಗೆ ಒಂದು ರೀತಿ ಅತಿಯಾಗುತ್ತಿದೆ ಎನಿಸಿತು.

ಗಂಡನ ಆಶಯಗಳಿಗೆ, ಭರವಸೆಗಳಿಗೆ ತಾನೊಂದು ಚಾಲಕ ಶಕ್ತಿಯಾಗಬೇಕು. ಎಲ್ಲಿಯವರೆಗೆ ತಾನು ಹೆಣ್ಣು ಅಬಲೆ ಎಂದು ತಲೆಮರೆಸಿಕೊಂಡು ಕುಳಿತಿರುತ್ತಾಳೆಯೋ ಅಲ್ಲಿಯವರೆಗೆ ಪುರುಷಮಾತ್ರರಿಂದ ಪೂರ್ತಿಯಾಗಿ ಏನನ್ನು ಸಾಧಿಸಲು ಆಗುವುದಿಲ್ಲ. ಸ್ತ್ರೀಶಕ್ತಿ-ಪುರುಷ ಶಕ್ತಿಗಳ ಅಖಂಡ ಬೆಸುಗೆಯಾದಾಗ ಮಾತ್ರವೇ ವಿಶ್ವವನ್ನೇ ಗೆಲ್ಲುವ ಸಾಧ್ಯತೆಯಿರುವಾಗ, ದೇಶದ ಸ್ವಾತಂತ್ರ್ಯವನ್ನು ಸಾಧಿಸುವುದೇನೂ ಅಸಾಧ್ಯವಾಗುವುದಿಲ್ಲ.

"ಬಾಪು ನೀವು ಇಷ್ಟೊಂದು ಮರುಗಬೇಕಿಲ್ಲ. ನಿಮ್ಮ ಭಾವನೆಗಳನ್ನು, ಆಂತರ್ಯದ ಸೆಳೆತಗಳನ್ನು ಅರ್ಥಮಾಡಿಕೊಂಡಿದ್ದೇನೆ. ನಿಮ್ಮ ನಿಷ್ಠುರ ಮಾತಿನ ಹಿಂದೆ ಯಾವುದೇ ಬಗೆಯ ಕೇಡಿನ ಭಾವನೆ, ದ್ವೇಷ ಇರುವುದಿಲ್ಲವೆಂದು ನನಗೆ ಗೊತ್ತು. ನೀವು ಸದಾ ಏಕಾಂತವನ್ನು ಬಯಸುವವರು. ನಿಮ್ಮ ಏಕಾಂತಕ್ಕೆ ಭಂಗವುಂಟುಮಾಡಲು ಬಯಸುವುದಿಲ್ಲ. ನೀವಿಲ್ಲದೆಯೂ ನಿಮ್ಮ ಕೆಲಸಗಳನ್ನು ಮುಂದುವರೆಸುತ್ತೇನೆಂದು ಭರವಸೆಯನ್ನು ಖಂಡಿತವಾಗಿಯೂ ಕೊಡಬಲ್ಲೆ. ಒಂದು ರೀತಿಯಿಂದ ಇದು ನನಗೆ ವೈಯಕ್ತಿಕವಾಗಿ ಸಿಕ್ಕ ಬಿಡುಗಡೆ ಮತ್ತು ರಜೆಯೂ ಕೂಡಾ! ನನ್ನ ಮಕ್ಕಳು ಮೊಮ್ಮಕ್ಕಳನ್ನೆಲ್ಲಾ ನೋಡಿಬರುತ್ತೇನೆ".

"ಬಾ ನನಗೊಂದು ವಿಚಿತ್ರವಾದ ಅಭ್ಯಾಸವಿದೆ. ನನಗೆ ಚಳಿಗಾಲದಲ್ಲಿ ಚಳಿಯ ಹೊಡೆತಕ್ಕೆ ವಿಪರೀತ ನಡುಕ ಉಂಟಾಗುವುದರಿಂದ, ನನ್ನ ಪಕ್ಕದಲ್ಲಿನ ಮಹಿಳೆಯರಿಗೆ ಒತ್ತರಿಸಿಕೊಂಡು ಮಲಗುತ್ತೇನೆ. ನೀನು ಹೆಂಡತಿ ಇದನ್ನೆಲ್ಲ ನೋಡಿ ನಿನಗೆ ಅಸೂಯೆ, ಅನುಮಾನಗಳು ಉಂಟಾಗುವುದಿಲ್ಲವೇ?"

"ನಾನು ವಿಧಿವತ್ತಾಗಿ ಕೈ ಹಿಡಿದ ನಿಮ್ಮ ಹೆಂಡತಿ. ಆದರೆ ನನಗಿಂತ ಹೆಚ್ಚಾಗಿ ಈ ಮಹಿಳೆಯರಿಂದ ಸಾಂತ್ವನ, ಸಮಾಧಾನ ಸಿಗುವುದಾದರೆ ನಾನೇಕೆ ಅಡ್ಡಿಬರಲಿ. ಅಲ್ಲದೆ ನೀವು ಬಹ್ಮಚರ್ಯ ವ್ರತಪಾಲಕರು. ಅನುಚಿತವಾದ ಕೆಲಸವನ್ನು ಮಾಡಲಾರಿರಿ ಎಂಬ ನಂಬಿಕೆಯಲ್ಲಿದ್ದೇನೆ. ಕೆಲವೊಮ್ಮೆ ನೀವು ನಡೆದುಕೊಳ್ಳುವ ರೀತಿ, ನನಗೆ ಹುಚ್ಚಾಟಗಳಂತೆ ತೋರಿವೆಯಾದರೂ, ನಾನು ನಿಮ್ಮ ಹೆಂಡತಿ, ನಿಮ್ಮ ಯಾವ ನಡೆ, ನಡೆವಳಿಕೆಗಳಿಂದ ದೈಹಿಕ ಶಕ್ತಿ, ಮಾನಸಿಕ ಸ್ವಾಸ್ಥ್ಯ ಲಭ್ಯವಾಗುತ್ತದೆಂದು ತೋರಿದರೆ, ಅದರಂತೆ ನಡೆಯಲು ನಿಮ್ಮನ್ನು ಬಿಟ್ಟು, ನಿಮ್ಮನ್ನು ಈ ದೇಶಕ್ಕೆ ಈ ಸಮಾಜಕ್ಕೆ, ಈ ಜನಕ್ಕೆ, ಮಾನಸಿಕ, ದೈಹಿಕ ಸ್ವಾಸ್ಥ್ಯವನ್ನು ಕಾಪಾಡಿಕೊಡುವುದು ನನ್ನ ಧರ್ಮವೆಂದು ನಂಬಿದ್ದೇನೆ. ನನ್ನ ಬಗ್ಗೆ ಚಿಂತೆ ಬೇಡ. ನಿಮ್ಮನ್ನು ನಿಮ್ಮ ಪ್ರಾಮಾಣಿಕತೆ ಮತ್ತು ನಿಮ್ಮ ಆತ್ಮಸಾಕ್ಷಿಗೆ ಬಿಡುತ್ತಿದ್ದೇನೆ."

ಇಷ್ಟೆಲ್ಲ ಹಗರಣಗಳು ನಡೆಯುತ್ತಿದ್ದರೂ, ಇದೆ ಒಂದು ದೊಡ್ಡ ವಿಷಯದಂತೆ ವಾದ ವಿವಾದಗಳು ಮುಂದುವರೆಯುತ್ತಿದ್ದರೂ 'ಬಾ' ಯಾರೊಂದಿಗೂ ತನ್ನ ಗಂಡನ ನಡತೆ ಕುರಿತು ಚರ್ಚಿಸಲು ಹೋಗಲಿಲ್ಲ. ಕೇವಲ ಮೂಕ ಸಾಕ್ಷಿಯಾಗಿ ನಿಂತು, ತನ್ನೊಳಗೇ ತಾನು ವಿಲಿವಿಲಿ ಒದ್ದಾಡುತ್ತಿದ್ದಳು. ಹೆಂಗಸರ ಅಪ್ಪುಗೆಯಿಂದ ಅವರ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಸಿಗುವುದಾದರೆ, ತಾನೂ ಹೆಣ್ಣಲ್ಲವೇ?.. ಅವರ್‍ಯಾಕೆ ನಾಲ್ಕು ಜನರ ಬಾಯಿಗೆ ಬೀಳುವಂತಹ ಕೆಲಸಗಳನ್ನು ಮಾಡಬೇಕು? ಪ್ರೀತಿ ಪ್ರೇಮಗಳಿಲ್ಲದೆ ಇಷ್ಟು ಹತ್ತಿರವಾಗಿಸಿಕೊಳ್ಳಲು ಸಾಧ್ಯವಿತ್ತೇ? ನನ್ನ ಗಂಡ ಮಹಾತ್ಮನೆಂದು ಕರೆಸಿಕೊಂಡೂ ಈ ಥರದ ನಡವಳಿಕೆ ಶೋಭಿಸುವುದೇ? ನನ್ನ ಮಕ್ಕಳಿಗೆ ಹೆಣ್ಣು ಗಂಡು ಸಂಬಂಧಗಳು ಅರ್ಥವಾಗುವುದಿಲ್ಲವೇ? ಒಬ್ಬರನ್ನು ದೂರುವ ಅವರ ತಪ್ಪುಗಳನ್ನು ತಪ್ಪೆಂದು ಶಿಕ್ಷೆ ವಿಧಿಸುವ ಮನುಷ್ಯರಾಗಿರುವ ಇವರ ತಪ್ಪಿಗೆ ಶಿಕ್ಷೆ ಕೊಡುವವರು ಯಾರು? ಅವರ ನಡತೆಯನ್ನು ನಾನೂ ಪ್ರಶ್ನಿಸಬಲ್ಲೆ. ಸಮಜಾಯಿಷಿ ಕೇಳಬಲ್ಲೆ. ಆದರೆ ಇಲ್ಲಿ ನಾವು ಬದುಕುತ್ತಿರುವುದು ಸಮುದಾಯ ಬದುಕು. ನನ್ನ ಮತ್ತು ನನ್ನ ಗಂಡನ ಮರ್ಯಾದೆಯನ್ನು ಉಳಿಸಿಕೊಳ್ಳುವುದಕ್ಕಾಗಿಯಾದರೂ ಬಾಯಿ ಹೊಲಿದುಕೊಂಡು ಸುಮ್ಮನಿರಬೇಕು. ನನಗೇನೂ ತಿಳಿಯುವುದಿಲ್ಲವೆಂದು, ನಾನೆಂದೂ ಅವರನ್ನು ಪ್ರಶ್ನಿಸಲಾರೆನೆಂದು ತಿಳಿದಿರಬೇಕು. ನಾನು ಅವಿದ್ಯಾವಂತೆ, ಅವರ ವಲಯದ ಹೆಂಗಸರ ಜೊತೆಗೆ ನಾನಿರುವುದು ಅವರಿಗೆ ಅವಮಾನವೆನಿಸಿರಬೇಕೆ? ಹಾಗಾದರೆ ಅವರು ನನ್ನ ಬಗ್ಗೆ ತೋರುವ ಪ್ರೀತಿ, ಮೆಚ್ಚುಗೆಗಳು ಕೇವಲ ತೋರಿಕೆಯೇ? ತನಗೆ ಎಲ್ಲರೂ ಒಂದೇ ಎನ್ನುವ ನೆಪದಲ್ಲಿ, ನನ್ನ ಕಡೆ ವಿಶೇಷ ಲಕ್ಷ್ಯ ಕೊಡದಿದ್ದಾರೆಯೇ? ಅವರಲ್ಲಿ ಕಾಣಿಸಿಕೊಳ್ಳುತ್ತಿರುವ ಎರಡು ಮುಖಗಳಲ್ಲಿ ಯಾವುದು ಸತ್ಯ.. ಯಾವುದು ಸತ್ಯ? ಎಂದು ಚೀರಿಚೀರಿ ಕೇಳಿಕೊಳ್ಳಬೇಕೆನಿಸುತ್ತಿತ್ತು. ತನ್ನ ದೃಷ್ಟಿಯಲ್ಲಿ ಸರಿಯೆನಿಸಿದ ಕೆಲಸಗಳನ್ನು ವಿಚಾರಗಳನ್ನೂ ಅವರಿಗಾಗಿ ಸಹಿಸಿಕೊಳ್ಳುತ್ತಲೇ ಬಂದಿರುವೆ ಆದರೆ ಈ ಲೈಂಗಿಕ ಸಂಬಂಧದ ವಿಚಾರದಲ್ಲಿ ಅದು ಯಾಕೋ ಏನೋ ರಾಜಿ ಮಾಡಿಕೊಳ್ಳಲು ಸಾಧ್ಯವೇ ಆಗುತ್ತಿಲ್ಲ. ಆದರೂ ಅದನ್ನು ಬಹಿರಂಗದಲ್ಲಿ ತೋರಿಸಿಕೊಂಡು ನಮ್ಮಿಬ್ಬರ ಸಂಬಂದಗಳ ಬಗ್ಗೆ ಇಲ್ಲ ಸಲ್ಲದ ಮಾತಿಗೆ ದಾರಿ ಮಾಡುವುದು ಎಷ್ಟಕ್ಕೂ ಸರಿಯಿಲ್ಲವೆನಿಸಿ, ತನ್ನ ಪಾಡಿಗೆ ತಾನು ಸುಮ್ಮನಾಗಿಬಿಟ್ಟಳು. ಬಾಪುವಿನ ಜತೆ ಅನಿವಾರ್ಯವೆನಿಸದ ಹೊರತು, ಪ್ರವಾಸಗಳಿಗೆ ಹೋಗುತ್ತಿರಲಿಲ್ಲ. ಆಶ್ರಮದ ಕೆಲಸಗಳ ಮಟ್ಟಿಗೆ ತಾನು ವ್ಯಸ್ತಳಾಗಿ ಇರುತ್ತಿದ್ದಳು. ಸರಳತೆ, ಸೌಂದರ್ಯ, ಸುಂದರ ಶಾಂತಿಯೇ ಹೆಣ್ಣಾಗಿ ಕಸ್ತೂರ ಬಾ ಅವತಾರದಲ್ಲಿ ಇರುವಂತಿದೆ.

ಅಕ್ಟೋಬರ್ ಎರಡರಂದು ಬಾಪುವಿನ ಜನ್ಮದಿನ. ಜೈಲಿನಲ್ಲಿ ಇದು ಎರಡನೆ ಹುಟ್ಟು ಹಬ್ಬವಾಗಿತ್ತು. ಜೈಲು ಕೈದಿಗಳು ಬಾಪು ಗೌರವಾರ್ಥ ಹುಟ್ಟುಹಬ್ಬ ಆಚರಿಸಬೇಕೆಂದುಕೊಂಡು ಊಟದ ಹಾಲನ್ನು ಹೂಗಳಿಂದ ದೀಪಗಳಿಂದ ಅಲಂಕರಿಸಿದರು. 'ಬಾ' ಆ ಹುಟ್ಟುಹಬ್ಬದ ಆಚರಣೆಯಲ್ಲಿ ಭಾಗವಹಿಸಲು ಉತ್ಸುಕಳಾಗಿದ್ದಳು.

ಥಟ್ಟನೆ ಅವಳಿಗೆ ತನ್ನ ಸೀರೆಯೊಂದರ ನೆನಪಾಯಿತು. ಮೋಹನ್‌ದಾಸ ಗಾಂಧಿ ಸ್ವತಃ ನೂತು ನೇಯಿಸಿದ ಕೆಂಪಂಚಿನ ಕಾಟನ್ ಸೀರೆಯನ್ನು ಸೇವಾಗ್ರಾಮದಲ್ಲಿ ಬಹಳ ಜೋಪಾನವಾಗಿ ಇರಿಸಿದ್ದಳು. ಒಂದು ವೇಳೆ ತಾನು ಸತ್ತರೆ ಆ ಸೀರೆಯನ್ನೇ ತನ್ನ ಪಾರ್ಥಿವ ಶರೀರಕ್ಕೆ ಉಡಿಸಬೇಕೆಂದು ಸೂಚನೆಯನ್ನೂ ಕೊಟ್ಟಿರಿಸಿದ್ದಳು. ಆದರೆ ಈಗ ಇನ್ನೂ ಬದುಕಿದ್ದಾಳೆ. ಗಂಡನ ಹುಟ್ಟುಹಬ್ಬದ ಸವಿನೆನಪಾಗಿ ಅದನ್ನು ಉಡಬೇಕೆಂದುಕೊಂಡಿದ್ದಳು. ಆದರೆ ಎಲ್ಲಿ ಇರಿಸಿದ್ದೇನೆಂಬುದನ್ನು ಮರೆತುಬಿಟ್ಟಿದ್ದಳು. ಮನೊಗಾಂಧಿ ಸಮಯಕ್ಕೆ ಸರಿಯಾಗಿ ಸಹಾಯಕ್ಕೆ ಬಂದಳು. ಅವಳೂ ಆಗಾಗ ಆಶ್ರಮದಲ್ಲಿ ಬಾ ಜೊತೆ ದಿನಗಟ್ಟಲೆ ಇರುತ್ತಿದ್ದಳು. ಅಂಥ ಸಮಯದಲ್ಲಿ ಬಾ ಆ ಸೀರೆಯನ್ನು ಎಲ್ಲಿ ಇರಿಸಿದ್ದಳೆಂಬುದನ್ನು ನೋಡಿದ್ದಳು. ಈಗ ಅವಳು ಸೀರೆ ಇರುವ ಜಾಗದ ಸೂಚನೆಯನ್ನು ನೀಡಿ ಕಳಿಸಿದ್ದಳು. ಆದ್ದರಿಂದ ಸೀರೆ ಪತ್ತೆಯಾಗಿ ಸಮಯಕೆಕ ಸರಿಯಾಗಿ ಬಾಳ ಕೈಸೇರಿತು. ತುಂಬಾ ಸಮಾಧಾನಪಟ್ಟಳು.

ಸಂಸಾರ ಸುಖದ ಸುಪ್ಪತಿಗೆಯಲ್ಲಿ ಅಲ್ಲಿ ನೋವು–ನಲಿವು, ಸುಖ–ದುಃಖ ಸೋಲು–ಗೆಲವುಗಳ ಸಂಗಮ. ಬಡತನ – ಸಿರಿತನ, ನೆಮ್ಮದಿ– ಅಶಾಂತಿ– ಬದುಕಿನ ವೈರುದ್ಯವನ್ನು ಸೀಮಿತ ಪಾತ್ರಗಳಲ್ಲಿ ಯಶಸ್ವಿಯಾಗಿ ಚಿತ್ರಿಸಲಾಗಿದೆ. ಸಂಸಾರದ ಸುಖ ದುಃಖಗಳನ್ನು ಅರಿತು ದುಡಿದು ಸಂಪಾದಿಸಿ ಮನೆಯನ್ನು ನೋಡಿಕೊಳ್ಳುವ ಗಂಡನಿದ್ದರೆ ಹೆಣ್ಣಿಗೆ ನೆಮ್ಮದಿ ಸಿಗುತ್ತದೆ. ಗಂಡ ದುಡಿದು ತಿನ್ನಲು ಬಾರದ ನಿಷ್ಪ್ರಯೋಜಕನಾಗಿ ಸೋಮಾರಿಯಾಗಿದ್ದರೆ ಅಂತಹ ಗಂಡನನ್ನು ಪಡೆದ ಹೆಣ್ಣಿನ ಬಾಳು ಬಹಳ ಕ್ರೂರವಾಗಿರುತ್ತದೆ. ಈ ನೆಲೆಯಲ್ಲಿ ತಾನೇ ಮನೆಯ ಜವಾಬ್ದಾರಿಗಳೆಲ್ಲವನ್ನು ಹೊತ್ತುಕೊಂಡು ಮನೆಯನ್ನು ನಿಭಾಯಿಸುತ್ತಾಳೆ. ನಾಲ್ಕು ಜನರು ಬಾಯಿ ಮೇಲೆ ಬೆರಳಿಟ್ಟು ಆಶ್ಚರ್ಯ ಪಡುವ ರೀತಿಯಲ್ಲಿ ಬಾಳುತ್ತಾಳೆ. ಈ ಕಾದಂಬರಿಯಲ್ಲೂ ಕೂಡ ಅಂತಹ ಚಿತ್ರಣವನ್ನು ಕಾಣಬಹುದು.

ಆ) ಕೌಟುಂಬಿಕ ನೆಲೆಯಲ್ಲಿ

"ಕುಟುಂಬವು ಸಾರ್ವತ್ರಿಕ ಸ್ವರೂಪದ ಸಾಮಾಜಿಕ ಸಂಸ್ಥೆಯಾಗಿದ್ದು ಕುಟುಂಬದಿಂದಲೇ ಮಾನವನ ಸಮೂಹಜೀವನ ಆರಂಭವಾಗುತ್ತದೆ. ಅದು ಆತನ ಸಮಸ್ತ ವ್ಯವಹಾರಗಳ ಸೂತ್ರ: ಚಟುವಟಿಕೆಗಳ ಸ್ಫೂರ್ತಿಯ ಕೇಂದ್ರ: ವ್ಯಕ್ತಿತ್ವಕ್ಕೆ ರೂಪುಕೊಡುವ ಕಾಲುವೆ ; ಜೀವನದ ಸಾಧನೆ ಮತ್ತು ಸಾರ್ಥಕತೆಗಳ ನಿರ್ಣಾಯಕ ಸಾಧನ ಮತ್ತು ಸುಖ ಸಂತೋಷಗಳ ಹಾಗೂ ದುಃಖ ದುಮ್ಮಾನಗಳ ಅನುಭವದ ತಾಣ" ೧ ವಿವಾಹದ ನಂತರದ ಹೆಜ್ಜೆ ಎಂದರೆ ಕುಟುಂಬದ ಸ್ಥಾಪನೆ. ವಿವಾಹವು ಕುಟುಂಬದಲ್ಲಿ ಬೇರೂರಿದ್ದು ಜೈವಿಕ ಹಾಗೂ ಮಾನಸಿಕ ತಳಹದಿಯ ಮೇಲೆ ರಚಿತವಾಗಿದೆ. ಕುಟುಂಬವಿಲ್ಲದ ಸಮಾಜ – ಸಮುದಾಯ – ದೇಶಗಳು ಇಲ್ಲ. ತಂದೆ, ತಾಯಿ ಮತ್ತು ಅವರ ಸಂತಾನಗಳನ್ನೊಳಗೊಂಡ ಸಾಮಾನ್ಯ ಸಮೂಹವಾಗಿರುವ ಕುಟುಂಬವು ಮಾನವ ಸಹಜವಾದ ಭಾವನೆಗಳ ಆವಿಷ್ಕಾರವಾಗುವುದು. "ದಾಂಪತ್ಯ–ಪ್ರೇಮ, ಸಂತಾನೋತ್ಪತ್ತಿ, ಮಾತೃ ಪ್ರೇಮ, ಪಿತೃವಾತ್ಸಲ್ಯ, ಮಕ್ಕಳ ಲಾಲನೆ, ಪೋಷಣೆ, ಭ್ರಾಂತೃ ಪ್ರೇಮ, ಸಹಕಾರ, ಸ್ನೇಹ, ಅನುಕಂಪ, ತ್ಯಾಗ ಮುಂತಾದ ಭಾವನೆಗಳು ಹಾಗೂ ಗುಣಾದರ್ಶಗಳು ಕುಟುಂಬಕ್ಕೆ ಆಧಾರ ಮಾತ್ರವಾಗಿರದೆ ಅದಕ್ಕೊಂದು ಮೆರುಗನ್ನಿತ್ತಿವೆ. ಕುಟುಂಬದ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವುದು. ಸುಖ–ದುಃಖಗಳಲ್ಲಿ ಪರಸ್ಪರ ಪಾಲ್ಗೊಳ್ಳುವುದು, ಸಾಮಾಜಿಕ ಒಳಿತಿಗಾಗಿ ಹೋರಾಡುವುದು ಇವೆಲ್ಲವೂ ಕುಟುಂಬ ಜೀವನದಲ್ಲಿ ಕಾಣುವ ವಿಶೇಷ ಭಾವನಾತ್ಮಕ ಕ್ರಿಯೆಗಳು" ಕುಟುಂಬವು ಸಂಸ್ಕೃತಿ ಸಂರಚನೆಯ ಒಂದು ಪ್ರಬಲ ಸಾಧನವಾಗಿದ್ದು ಮರುದಿನ ಶಾಲೆಯಾಗಿದ್ದು ತಾಯಿಯ ಆದರ್ಶ 'ಮೊದಲ ಗುರು' ವೆಂದು ಇಂದಿಗೂ ಕರೆಯಲಾಗುತ್ತಿದೆ. "ರಕ್ತ ಸಂಬಂಧಗಳಿಂದ ಕೂಡಿದ ಮತ್ತು ಕನಿಷ್ಠ ಎರಡು ತಲೆಮಾರುಗಳನ್ನು ಒಳಗೊಂಡಿರುವ ಅತಿ ಸೂಕ್ಷ್ಮ ಸಾಮಾಜಿಕ ಸಂಘಟನೆಯೇ ಕುಟುಂಬ" ಎಂದು ಸಮ್ಮರ್ ಮತ್ತು ಕೆಲ್ಲರ್ ತಿಳಿಸಿರುತ್ತಾರೆ.

ಧೈರ್ಯವಾಗಿ ಅವಳ ಬಳಿ ಸರಿದು ಮೊದಲು ಕ್ಷಮೆ ಯಾಚಿಸಿ ತಾನು ಮಾಡಿದ ತಪ್ಪನ್ನು ವಿವರಿಸಿದ. ಆ ಮಾತುಗಳನ್ನು ಕೇಳಿಸಿಕೊಂಡ ಕಸ್ತೂರಳು ಯಾವುದೇ ಭಾವಾವೇಶಕ್ಕೆ ಒಳಗಾಗದೆ ಎಂದಿನಂತೆ ಸಹಜವಾಗಿದ್ದಳು. ಅವನಿಗೆ ಆದದ್ದನ್ನೆಲ್ಲ ಮರೆತು ಮಾಮೂಲಿನಂತೆ ಇರಲು ಹೇಳಿದಳು. ಅವಳ ಔದಾರ್ಯ, ಕ್ಷಮಾಗುಣ ಇನ್ನೂ ಹುಡಗು ವಯಸ್ಸಿನಲ್ಲಿ ಇದ್ದವನಿಗೆ ಎಷ್ಟು ಅರ್ಥವಾಯಿತೋ ತಿಳಿಯದು. ಅವನಿಗೆ ಹೋಲಿಸಿದಲ್ಲಿ ಕಸ್ತೂರಳು ಸಾಕಷ್ಟು ಪ್ರಬುದ್ಧಳಾಗಿದ್ದಳು. ಸರಿ–ತಪ್ಪುಗಳ ವಿವೇಕ ಅವಳಿಗಿತ್ತು. ತನಗೆಷ್ಟೇ ಸಿಟ್ಟು ಬಂದರೂ ಅದು ಆ ಕ್ಷನ ಮಾತ್ರ! ಗಂಡನ ತಪ್ಪುಗಳನ್ನು ಎಂತ ಪ್ರಮಾದಕರವಾದದ್ದೇ ಇರಲಿ, ಹೆಂಡತಿಯಾದವಳು ಅವುಗಳನ್ನು ಗಂಭೀರವಾಗಿ ಪರಿಗಣಿಸದೆ ಅದೆಲ್ಲವನ್ನೂ ಒಪ್ಪಿಕೊಂಡು ಸಹಿಸಿಕೊಂಡು ಬಾಳಬೇಕೆಂಬ ನೀತಿಪಾಠವನ್ನು ಕಲಿತವಳಾಗಿದ್ದಳು. ಆದ್ದರಿಂದ ತನ್ನ ಗಂಡನ ಅಪೊರಾಧಗಳನ್ನೆಲ್ಲ ಮರೆತು ಬಿಟ್ಟಳು.

ಮನೆಯ ಆರ್ಥಿಕ ಪರಿಸ್ಥಿತಿ ತುಂಬಾ ದಯನೀಯವಾಗಿತ್ತು. ಜೊತೆಗೆ ಇತ್ತೀಚಿಗೆ ಪುತಲೀಬಾರ ಆರೋಗ್ಯವೂ ಚೆನ್ನಾಗಿರುತ್ತಿರಲಿಲ್ಲ. ಯಾವುದೇ ಔಷಧೋಪಚಾರಗಳು ಆರೋಗ್ಯದಲ್ಲಿ ಸುಧಾರಣೆ ತರಲಿಲ್ಲ. ದಿನೇ ದಿನೇ ಉಲ್ಬಣಿಸುತ್ತಾ ಹೋಗಿತ್ತು. ಎಲ್ಲರಿಗಿಂತ ಹೆಚ್ಚಾಗಿ ಕಸ್ತೂರಳಿಗೆ ಚಿಂತೆಯಾಯಿತು. ಗಂಡನೂ ಹತ್ತಿರದಲ್ಲಿ ಇಲ್ಲದಿರುವಾಗ ಅತ್ತೆಯೂ ತಮ್ಮಿಂದ ದೂರಾದರೆ ತನಗೆ ತಾಯಿಯಾಗಿ ಸಾಂತ್ವನ, ಸಮಾಧಾನ ನೀಡಲು ಯಾರಿದ್ದಾರೆ? ತನ್ನ ಬದುಕೇಕೆ ಹೀಗಾಗುತ್ತಿದೆ? ಎಂದು ಒಳಗೊಳಗೇ ದು:ಖಿಸಿದಳು.

---

೧. ಚ. ನ. ಶಂಕರ ರಾವ್ : ಸಮಾಜ ಶಾಸ್ತ್ರದ ಮೂಲ ತತ್ವಗಳು, ಪು. ಸಂ. ೧೮೩ ೨೦೧೦

ಅವನ ಸಮಯ ನೋಡಿ, ಕಸ್ತೂರಳು ಗಂಡನಿಗೆ ಚಹ ನೀಡುವ ನೆಪದಲ್ಲಿ ಬಂದಳು. ಬಂದು ಹಾಗೇ ಸ್ವಲ್ಪ ಹೊತ್ತು ನಿಂತಳು. ಗಾಂಧಿಗೆ ಅವಳ ರೀತಿ ನೋಡಿ, ಏನೋ ಹೇಳಬೇಕೆಂದು ಕಾಯುತ್ತಿದ್ದಾಳೆ ಎನಿಸಿ, "ಕಸ್ತೂರ್ ಅದೇನು ಹಾಗೆ ಪಿಳಿ ಪಿಳಿ ನೋಡುತ್ತಾ ನಿಂತಿದ್ದಿ. ಏನಾದರೂ ಕೇಳಬೇಕಿತ್ತಾ? ಇಲ್ಲ ಹೇಳಬೇಕಿತ್ತಾ? ನನ್ನ ಜೊತೆ ಧೈರ್ಯದಿಂದ ಮಾತಾಡಲು ಸಂಕೋಚವಾದರೂ ಏಕೆ?" ಎಂದು ನಯವಾಗಿ ಕೇಳಿದ. ಹೆಣ್ಣಾದ ನಾನು ಮನೆ, ಮಕ್ಕಳ ಜವಾಬ್ದಾರಿಯನ್ನು ನಿರ್ವಹಿಸುವುದಾದರೂ ಹೇಗೆ ಎಂದು ಕಣ್ಣೀರಿಟ್ಟಳು.

ಗಂಡ ಹಿಂತಿರುಗಿ ಬರುತ್ತಿದ್ದುದು ಅವಳಿಗೆ ಸಂತೋಷವಾದರೂ ಜೀವನ ಸಂಘರ್ಷದಲ್ಲಿ ಸೋತು ಹತಾಶನಾದ ಯೋಧನಂತೆ ಮರಳಿದ್ದು ಮಾತ್ರ ಅವಳಿಗೆ ನಾಚಿಕೆಯೆನಿಸಿತು. ಹೇಳಿಕೊಳ್ಳಲಾಗದ ಸಂಕಟವನ್ನು ಅನುಭವಿಸಿದಳು. ಉದ್ಯೋಗವಿಲ್ಲದೆ ಪುರಷನ ಪ್ರೀತಿ ಎಷ್ಟಿದ್ದರೇನು? ಬೆಳೆಯುತ್ತಿರುವ ಸಂಸಾರ, ಜೀವನೋಪಾಯಕ್ಕೆ ದಾರಿಯಿಲ್ಲದೆ ದಿನ ಕಳೆಯುವುದಾದರೂ ಹೇಗೆ? ಎಂದೆಲ್ಲ ಚಿಂತಿಸಿದಳು. ಸ್ವಲ್ಪ ಸಿಟ್ಟೂ ಬಂತು. ಆದರೂ ಸಂಭಾಳಿಸಿಕೊಂಡಳು. ತಾನೇ ಅಪರಾಧಭಾವದಿಂದ, ಅಸಹಾಯಕತೆಯಿಂದ ಬಳಲಿ ಬೆಂಡಾಗಿರುವಾಗ ತನ್ನ ಅಸಮಧಾನ, ಅವನನ್ನು ಮತ್ತುಷ್ಟು ಕುದಿಯುವಂತೆ ಮಾಡುತ್ತಿದೆ ಎಂದು ಹೆದರಿ ಸುಮ್ಮನಾದಳು. ಬರುವ ಒಳ್ಳೆಯ ದಿನಗಳ ನಿರೀಕ್ಷೆಯಲ್ಲಿ ಮನೆಗೆ ಬಂದ ಹೊಸ ಅತಿಥಿ ತನ್ನೆರಡನೆಯ ಮಗ ಮಣಿಲಾಲನ ಮತ್ತು ಗಂಡನ ಸಾಮಿಪ್ಯದಲ್ಲಿ ಒಂದಷ್ಟು ಸಂತಸದ ದಿನಗಳನ್ನು ಕಳೆದಳು.

ಕಸ್ತೂರಳು ಹಲವು ಸಂದಿಗ್ಧಗಳ ಸುಳಿಯಲ್ಲಿ ಸಿಕ್ಕಿದ್ದಳು. ಒಂದು ಕಡೆ ತುಂಬು ಬಸುರಿ ಗುಲಾಬ್, ಮತ್ತೊಂದು ಕಡೆ ಗಂಡನ ಮೇಲೆ ಎರಗುತ್ತಿರುವ ಆಘಾತಗಳು? ಮನಸ್ಸಿಗೆ ಎಷ್ಟೇ ಧೈರ್ಯ ತಂದುಕೊಂಡರೂ ಅವಳಂತರಾಳದಲ್ಲಿ ಭಯದ ಭೂತ ತಳವೂರಿತ್ತು. ಇಂಥಾದ್ದರಲ್ಲಿ ಅವಳ ಪ್ರಥಮ ಆಯ್ಕೆ ಗುಲಾಬಳದಾಗಿತ್ತು. ಒಮ್ಮೊಮ್ಮೆ ಗಾಂಧಿಯನ್ನು, ಯಾಕೆ ಇಷ್ಟೆಲ್ಲ ಹಚ್ಚಿಕೊಳ್ಳುತ್ತೀರಿ? ಪ್ರಪಂಚದ ಎಲ್ಲರ ಸಮಸ್ಯೆಗಳನ್ನು ನೀವೇ ಹೊರಬೇಕೆಂದು ಯಾರಾದರೂ ಆದೇಶಿಸಿದ್ದಾರೆಯೇ? ಯಾರಿಗೂ ಬೇಡದ್ದು ನಿಮಗೇಕೆ? ಎಂದು ಗಟ್ಟಿಯಾಗಿ ಕೇಳಬೇಕು ಎಂದುಕೊಂಡಿದ್ದಳಾದರೂ ಅವಳ ಸಂಸ್ಕಾರದ ಆಳದಲ್ಲಿ, ಅವಳಿಗೆ ತನ್ನ ಗಂಡ ಮಾಡುತ್ತಿರುವ ಕೆಲಸಗಳಿಂದ ಯಾರಿಗಾದರೂ ಒಳ್ಳೆಯದಾದಲ್ಲಿ ಅದು ಪುಣ್ಯದ ಕೆಲಸವಲ್ಲವೇ? ನಮ್ಮಂಥ ಸಾಮಾನ್ಯ ಜನರ ಮುಂದೆ ಎಷ್ಟು ದೊಡ್ಡ ವ್ಯಕ್ತಿಯಾಗಿ, ಎಷ್ಟೊಂದು ಮಂದಿಗೆ ಬೇಕಾಗಿ, ಬೆಳೆಯುತ್ತಿರುವಾಗ, ನಾನು ಅವರಿಗೆ ಅಡ್ಡಿಪಡಿಸುವುದು ಎಷ್ಟು ಸಮಂಜಸ? ಅದಕ್ಕಿಂತಲೂ ನಾನೇ ಅವರ ಹಾದಿಯಲ್ಲಿ ಸಾಗಿ ನನ್ನಂಥ ಹೆಣ್ಣು ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವುದರಲ್ಲಿಯೇ ಸುಖವಿದೆಯಲ್ಲವೇ? ಈಗ ತನ್ನ ಕುಟುಂಬವೊಂದೇ ಅಲ್ಲ. ಎಷ್ಟೊಂದು ಮಂದಿಯ ಜೊತೆ ಸಾಮೂಹಿಕ ಬದುಕು ನಡೆಸುವುದರಲ್ಲಿ ಅವರ ಕಷ್ಟ ಸುಖಗಳನ್ನು ಹಂಚಿಕೊಳ್ಳುವುದರಲ್ಲಿ ನಾನು ಅನುಭವಿಸುತ್ತಿರುವ ಆನಂದ, ಮನುಷ್ಯ ಸ್ವಭಾವಗಳ ಅರಿವಿನ ಅನುಭವ ಇಂಥ ಬದುಕಿಲ್ಲದಿದ್ದರೆ ಹೇಗೆ ಸಾಧ್ಯವಿತ್ತು. ಇನ್ನೆಂದೂ ನಾನು ನನ್ನ ಗಂಡ ನನಗಾಗಿ, ನಿನ್ನವರಿಗಾಗಿ ಮಾತ್ರವೇ ಇರಬೇಕೆಂಬ ಸ್ವಾರ್ಥ ಭಾವನೆಯನ್ನು ಬಿಟ್ಟುಬಿಡುವುದೇ ನನ್ನ ವ್ರತವಾಗಲೀ ಎಂದು ಮನಸ್ಸಿನಲ್ಲಿಯೇ ಪಣತೊಟ್ಟಳು.

ಎಲ್ಲರಂತೆ ತನ್ನ ಮಕ್ಕಳೂ ಬಿ.ಎ. ಎಂ. ಎ. ಓದಿ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಇರುವುದನ್ನು ಕಣ್ತುಂಬ ನೋಡಿ ಆನಂದಿಸಬೇಕೆಂದುಕೊಂಡಿದ್ದಳು. ಆದರೆ ಅದೆಲ್ಲವೂ ಕನಸಾಗಿಯೇ ಉಳಿಯಿತು. ಗಾಂಧಿಯ ಆತ್ಮೀಯ ಗೆಳೆಯರೂ ಕೂಡಾ ಮಕ್ಕಳ ವಿಚಾರದಲ್ಲಿನ ಅವರ ನಿಲುವನ್ನು ಆಕ್ಷೇಪಿಸಿದರು.

ಎಷ್ಟು ತಡೆದುಕೊಳ್ಳಬೇಕೆಂದರೂ ಕಸ್ತೂರಳಿಗೆ ಗಂಡನ ಜೊತೆ ಮತ್ತೊಮ್ಮೆ ಮಕ್ಕಳ ವಿದ್ಯಾಭ್ಯಾಸ ಕುರಿತಾಗಿ ಪ್ರಸ್ತಾಪಿಸಬೇಕೆಂದು ಕಾಯುತ್ತಿದ್ದವಳಿಗೆ ಒಂದು ದಿನ ಅವಕಾಶ ಸಿಕ್ಕಿತು.

"ನೋಡಿ, ನೀವು ಮಾಡುತ್ತಿರುವುದು ಸರಿಯಲ್ಲ ಅವರ ಭವಿಷ್ಯವನ್ನು ನೀವು ನಿರ್ಧರಿಸುವುದರಲ್ಲಿ ನಿಮಗೆ ಯಾವ ಅಧಿಕಾರವಿದೆ? ಎಲ್ಲರ ಉದ್ಧಾರಕ್ಕಾಗಿ ಟೊಂಕ ಕಟ್ಟಿ ನಿಂತಿದ್ದೀರಿ. ಒಳ್ಳೆಯದೇ, ನಾನು ಬೇಡವೆನ್ನುವುದಿಲ್ಲ. ಆದರೆ ನಮ್ಮ ಆ ದೊಡ್ಡ ಮಕ್ಕಳ ವಿಷಯವಾಗಿಯಾದರೂ ಸ್ವಲ್ಪ ಆಲೋಚಿಸಿ, ಐದು ಮಕ್ಕಳ ಭವಿಷ್ಯ ಹಾಳು ಮಾಡುವುದಕ್ಕೆ ನಾನು ಬಿಡುವುದಿಲ್ಲ. ಇಲ್ಲಿ ಬೇಡವೆನ್ನುವುದಾದರೆ, ನಿಮ್ಮ ಅಕ್ಕನ ಮಗನನ್ನು ಮತ್ತು ನಮ್ಮ ಹರಿಲಾಲನನ್ನು ಭಾರತಕ್ಕೆ ಕಳಿಸಿ, ವಸತಿ ಶಾಲೆಯಲ್ಲಿರಿಸಿ ಓದಿಸೋಣ ಎನ್ನು ಇಲ್ಲಿರುವ ಚಿಕ್ಕ ಮಕ್ಕಳ ಹಣೆಬರಹ ಹೇಗಾಗುವುದೋ ನೋಡೋಣ" ಎಂದು ಹೇಳಿದ್ದಕ್ಕೆ ಸಮ್ಮತಿಸಿ, ಗಾಂಧಿ ಹರಿಲಾಲನನ್ನು ಮತ್ತು ಅಕ್ಕನ ಮಗನನ್ನು ಆಫ್ರಿಕಾದಿಂದ ಭಾರತಕ್ಕೆ ಕಳಿಸಿಕೊಟ್ಟರು. ಅವರ ಜೊತೆಗಿದ್ದ ಮಿಕ್ಕವರು ಯಾವುದೇ ಪ್ರತಿರೋಧವಿಲ್ಲದೆ, ಗಾಂಧಿ ಹೇಳಿದಂತೆ ಇರುವಲ್ಲಿಯೇ ಕಲಿಯುತ್ತ ತೃಪ್ತರಾಗಿದ್ದರು.

"ಬಾ, ಬಾಪು ಅವರಿಗೆ ನಮ್ಮ ಮದುವೆ ಸಿಟ್ಟು ತರಿಸಿರ ಬೇಕಲ್ಲವೇ? ಅವರೇಕೆ ನಮ್ಮನ್ನು ನೋಡಲು ಕಾಣಿಸುತ್ತಿಲ್ಲ. ಅವರಿನ್ನೂ ಸಿಟ್ಟಾಗಿದ್ದರೆ, ನಮ್ಮನ್ನು ಇಲ್ಲಿ ಇರಲು ಬಿಡುತ್ತಾರೆಯೇ?" ಎಂದು ಕೇಳಿದ.

"ಇಲ್ಲ ಮಗು ಹಾಗೇನೂ ಇಲ್ಲ, ಎಷ್ಟಾದರೂ ಮಕ್ಕಳು ಮಕ್ಕಳೇ ಅಲ್ಲವೇ? ನಿಜ, ನಿಮ್ಮ ಮದುವೆ ಸುದ್ದಿ ತಿಳಿಯುತ್ತಿದ್ದಂತೆ ಸಿಟ್ಟಾದರೂ ಅವರಿಗೊಂದಿಷ್ಟೂ ಮುನ್ಸೂಚನೆ ಕೊಡದೆ ದಿಢೀರಾಗಿ ಮದುವೆಯಾದ ವಿಷಯ ತಿಳಿಸಿದ್ರೆ, ಅವರಿಗೇ ಅಲ್ಲ, ಯಾರಿಗಾದರೂ ಸಿಟ್ಟು ಬರುವುದಿಲ್ಲವೇ? ಅವರ ಜಾಗದಲ್ಲಿ ನೀನು ನಿಂತು ಆಲೋಚಿಸು" ಎಂದಳು.

ಹರಿ ಮೌನವಾದ. ಬಾಳ ಮಾತಿನಲ್ಲಿ ಸತ್ಯವಿತ್ತು. ಬಾಪುಗೆ ತಿಳಿಸದೆ ಮದುವೆಯಾದದ್ದು ತಪ್ಪೇ ಎನಿಸಿತು.

"ನೀನೇನೂ ಯೋಚನೆ ಮಾಡಬೇಡ. ನಾನು ಅವರೊಂದಿಗೆ ಮಾತನಾಡಿದ್ದೇನೆ ಖಂಡಿತವಾಗಿಯೂ ನಿಮ್ಮನ್ನು ಕ್ಷಮಿಸುತ್ತಾರೆ" – ಎಂದು ಭರವಸೆ ಕೊಟ್ಟಳು.

ಕಸ್ತೂರಳಿಗೆ ಇನ್ನು ಮುಂದೆ ಮತ್ತೊಂದು ಹೊಸ ಪಾತ್ರವೊಂದನ್ನು ಅಭಿನಯಿಸಬೇಕಿತ್ತು. ಅದೇನೆಂದರೆ ಅತ್ತೆಯ ಪಾತ್ರ. ಈ ಪಾತ್ರ ವಹಿಸಲು ಎಂದಿಗಿಂಗಲೂ ಹೆಚ್ಚಿನ ಉತ್ಸಾಹದಲ್ಲಿ ಇರುತ್ತಿದ್ದಳು. ಆದರೆ ಗುಲಾಬಳಿಗೆ ಸೊಸೆಯಾಗಿ ತಾನು ಹೇಗೆ ನಡೆದುಕೊಳ್ಳಬೇಕೆನ್ನುವುದು ತಿಳಿದಿರಲಿಲ್ಲ. ಏನು ಮಾಡುವುದಕ್ಕೂ ಹೆದರಿಕೆ ಸಂಕೋಚ? ಆದಷ್ಟೂ ನಯ, ವಿನಯ ಗಳೊಂದಿಗೆ ನಡೆದುಕೊಳ್ಳಲು ಪ್ರಯತ್ನನಿಸಿದಳು. ಅತ್ತೆಗೆ ಸಿಟ್ಟುಬಾರದಂತೆ ಎಚ್ಚರವಹಿಸಿದಳು. ಕಸ್ತೂರಳ ಸೂಕ್ಷ್ಮ ಕಣ್ಣಿಗೆ, ಗುಲಾಬಳ ಹಿಂಜರಿಕೆ, ಸಂಕೋಚಗಳು ಕಾಣಿಸಿದವು? ಅವಳನ್ನು ಹತ್ತಿರಕ್ಕೆ ಕರೆದುಕೊಂಡು, ತನ್ನ ಬಗ್ಗೆ ಅವಳಲ್ಲಿ ಇರಬಹುದಾದ ಭಯ ಸಂಕೋಚಗಳನ್ನು ದೂರ ಮಾಡಬೇಕೆಂದುಕೊಂಡಳು. ನಾಲ್ಕು ಗಂಡು ಮಕ್ಕಳ ಹೊರತು, ತಾನು ಬಹಳವಾಗಿ ಬಯಸುತ್ತಿದ್ದ ಹೆಣ್ಣುಮಗು ಇರದ ಕೊರತೆ ಅವಳನ್ನು ಬಹಳವಾಗಿ ಕಾಡುತ್ತಿತ್ತು. ಆದರೇನು ಮಾಡುವುದು ಎಲ್ಲವೂ ದಐವ ನಿಯಾಮಕ. ಅವನು ಕೊಟ್ಟಿದ್ದನ್ನು ಒಪ್ಪಿಕೊಳ್ಳಬೇಕೆಂದು ಸಮಾಧಾನಗೊಂಡಿದ್ದಳು. ಈಗ ಗುಲಾಬ್ ಬಂದದ್ದು ಎಷ್ಟೋ ದಿನಗಳಿಂದ ಹೆಪ್ಪು ಗಟ್ಟಿದ್ದ ನೋವು ಕರಗಿ ಹರಿದು ಹೋಯಿತು. ಅವಳನ್ನು ನೋಡಿದಾಗಲೆಲ್ಲ ದೊಡ್ಡ ನಿಧಿಯೊಂದು ಸಿಕ್ಕಿದಾಗ ಆಗುವ ಸಂತೋಷಕ್ಕಿಂತಲೂ ಹೆಚ್ಚಿನ ಸಂತೋಷವಾಗುತ್ತಿತ್ತು. ತನ್ನ ರೆಕ್ಕೆಗಳ ರಕ್ಷಣೆಯಡಿಯಲ್ಲಿ ಅವಳನ್ನು ಜೋಪಾನವಾಗಿ ಇರಿಸಿಕೊಳ್ಳಲು ಮುಂದಾದಳು. ಅಪರಿಚಿತ ದೇಶ, ಅಪರಿಚಿತ ಜನ! – ಮೊದಲು ತಾನು ಇಲ್ಲಿಗೆ ಬಂದಾಗ ತನಗುಂಟಾದ ಅನುಭವವೇ ಅವಳಿಗಾಗುತ್ತಿರಬೇಕು. ಒಂದೆರಡು ದಿನದಲ್ಲಿ ಎಲ್ಲವೂ ಸರಿಹೋಗುತ್ತದೆ ಎಂದು ಆಲೋಚಿಸಿದಳು.

ಕಸ್ತೂರಳು ಹಲವು ಸಂದಿಗ್ಧಗಳ ಸುಳಿಯಲ್ಲಿ ಸಿಕ್ಕಿದ್ದಳು. ಒಂದು ಕಡೆ ತುಂಬು ಬಸುರಿ ಗುಲಾಬ್, ಮತ್ತೊಂದು ಕಡೆ ಗಂಡನ ಮೇಲೆ ಎರಗುತ್ತಿರುವ ಆಘಾತಗಳು? ಮನಸ್ಸಿಗೆ ಎಷ್ಟೇ ಧೈರ್ಯ ತಂದುಕೊಂಡರೂ ಅವಳಂತರಾಳದಲ್ಲಿ ಭಯದ ಭೂತ ತಳವೂರಿತ್ತು. ಇಂಥಾದ್ದರಲ್ಲಿ ಅವಳ ಪ್ರಥಮ ಆಯ್ಕೆ ಗುಲಾಬಳದಾಗಿತ್ತು. ತನ್ನ ಹಿರಿಯ ಮಗನ ಸಂತಾನದ ಸಂತೋಷ ಸ್ವಲ್ಪ ಮಟ್ಟಿಗೆ ನೆಮ್ಮದಿಯನ್ನು ನೀಡಿತ್ತು. ಮೊಮ್ಮಗನೋ, ಮೊಮ್ಮಗಳೋ, ಸುಖ ಪ್ರಸವವಾದರೆ ಸಾಕೆಂದು ಬಯಸುತ್ತಿದ್ದಳು.

"ಬಾ ಕ್ಷಮಿಸಿ ನಾನು ಇಲ್ಲಿಗೆ ಬಂದಿರುವುದು ನಿಮ್ಮ ಜೊತೆ ಇರಲಿಕ್ಕೆ ಅಲ್ಲ. ನಾನು ಕೂಡಲೇ ಭಾರತಕ್ಕೆ ಹೊರಡುವವನಿದ್ದೇನೆ. ಹೋಗುವುದಕ್ಕೆ ಹಣವೂ ಇಲ್ಲದ ದರಿದ್ರ ಸ್ಥಿತಿಯಲ್ಲಿ ಒಂದಿಷ್ಟು ಹಣ ಭಿಕ್ಷೆ ಬೇಡಿ ಕೇಳಬೇಕೆಂದಿದ್ದೇನೆ. ಇಂಥ ದುಃಸ್ಥಿತಿಗೆ ಬರಲು ಕಾರಣವಾದ ಬಾಪು ಅವರಿಗೆ ಕಡೆಯ ನಮಸ್ಕಾರ ಹೇಳಿ ಹೋಗೋಣವೆಂದು ಬಂದೆ ಅಷ್ಟೆ!" ಎಂದ.

ಕಸ್ತೂರಳಿಗೆ ಹರಿಯ ಮಾತುಗಳು ಶೂಲದಂತೆ ಇರಿದವು. ತಂದೆ ತಾಯಿಯ ಬಗ್ಗೆ ಇಂತಹ ತಿರಸ್ಕಾರವೇ? ಇಷ್ಟೊಂದು ಅಸಮಾಧಾನವೆ? ಹರಿ ಹೇಳುತ್ತಿರುವುದರಲ್ಲಿ ಸತ್ಯವಿದೆ ಎನ್ನುವುದ ನನಗೆ ಗೊತ್ತು. ತನಗೆ ಅನುಭವ ಇಲ್ಲದಿದ್ದರೂ ಜನ ಸಾಮಾನ್ಯರಾಗುವಂತಹ ತೊಂದರೆಯನ್ನು ಜ್ಞಾನಿಯಂತೆ ಚಿಂತಿಸುತ್ತಾಳೆ. ಮಗನ ಕಷ್ಟಕ್ಕೆ ಮರುಗುತ್ತಾಳೆ. ಯಾರು ಹೇಳದಿರುವ ನೀತಿಪಾಠವನ್ನು ತಾಯಿಯಾಗಿ ತಿಳಿಸಿ ತನ್ನ ಜವಾಬ್ದಾರಿಯನ್ನು ತೀರಿಸಿಕೊಳ್ಳುತ್ತಾಳೆ. ವಾತ್ಸಲ್ಯಮಯಿಯಾಗಿ ತನ್ನ ಮಗನನ್ನು ಸಮಾಧಾನಿಸುತ್ತಾಳೆ.

"ಅಲ್ಲಾರಿ. ಛಗನ್‌ಲಾಲ ನಿಮಗೆ ಹೊಳೆದನೇ ಹೊರತು ನಿಮ್ಮ ಕಣ್ಮುಂದೆಯೇ ಆಶ್ರಮದಲ್ಲಿ ಎಷ್ಟೆಲ್ಲ ಕಷ್ಟಗಳನ್ನು ಸಹಿಸುತ್ತಾ, ಸುಖವಾಗಿ ತಿನ್ನಲೂ ಮಲಗಲೂ ಸೌಕರ್ಯವಿಲ್ಲದೆ, ಬೆಳಗಿನಿಂದ ಸಂಜೆಯವರೆಗೆ ದುಡಿಯುತ್ತಾ ಬೆವರಲ್ಲಿ ತೊಯ್ದು, ದರಿದ್ರರಂತೆ ಬದುಕುತ್ತಿರುವ ನಿಮ್ಮ ಮಕ್ಕಳ ನೆನಪಾಗಲಿಲ್ಲವೇ? ನಿಮ್ಮ ನಾಲ್ಕೂ ಜನ ಮಕ್ಕಳಲ್ಲಿ ಕಡೆಯ ಪಕ್ಷ ಒಬ್ಬನಾದರೂ ಜೀವನದಲ್ಲಿ ಮೇಲೆ ಬರುತ್ತಿದ್ದನಲ್ಲ! ನಿಮ್ಮ ಮನಸ್ಸು ಮಕ್ಕಳ ಬಗ್ಗೆ ಅದೆಷ್ಟು ಕ್ರೂರವಾಗಿದೆ" ಎಂದು ನೋವಿನಿಂದ ನುಡಿದಳು.

ಕಸ್ತೂರಳ ಬಾಯಿ ಕಟ್ಟಿ ಹೋಗಿತ್ತು. ಅವಳದು ಸಂದಿಗ್ಧ. ಒಂದು ಕಡೆ ಗಂಡ, ಮತ್ತೊಂದು ಕಡೆ ಮಗ. ಯಾರ ಪರವಾಗಿ ಮಾತನಾಡುವುದು, ಇಬ್ಬರ ಮಾತುಗಳೂ ಅವರವರ ನಂಬಿಕೆಗಳಿಂದ ಹೊಮ್ಮಿವೆ. ಇಬ್ಬರ ಮಾತುಗಳಲ್ಲಿಯೂ ತರ್ಕವಿದೆ; ಅರ್ಥವಿದೆ, ಸತ್ಯವಿದೆ. ಹೀಗಿರುವಾಗ ತಾನೇನು ಮಾಡಬೇಕೆಂದು ತೋಚದೆ, ಒಳಗೊಳಗೇ ಸಂಕಟವನ್ನು ಅನುಭವಿಸಿದಳು. ಮೂವರ ನಡುವೆ ಮೌನವೇ ಕವಿದಿತ್ತು. ಹರಿಗೆ ಸಂಬಂಧಪಟ್ಟ ಪ್ರಸಂಗಗಳು ಅಪ್ಪನೊಂದಿಗೆ (ಬಾಪು) ವಾಗ್ವಾದಗಳು ಕಣ್ಣಿಗೆ ಕಟ್ಟಿದಂತೆ ಮರುಕಳಿಸಿದವು. "ಓರ್ವ ಮಹಿಳೆ ಪುರಷಾಧಿಕಾರದ ನಡುವೆ ತಾನು ಹೆಣ್ಣಾಗಿ ತನ್ನ ಬದುಕನ್ನು ಅರ್ಥೈಸಿ ನಿರ್ವಹಿಸಿಕೊಳ್ಳುವ ರೀತಿಯು ಒಂದು ಬಗೆಯಾದರೆ ತಾನು ತಾಯಾಗಿ ತನ್ನ ಬದುಕಿನ ಜವಾಬ್ದಾರಿಗಳನ್ನು ಹೊರುವ ಬಗ್ಗೆ ಮತ್ತೊಂದಾಗಿರುತ್ತದೆ." [೨]

ಕಸ್ತೂರಳಿಗೆ ತನ್ನ ದೇಶಕ್ಕೆ, ತನ್ನವರು ಇರುವೆಡೆಗೆ ಹೋಗುತ್ತಿದ್ದೇನೆಂಬ ಸಂತೋಷ ಒಂದು ಕಡೆಯಾದರೆ, ಕೆಲಸದ ಒತ್ತಡದಲ್ಲಿ ನೆನಪಿಸಿಕೊಳ್ಳಲೂ ಸಾಧ್ಯವಾಗದಿದ್ದ ಮತ್ತು ಸಿಟ್ಟುಗೊಂಡು ಹೋದ ಹರಿಲಾಲನು ಅಲ್ಲಿ ಹೇಗೆ ಬದುಕುತ್ತಿದ್ದಾನೋ ಎನ್ನುವುದನ್ನು ಕಾಣುವ ಕುತೂಹಲ ಮತ್ತೊಂದು ಕಡೆಯಿದ್ದು, ಆದಷ್ಟು ಬೇಗ ಹೋಗುವ ತವಕದಲ್ಲಿ ಇದ್ದಳು.

---

೨. ಡಾ. ನಟರಾಜ ತಲಘಟ್ಟಪುರ : ಗುರುತಿನ ದೀವಿಟಿಗೆ ಪು. ಸಂ. ೫೬ ವರ್ಷನಿಧಿ ಪ್ರಕಾಶನ ೨೦೧೬.

ಗುಲಾಬ್ ಹರಿಲಾಲರ ನಡುವೆ ಅನನ್ಯ ಪ್ರೀತಿಯಿತ್ತು. ಆದರೆ ಪ್ರೀತಿಯೊಂದೇ ಹೊಟ್ಟೆ ತುಂಬುವುದಿಲ್ಲವಲ್ಲ. ಹರಿಲಾಲನ ಬಡತನದ ವಾಸನೆ ಮೂಗಿಗೆ ಬಡಿಯಿತು. ಬಟ್ಟೆ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ. ಏನೇನೋ ಕನಸುಗಳನ್ನು ಕಟ್ಟಿಕೊಂಡು, ಸಾಲಸೋಲ ಮಾಡಿ ಬಹಳವಾಗಿ ಜರ್ಝರಿತನಾಗಿದ್ದ. ತನ್ನ ನಾಲ್ಕು ಜನ ಮಕ್ಕಳಲ್ಲಿ ಇವನೊಬ್ಬ ಯಾಕೆ ಹೀಗಾದ? ದೇವರೇ ನೀನೆಂಥ ನಿಷ್ಕರುಣಿ ಎಂದು ಮನದಲ್ಲಿ ಕೊರಗಿದಳು. ಗಂಡ ಜಪ್ಪಯ್ಯ ಎಂದರೂ ಬಿಡಿಗಾಸಿನ ಸಹಾಯ ಮಾಡಲು ಸಿದ್ಧನಿರಲಿಲ್ಲ. ಸಾಲದ್ದಕ್ಕೆ ಅವನ ಸಾಲದ ಬಗ್ಗೆ ಪತ್ರಿಕೆಗಳಲ್ಲಿ ಬಂದಾಗ ನೇರವಾಗಿ ನಿಷ್ಠುರವಾಗಿ "ಹರಿಲಾಲ ವಯಸ್ಸಿಗೆ ಬಂದಿರುವ ಮಗ, ನಮ್ಮಿಂದ ದೂರವಾಗಿ ಸ್ವತಂತ್ರನಾಗಿ ಬದುಕುತ್ತಿದ್ದಾನೆ. ಅವನ ಸಾಲಸೋಲದ ಜವಾಬ್ದಾರಿಯನ್ನು ಹೊರುವುದಕ್ಕೆ ಈ ಸಮರ್ಥ ಸಮಾಜ ಸೇವಕ ತಂದೆ ಅಸಮರ್ಥನಾಗಿದ್ದಾನೆ".

ಕಸ್ತೂರಬಾಳ ತಾಯಿ ಹೃದಯ ಮಮ್ಮಲ ಮರುಗುತ್ತಿತ್ತು. ಮಕ್ಕಳ ವಿಚಾರದಲ್ಲಿ ಇಷ್ಟು ಕ್ರೂರವಾಗಿ ನಡೆದುಕೊಳ್ಳುವುದೇ? ತುಂಬಾ ಕಷ್ಟದಲ್ಲಿ ಇದ್ದೇನೆ. ಊಟಕ್ಕಿಲ್ಲ, ಸಹಾಯ ಮಾಡು ಎಂದು ಕೇಳಿಕೊಂಡದ್ದು ತಪ್ಪೇ? ಮಕ್ಕಳವಂದಿಗ ಹರಿ ಎಷ್ಟು ಪಾಡು ಪಡುತ್ತಿದ್ದಾನೋ ಏನೋ! ಮಣಿಲಾಲ ಗೊತ್ತಿಲ್ಲದ ಕಡೆ ಹೋಗುತ್ತಿದ್ದಾನೆ. ಅವನಿಗೆ ಕೆಲಸ ಸಿಗುವುದು ಹೇಗೋ, ಯಾವಾಗೋ, ಅಲ್ಲಿವರೆಗೆ ಅವನು ಎಲ್ಲಿರಬೇಕು? ಹೇಗೆ ಬದುಕಬೇಕು? ಇವೆಲ್ಲವೂ ಅವರ ತಲೆಗೆ ಬರುವುದಿಲ್ಲವೇ? ನಾನು ಅವರಿಗೆ ಬುದ್ಧಿ ಹೇಳುವುದಾದರೂ ಹೇಗೆ, ಹಠಮಾರಿ ಬೇರೆ! ಪರಿಪೂರ್ಣತೆ ಶಿಸ್ತುಗಳನ್ನು ಯಾರಿಂದ ನಿರೀಕ್ಷಿಸುತ್ತೇವೆಯೋ ಅವರ ಮನಸ್ಸಿಗೆ ಎಷ್ಟು ನೋವಾಗುವುದೆಂಬ ಅರಿವಾದರೂ ಅಂಥ ನಿಷ್ಠುರ ಮನುಷ್ಯನಿಗೆ ಸಾಧ್ಯವೇ? ಇರಲಿ ಅವರು ಕಲಿಸಿದ ಪಾಠದ ಮೂಲಕವೇ ಅವರಿಗೆ ತಿಳಿಸಿ ಹೇಳಲು ಪ್ರಯತ್ನಿಸುತ್ತೇನೆ ಎಂದೆಲ್ಲಾ ಯೋಚನೆ ಮಾಡಿದಳು.

ಥಟ್ಟನೆ, ಸಮಯಕ್ಕಾಗಿ ಕಾಯುತ್ತಿದ್ದವಳು, "ಹೌದೌದು ದೊರೆಗಳು, ನಿಮ್ಮ ಮಾತು, ನಿಮ್ಮ ಆದೇಶಗಳನ್ನು ಶಿರಸಾವಹಿಸಿ ಮಾಡುವ ನಮ್ಮಂಥವರ ಸಹಾಯವೂ ಬೇಕಿಲ್ಲ. ಹಾಗೆಯೇ ನೀವೂ ಯಾರ ಸಹಾಯವೂ ಮಾಡುವುದಿಲ್ಲ. ಅದರಲ್ಲಿಯೂ ನಿಮ್ಮ ಮಕ್ಕಳಿಗೆ ಸಹಾಯ ಮಾಡುವುದೆಂದರೆ ನಿಮಗೆ ಚೇಳು ಕಡಿದ ಹಾಗೆ ಅಲ್ಲವೇ?" ಎಂದು ವ್ಯಂಗ್ಯದಿಂದ ಹೇಳಿದಳು.

"ಚೆನ್ನಾಗಿದೆ! ಹಸಿವು, ಬಡತನಗಳಿಂದ ಸಾಯುತ್ತಿದ್ದೇನೆ ಎಂದು ಬರೆದ ಮೇಲೆ, ಸತ್ಯ ಹುಡುಕಿ ಸಹಾಯ ಮಾಡುವಷ್ಟು ಹೊತ್ತಿಗೆ ಸತ್ತೇ ಹೋಗಿರುತ್ತಾರೆ. ಮೊದಲಿನಿಂದಲೂ ಹರಿಯ ಮೇಲೆ ಮಲಮಗನೆಂಬ ಧೋರಣೆ ಯಾಕೆಂದರೆ ಅವನು ನಿಮ್ಮ ಮಾತು ಕೇಳಲಿಲ್ಲ. ನಿಮ್ಮನ್ನು ಹಲವು ರೀತಿಯಲ್ಲಿ ಪ್ರಶ್ನಿಸುತ್ತ, ಪ್ರತಿಭಟಿಸುತ್ತಾ ಬಂದಿದ್ದಾನೆ. ಅದಕ್ಕೇ ಅಲ್ಲವೇ ನೀವು ಅವನ ವಿಚಾರದಲ್ಲಿ ಕಲ್ಲಾಗಿರುವುದು... ಅವನ ವಿಷಯ ಇರಲಿ, ಮಣಿಯನ್ನು ಇಲ್ಲಿಂದ ಶಿಕ್ಷೆಯ ಹೆಸರಿನಲ್ಲಿ ಓಡಿಸಿ ಬಿಟ್ಟಿರಲ್ಲ. ಅಲ್ಲಿ ಅವನನ್ನು ಕರೆದು ಮಣೆ ಹಾಕಿ, ಊಟ ತಿಂಡಿ ಕೊಟ್ಟು ಸಾಕುವವರು ಯಾರು? ಅವನಿಗೆ ಕೆಲಸ ಯಾರು ಕೊಡುತ್ತಾರೆ? ನೀವು ನಿಯಮ, ಸಿದ್ಧಾಂತ ಆದರ್ಶಗಳ ಹೆಸರಿನಲ್ಲಿ ಮನುಷ್ಯತ್ವ ಮಾನವೀಯತೆಗಳನ್ನೇ ಮರೆಯುತ್ತಿದ್ದೀರಿ. ಅಹಿಂಸೆ, ಅಹಿಂಸೆ ಎಂದು ಬೊಬ್ಬೆ ಹಾಕುತ್ತೀರಿ. ಮನಸ್ಸಿಗೆ ನೋವುಂಟುಮಾಡುವುದು ಹಿಂಸೆಯಲ್ಲವೇ. ಚಳುವಳಿಗಳಲ್ಲಿ ಏಟು ತಿಂದು ಸುಮ್ಮನಿರಿ ಎನ್ನುತ್ತೀರಿ. ಆದರೆ ಮನಸ್ಸು ಮೈ ಮನಸ್ಸುಗಳನ್ನು ಒಂದೇ ಎಂದು ಭಾವಿಸಿದರೆ ನಿಮ್ಮ ಅಹಿಂಸೆಗೆ ಅರ್ಥವೇ ಇಲ್ಲ" ಎಂದು ಬಡಬಡನೆ ಮನಸ್ಸಿನಾಳದಲ್ಲಿ ಅಡಗಿ ಕುಳಿತಿದ್ದ ಮಾತುಗಳನ್ನೆಲ್ಲ ಒಮ್ಮೆಲೇ ಹೊರಹಾಕಿಬಿಟ್ಟಳು.

ಕೆಟ್ಟ ಗೆಳೆಯರ ಸಹವಾಸದಲ್ಲಿ ಬಿದ್ದು ದಿನಾ ಕುಡಿದು ತೂರಾಡುತ್ತಾ ಹೊತ್ತಲ್ಲದ ಹೊತ್ತಿನಲ್ಲಿ ಬಂದು ಬಾಗಿಲು ತಟ್ಟಿ, ತಡವಾದರೆ ರಾದ್ಧಾಂತ ಮಾಡುತ್ತಾರೆ. ನಿದ್ದೆ ಮಾಡುವ ಮಕ್ಕಳು ಬೆಚ್ಚಿಬಿದ್ದು ಎಚ್ಚರಗೊಂಡು ಭಯದಿಂದ ಎದ್ದು ಬಂದು ನನ್ನನ್ನು ಬಿಗಿದುಕೊಳ್ಳುತ್ತಾರೆ. 'ಬಾ' ಹರಿ ಬಾಮ ಯಾಕೆ ಹೀಗೆ? ಎಂದು

ಕೇಳುತ್ತಾರೆ. ಎಷ್ಟೋ ದಿನ ರಾತ್ರಿ ಮನೆಗೆ ಬಾರದೆ, ಸೂಳೆಯರ ಸಹವಾಸದಲ್ಲಿದ್ದು ಬರುತ್ತಾರೆ. ಯಾಕೆ ಹೀಗೆಲ್ಲ ಮಾಡುತ್ತೀರಿ. ಒಂದು ಕಡೆ ನೆಟ್ಟಗೆ ಉದ್ಯೋಗ ಮಾಡಿಕೊಂಡು ಇರಬಾರದೇ ಎಂದು ಕೇಳಿದರೆ, ಸಿಟ್ಟಿನಿಂದ ಮೇಲೆ ಹಾಯುತ್ತಾರೆ. ಯಾವ ಕೆಲಸ ಸಿಕ್ಕಿದರೂ ಒಂದೆರಡು ದಿನಕ್ಕಿಂತ ಹೆಚ್ಚು ಮುಂದುವರೆಯುವುದಿಲ್ಲ. ಸ್ವಂತ ವ್ಯಾಪಾರಕ್ಕೆಂದು ಸಾಲ ಮಾಡುತ್ತಾರೆ. ಅಮ್ಮನ ಬಳಿಯೂ ಮೂರು ಸಾವಿರ ರೂಪಾಯಿ ಸಾಲ ಪಡೆದು ಯಾವುದೋ ಬಟ್ಟೆ ವ್ಯಾಪಾರಾಂತ ಮಾಡಿ, ಹಣವನ್ನೆಲ್ಲ ಮುಳುಗಿಸಿ ಬಿಟ್ಟರು. ಅಮ್ಮನಿಗೆ ಒಂದು ಕಾಸು ಬಡ್ಡಿಯೂ ಸಿಗಲಿಲ್ಲ. ಅವಕಾಶ ಸಿಕ್ಕರೆ ಸಾಕು ಬಾಪು ಅವರನ್ನು ಬೈಯುತ್ತಲೇ ಇರುತ್ತಾರೆ.

'ಬಾ' ಗೆ ಗುಲಾಬಳ ಸಂಕಟ ಕಂಡು ಕರುಳು ಹಿಂಡಿದಂತೆ ಆಯಿತು. ಇಂಥ ಕ್ರೂರಿ ದುರಭ್ಯಾಸಿ, ಅವಿವೇಕಿ ಮಗನ ಜೊತೆ ಬಾಳ್ವೆ ಮಾಡುತ್ತಿರುವ ಗುಲಾಬಳ ಭವಿಷ್ಯದ ಬಗ್ಗೆ ಚಿಂತಿತಳಾದಳು. ಬಾಗೆ ಇದೆಲ್ಲವನ್ನು ನುಂಗಿಕೊಳ್ಳುವುದು ಸಾಧ್ಯವೇ ಆಗಲಿಲ್ಲ. ಅವನ ಬಗ್ಗೆ ಇದ್ದ ಅವಳೆದೆಯ ಅನುಕಂಪ ಸುಟ್ಟು ಕರಕಲಾಯಿತು. ತಾಳ್ಮೆಗೂ ಒಂದು ಮಿತಿ ಇರುತ್ತದೆ. ದೇಶವೆಲ್ಲಾ ಮಹಾತ್ಮನೆಂದು ಕೊಂಡಾಡುವ ತಂದೆಗೆ, ಇಂಥವನು ಮಗನಾದದ್ದು, ಗಂಡನ ದುರದೃಷ್ಟವೂ ಹೌದು, ತಾಯಿಯಾದ ತನ್ನ ಪಾಪದ ಪಿಂಡವೂ ಹೌದು. ಹುಟ್ಟುವ ಮೊದಲೇ ಸಾಯಬಾರದಿತ್ತೇ ಎನ್ನುವಷ್ಟರ ಮಟ್ಟಿಗೆ ಅವಳ ಹೃದಯ ಕಲ್ಲಾಗಿ ಹೋಗಿತ್ತು. ಹಾಗಂತ ಸುಮ್ಮನಿದ್ದುಬಿಟ್ಟರೆ ಅವನು ಮುಂದೆ ಇನ್ನೇನೇನು ಮಾಡುತ್ತಾನೆಯೋ! ಏನಾದರೂ ಕಡೆಯ ಪ್ರಯತ್ನವಾಗಿ ಅವನಿಗೆ ಬುದ್ಧಿ ಹೇಳಬೇಕು ಅತಿಯಾಗಿ ಪ್ರೀತಿಸುವ ತಾಯಿಯೆದೆಯ ನೋವಿನ ಗಾಯಗಳನ್ನು ತೋರಿಸಬೇಕು. ದಹಿಸುತ್ತಿರುವ ಭಾವನೆಗಳನ್ನು ವಿವರಿಸಿ ಹೇಳಬೇಕು. ತಂದೆಯ ಅಂತರಾಳದ ಪ್ರೀತಿ, ವಾತ್ಸಲ್ಯದ ಸೆಲೆಗಳನ್ನು ವಿವರಿಸಿ ಹೇಳಬೇಕು. ಅವನು ಮಾಡುತ್ತಿರುವ ಭಯಂಕರ ಪಾಪಗಳನ್ನು ಅವನ ಕಣ್ಣಿಗೆ ರಾಚುವಂತೆ ವಿವರಿಸಿ, ಕಾಣುವಂತೆ ಮಾಡಬೇಕು ಎನಿಸಿ, ದಿಲ್ಲಿಯಲ್ಲಿದ್ದ ದೇವದಾಸನ ಕೈಯಲ್ಲಿ ಮಗ ಹರಿಗೆ ಪತ್ರ ಬರೆಸಿದಳು.

ಮಗನಿಗೆ ಬುದ್ಧಿವಾದ ಹೇಳಿದ್ದಾಯಿತು. ಆದರೆ ಅವನನ್ನು ದಾರಿ ತಪ್ಪಿಸಿದ, ಮುಸ್ಲಿಂ ಬಂಧುಗಳಿಗೂ ಒಂದೆರಡು ಮಾತನ್ನು ಹೇಳಬಯಸಿದಳು. ಈ ಪತ್ರವನ್ನೂ ಬಹಿರಂಗ ಪತ್ರವಾಗಿ ಎಲ್ಲ ಪತ್ರಿಕೆಗಳಲ್ಲಿ ಬರುವಂತೆ ಕೋರಿದ್ದಳು. ತನ್ನ ಪತ್ರವನ್ನು 'ನೊಂದ ತಾಯಿಯ ಕ್ಷೀಣ ದನಿ' ಆತ್ಮಸಾಕ್ಷಿಯನ್ನು ಕೇಳಿಕೊಳ್ಳಿ' ಎಂಬ ಶೀರ್ಷಿಕೆಗಳಲ್ಲಿ ಕಳಿಸಿದಳು.

ರಾಷ್ಟ್ರೀಯ ಚಳುವಳಿ, ರಾಷ್ಟ್ರದ ಉದ್ಧಾರಕ್ಕೆ! ದೇಶದ ಪ್ರಜೆಗಳ ಆತ್ಮಗೌರವಕ್ಕೆ! ಆದರೆ 'ಬಾ'ಗೆ ಅದಷ್ಟೇ ಮುಖ್ಯವಲ್ಲ. ತನ್ನ ನಾಲ್ಕು ಜನ ಮಕ್ಕಳ ಭವಿಷ್ಯದ ಚಿಂತೆ ಕಾಡತೊಡಗಿತು. ಅವರೆಲ್ಲರೂ ಮದುವೆಯ ವಯಸ್ಸಿಗೆ ಬಂದಿದ್ದಾರೆ. ಹರಿಲಾಲನ ವಿಚಾರವಂತೂ ತೀರಾ ಮರೆಯುವಂತೆ ಆಗಿತ್ತು. ದಾರಿ ತಪ್ಪಿದ ಮಗನಾಗಿದ್ದ. ಆದರೆ ಇರುವ ಇನ್ನೂ ಮೂವರ ವಿಚಾರ! ಅವರಿಗೂ ಆಸೆ, ಆಕಾಂಕ್ಷೆಗಳು ಇರುವುದಿಲ್ಲವೇ? ಹೆಂಡತಿ, ಮಕ್ಕಳು, ಸಂಸಾರದ ಕನಸು, ಸುಖ ಅವರಿಗೂ ಬೇಕಲ್ಲವೇ? ಗಂಡನಂತೆ ಹೋರಾಟದ ನೊಗಕ್ಕೆ ಹೆಗಲಿರಿಸಬೇಕೇ? ಗಂಡನಿಗೇನು, ರಾಜಕೀಯ ಸಮಸ್ಯೆಗಳಲ್ಲಿ ತಲೆ ಕೆಡಿಸಿಕೊಂಡು, ಮಕ್ಕಳ ಬಗ್ಗೆ ಎಂದಿಗೂ ಯೋಚಿಸುವುದಿಲ್ಲ. ಕುಟುಂಬವೆನ್ನುವುದು ಅವರಿಗೆ ಅಷ್ಟೇನೂ ಮಹತ್ವದ ವಿಷಯವಾಗುವುದಿಲ್ಲ. ಮದುವೆಯ ವಿಚಾರವಂತೂ ತಲೆಗೆ ಹೋಗುವುದೇ ಇಲ್ಲ' ಎಂದೆಲ್ಲ ಯೋಚಿಸಿ ದೀರ್ಘವಾಗಿ ಉಸಿರೆಳೆದಳು.

ಹರಿಲಾಲನ ಹೊರತಾಗಿ ಮಿಕ್ಕ ಮೂವರು ಮಕ್ಕಳೂ ಜೀವನದಲ್ಲಿ, ಇದ್ದುದರಲ್ಲಿ ನೆಮ್ಮದಿಯ ಬದುಕನ್ನು ನಡೆಸಿದ್ದರು. ಹರಿಲಾಲನು ಮೊದಲಿನಂತೆ ನಿಶ್ಚಿತ ನೆಲೆಯಿಲ್ಲದೆ, ಗುರಿಯಿಲ್ಲದೆ ಅಲೆಮಾರಿಯಾಗಿದ್ದ. ಅವರಿವರ ಮಾತುಗಳಿಗೆ ಕಿವಿಗೊಟ್ಟು, ತಪ್ಪುದಾರಿ ಹಿಡಿಯುತ್ತಿದ್ದ 'ಬಾ'ಗೆ ಇವನ

ಚಿಂತೆಯೇ ಹೆಚ್ಚಾಗಿತ್ತು. ಅಪ್ಪ, ಮಗನ ನಡುವಿನ ಸಂಘರ್ಷ ತಾಕಲಾಟಗಳು, ಹೊರಗೆ ಬಹಿರಂಗವಾಗಿ ಕಾಣಿಸಿಕೊಳ್ಳದಿದ್ದರೂ, ಒಳಗೇ ಮುಂದುವರಿಯುತ್ತಿದೆಯೇನೋ ಎನಿಸಿತು.

"ಮಗು ನಿನ್ನ ತಂದೆಯ ಬಗ್ಗೆ ಇಷ್ಟು ನಿಷ್ಠುರನಾಗಬೇಡ, ನಿನ್ನ ನೋಡಿದರೆ ಕರುಳು ಹಿಂಡಿದಂತಾಗುತ್ತದೆ. ನೀನು, ನಿನ್ನ ಸ್ಥಿತಿ ನಮ್ಮ ಕಣ್ಮುಂದೆ ಬಂದಾಗಲೆಲ್ಲ ನಾವೆಷ್ಟು ಸಂಕಟ ಪಡುತ್ತೇವೆ ಎನ್ನುವ ಕಲ್ಪನೆಯಾದರೂ, ನಿನಗೆ ಇದೆಯೇನು? ನಿನ್ನ ದ್ವೇಷವನ್ನು ಬದಿಗಿಕ್ಕಿನೋಡು ನಿನ್ನ ತಂದೆ ಎಂಥಹವರೆಂದು, ಎಂಥ ಮಹಾತ್ಮನೆಂದು ನಿನಗೇ ತಿಳಿಯುತ್ತದೆ. ಈಗ ನಾನು ಹೇಳುತ್ತಿದ್ದೇನೆ, ನಡೆದದ್ದನ್ನೆಲ್ಲ ಒಂದು ಕೆಟ್ಟ ಕನಸೆಂದು ಮರೆತು ನಮ್ಮೊಂದಿಗೆ ಬಾ" ಎಂದು ಕಣ್ಣೀರಿಟ್ಟು ಬೇಡಿಕೊಂಡಳು ಆದರೂ ಹರಿಲಾಲನ ಮನಸ್ಸು ಸ್ವಲ್ಪವೂ ಮೆದುವಾಗಲಿಲ್ಲ. 'ಬಾ' ಕಣ್ಣೀರಿಟ್ಟರೂ, ಅದು ಅವಳಿಗೆ ಮಾಮೂಲೆಂದು ಭಾವಿಸಿದ.

"ಬಾ ಇಗೋ ನಿಮ್ಮ ಪ್ರೀತಿಯ ಮಗ ಹರಿ ಬಂದಿದ್ದಾನೆ. ನಿಮ್ಮ ಮಡಿಲಲ್ಲಿ ಹುದುಗಿ ನಿಮ್ಮ ಪ್ರೀತಿಯನ್ನು ಸವಿಯಲು ಬಂದಿದ್ದಾನೆ" ಎನ್ನುತ್ತಾ ಬಾಳ ಎದೆಯ ಮೇಲೆ ತಲೆಯಿಟ್ಟು ಬಿಕ್ಕಿ ಬಿಕ್ಕಿ ಅಳತೊಡಗಿದ.

"ಮಗನೇ, ಕಂದಾ ಈಗಲಾದರೂ ನಿನಗೆ ಈ ತಾಯಿಯ ನೆನಪಾಯಿತಲ್ಲ. ಸದ್ಯ ನಾನು ಸಾಯುವುದಕ್ಕೆ ಮೊದಲೇ ನೀನು ಬಂದೆಯಲ್ಲ ಅಷ್ಟೇ ಸಾಕು. ನಾನು ನೆಮ್ಮದಿಯಿಂದ ತೃಪ್ತಿಯಿಂದ ಸಾಯುತ್ತೇನೆ.

"ಬಾ ಹೀಗೆಲ್ಲಾ ಸಾಯುವ ಮಾತನಾಡಬೇಡಿ. ಈ ಕೆಟ್ಟ ಮಗನಿಗಾಗಿ ನೀವು ಇಷ್ಟೊಂದು ದು:ಖಿಸಬೇಕೇ?"

"ಮಗು ತಾಯಿಗೆ ಕೆಟ್ಟ ಮಗನೋ, ಒಳ್ಳೆಯ ಮಗನೋ ಎಲ್ಲರೂ ಈ ಕರುಳ ಬಳ್ಳಿಗಳೇ! . . . ಇದೇನು ಮಗು ನಿನ್ನ ಅವತಾರ? ಎಷ್ಟೊಂದು ಬಡವಾಗಿದ್ದೀ."

ಡಾ. ವಿಜಯಾ ಸುಬ್ಬರಾಜ್‌ರವರ 'ಬೆಸುಗೆಯ ಬಂಧನದಲ್ಲಿ' ಕಾದಂಬರಿಯಲ್ಲಿ ಕೌಟುಂಬಿಕ ನೆಲೆಗಟ್ಟಿನಲ್ಲಿ ಸ್ತ್ರೀ ಸಂವೇದನೆಯ ನೆಲೆಗಳನ್ನು ವಿಭಿನ್ನವಾದ ರೀತಿಯಲ್ಲಿ ಅರಿಯಬಹುದಾಗಿದೆ. ಇದು ದಾಂಪತ್ಯ ಕಥನದಂತೆ ಕಂಡುಬಂದರೂ ಆಂತರಿಕವಾಗಿ ನಾವು ಕೆದರಿ ನೋಡಿದಾಗ ಅನೇಕ ಅಂಶಗಳನ್ನು ಕಾಣಬಹುದಾಗಿದೆ. ಈ ಕಾದಂಬರಿಯ ವಿಶ್ವಮಾನವ, ರಾಷ್ಟ್ರನಾಯಕ ರಾಷ್ಟ್ರಪಿತ, ಮಹಾತ್ಮ ಎಂಬೆಲ್ಲಾ ಅಭಿಧಾನಗಳಿಗೆ ಪಾತ್ರರಾದ ಮಹಾತ್ಮಗಾಂಧಿ ಮತ್ತು ಅವರ ಹೆಂಡತಿಯಾದ ಕಸ್ತೂರ ಬಾ ರವರ ದಾಂಪತ್ಯ ಚರಿತ್ರೆಯಂತೆ ದಾಖಲಿಸಿದ ವಿನೂತನ ಪ್ರಯೋಗವಾಗಿದೆ. ಗಾಂಧಿ ಮತ್ತು ಕಸ್ತೂರ ಬಾ ರವರ ದಾಂಪತ್ಯ ಸರಳವೂ ಅಲ್ಲ, ಸುಖಮಯವೂ ಅಲ್ಲ. ಮದುವೆಯಾದಂದಿನಿಂದ ಕಡೆಯುಸಿರಿನವರೆಗೂ ಒಂದೊಂದು ಹಂತದಲ್ಲಿ ಘರ್ಷಣೆ ಮಾತಿನ ಚಕಮಕಿ ಇದ್ದೇ ಇರುತ್ತಿತ್ತು. ಗಾಂಧಿ ಮುಂದೆ ತ್ರಿವಿಕ್ರಮನಂತೆ ಗುರುತಿಸಿಕೊಂಡಿದ್ದರೂ ಎಲ್ಲ ಹಂತಗಳಲ್ಲಿ, ಮನುಷ್ಯ ಸಂಬಂಧಗಳ ನೆಲೆಯಲ್ಲಿ ಸಾಮಾನ್ಯ ಮನುಷ್ಯನಂತೆ ಮಾನವ ಸಹಜ ದೌರ್ಬಲ್ಯಗಳಿಂದ ಕೂಡಿಯೇ ವರ್ತಿಸುತ್ತಿದ್ದರು. ಕೋಪ, ತಾಪ, ಸಿಟ್ಟು, ಸೆಡವು,ಪುರುಷಾಹಂಕಾರ, ನಿಷ್ಠುರತೆ ಮತ್ತು ತನ್ನ ಸಿದ್ಧಾಂತಗಳಿಗೆ ನಿಷ್ಠುರ ನಿಯಮಗಳಿಗೆ ಬದ್ಧರಾಗಿಯೇ ತನ್ನವರೆಲ್ಲ ನಡೆದುಕೊಳ್ಳಬೇಕೆಂಬ ಹಠಮಾರಿತನ ಅವನ ವ್ಯಕ್ತಿತ್ವ ಅನನ್ಯ ಭಾಗವಾಗಿತ್ತು. ಇಂತಹ ಗಂಡನ ಜೊತೆ ಬಾಳಿನಲ್ಲಿ ಉದ್ದಕ್ಕೂ ಅಗ್ನಿದಿವ್ಯಗಳನ್ನು ಹಾದು ತನ್ನದೂ ಒಂದು ನೆಲೆಯನ್ನು ಚರಿತ್ರೆಯ ಪುಟಗಳಲ್ಲಿ ಗುರುತಿಸಿಕೊಂಡು ಬದುಕಿದ ಕಸ್ತೂರ ಬಾರವರಲ್ಲಿ ಕಂಡು ಬರುವ ಸ್ತ್ರೀ ಸಂಬಂಧಿತ ಸಂವೇದನೆಗಳೂ ಇಡೀ ಸ್ತ್ರೀ ಸಮುದಾಯವನ್ನು ಪ್ರತಿನಿಧಿಸುವಂತಿವೆ.

ಇ) ಸಾಮಾಜಿಕ ನೆಲೆ

ಶಿಲಾಯುಗ ಪೂರ್ವದಿಂದಲೂ ಅಸ್ತಿತ್ವದಲ್ಲಿದ್ದ ಮಾನವ ಸಮುದಾಯ ಗಂಡು-ಹೆಣ್ಣೆಂಬ ಬೇಧವಿಲ್ಲದೆ ಅಲೆಮಾರಿಗಳಂತೆ ಜೀವನ ಸಾಗಿಸುತ್ತಿದ್ದರು. ಕಾಲಾಂತರದಲ್ಲಿ ಮಾನವನು ಅಲೆಮಾರಿ ಜೀವನಕ್ಕೆ ವಿದಾಯ ಹೇಳಿ ಒಂದು ಕಡೆ ನೆಲೆ ನಿಂತು ವಾಸ ಮಾಡತೊಡಗಿದ ಮೇಲೆ ಕೌಟುಂಬಿಕ ಜೀವನಕ್ಕೆ ಒಂದು ನೆಲೆ ದೊರಕಿತು. ಇದರ ಜೊತೆ ಹಲವು ಕುಟುಂಬಗಳೂ ಒಂದೆಡೆ ಸೇರಿ ಬದುಕುವ ವಿಧಾನಕ್ಕೆ ಚಾಲನೆ ಸಿಕ್ಕಿತು. ಇಲ್ಲಿಂದ ಸಾಮಾಜಿಕ ಜೀವನ ರೂಪುಗೊಂಡಿರಬೇಕು. ಮಾನವ ಪೂರ್ಣ ನೈಸರ್ಗಿಕ ಪ್ರಗಕೋಪಗಳಿಂದ ತಮ್ಮ ಬದುಕನ್ನು ರಕ್ಷಿಸಿಕೊಳ್ಳುವುದಕ್ಕೋಸ್ಕರ ಹಾಗೂ ಆಹಾರ ಉತ್ಪಾದನೆಗಾಗಿ ತನ್ನ ಪರಿವಾರದೊಂದಿಗೆ ಸೇರಿ ಬದುಕಲು ಪ್ರಾರಂಭಿಸಿದರು. ಮುಂದೆ ಅಲೆಮಾರಿಯಾಗಿ, ಅರೆ ಅಲೆಮಾರಿಯಾಗಿ ತಮ್ಮ ಬದುಕನ್ನು ಸಾಗಿಸುತ್ತಾ ಬಂದು ಅನೇಕ ಬುಡಕಟ್ಟುಗಳಾಗಿ ಆದಿವಾಸಿ ಜನಾಂಗಗಳಾಗಿ ಸಾಮಾಜಿಕ ಜೀವನ ವ್ಯವಸ್ಥೆಯನ್ನು ರೂಪಿಸಿಕೊಂಡನು ಕೃಷಿಯು ಅವಿಷ್ಕಾರವಾದ ಮೇಲೆ ಈ ಮಾನವ ಸಮುದಾಯಗಳಲ್ಲಿ ಪರಸ್ಪರ ಹೊಂದಾಣಿಕೆ ಬಂಧುತ್ವ ಸಂಬಂಧಗಳು ಏರ್ಪಟ್ಟವು ಕೆಲವೆಡೆ ಮಾತೃ ಪ್ರಧಾನ ಕುಟುಂಬ ಪದ್ಧತಿ, ಕೆಲವೆಡೆ ಪಿತೃ ಪ್ರಧಾನ ಕುಟುಂಬ ಪದ್ಧತಿ ರೂಪುಗೊಂಡಿತು. ಆಯಾ ಪ್ರದೇಶದ ಆರ್ಥಿಕ ಹಿನ್ನೆಲೆ, ನಂಬಿದ ಬಗೆಗಳಿಗೆ ಅನುಗುಣವಾಗಿ ಜನಪದ ಸಮಾಜದ ಸ್ವರೂಪ ಸಾಮಾಜಿಕ ವಿಧಿ, ನಿಷೇಧ, ನಂಬಿಕೆ, ಕ್ರಿಯಾಚರಣೆಗಳು ಮೈದೋರಿದವು. ದಟ್ಟವಾದ ಕಾಡನ್ನು ಕೊಚ್ಚಿ ಹೊಲ ಹೊತ್ತಿ ಬೆಳೆದು ಜೀವನಕ್ಕೊಂದು ವ್ಯವಸ್ಥಿತ ರೂಪಕೊಡುವ ಈ ಎಲ್ಲಾ ಹಂತಗಳಲ್ಲೂ ಗಂಡಿನ ಪಾತ್ರದಷ್ಟೇ ಮಹತ್ವದ್ದು ಹೆಣ್ಣಿನ ಪಾತ್ರವೂ ಆಗಿತ್ತು. ಆದರೆ ಹೆಣ್ಣಿಗಿರುವ ಕೆಲವು ದೈಹಿಕ ಮತ್ತು ನೈಸರ್ಗಿಕ ಕಾರಣಗಳಿಂದಾಗಿಯೋ ಅಥವಾ ಗಂಡಿನ ಆಕ್ರಮಣಕಾರಿ ಪ್ರವೃತ್ತಿಯಿಂದಾಗಿಯೋ ಏನೋ ಸಮಾಜದಲ್ಲಿ ಹೆಣ್ಣು ಗಂಡಿನ ಅಧೀನಳಾಗಿ ಅವನ ನೆರಳಾಗಿ ಅವನನ್ನು ಅನುಸರಿಸಿ ಬಾಳಲೇಬೇಕಾಯಿತು. ಕ್ರಮೇಣ ಸಾಮಾಜಿಕ ವ್ಯವಸ್ಥೆಯ ಅವಿಭಾಜ್ಯ ಅಂಗಗಳಾಗಿದ್ದ ಸಾಮಾಜಿಕ ನ್ಯಾಯ ಹಾಗೂ ಧಾರ್ಮಿಕ ಕಟ್ಟುಪಾಡುಗಳು ಪುರುಷನ ಪರವಾಗಿ ನಿರ್ಮಿತವಾಗುವ ಮೂಲಕ ಹೆಣ್ಣಿನ ಬದುಕನ್ನು ಎಲ್ಲಾ ನೆಲೆಗಳಲ್ಲಿಯೂ ನಿಯಂತ್ರಿಸಿತು.

ಮಹಿಳೆ ಕೂಡ ಸಮಾಜಕ್ಕೆ ಹೆಚ್ಚು ಒತ್ತುಕೊಡಲಾರಂಭಿಸಿದ ದಿನದಿಂದ ಎಷ್ಟೋ ಭಾರಿ ಆಕೆಯ ವೈಯಕ್ತಿಕ ಹಾನಿ, ದುಃಖಗಳು, ಸಹಜವಾಗಿಯೇ ಸಮಾಜದೆದುರು ಗೌಣವಾಗಿ ಕಂಡವು. ಸಮಾಜದ ಹಿತಚಿಂತನೆಯೇ ಅವಳಿಗೆ ಪ್ರಧಾನವಾಗಿದ್ದರಿಂದ ಅವಳು ಆ ಒಂದು ನಿಟ್ಟಿನಲ್ಲಿಯೇ ವಿಚಾರ ಮಾಡತೊಡಗಿದಳು ಅಂತೆಯೇ ವೈಯಕ್ತಿಕ ಸ್ವಾತಂತ್ರ್ಯವನ್ನು ಕಳೆದುಕೊಂಡು ಹೆಚ್ಚಾಗಿ ನೋವಿನಲ್ಲೇ ಸುಖವನ್ನು ಕಂಡುಕೊಳ್ಳಲು ಪ್ರಯತ್ನಿಸಲಾರಂಭಿಸಿದಳು. ವ್ಯಕ್ತಿಗಳಿಗೆ ವೈಯಕ್ತಿಕವಾಗಿ ನ್ಯಾಯ ದೊರೆಯುವುದಿಲ್ಲ. ಸಮಷ್ಠಿಯ ಹಿತಕ್ಕಾಗಿ ವ್ಯಕ್ತಿಯ ಹಿತ ನಿರ್ಲಕ್ಷಿಸಲ್ಪಡಬೇಕಾಗುತ್ತದೆ. ಇಲ್ಲಿಯ ವ್ಯಕ್ತಿಯ ಮೇಲೆ ಒತ್ತು ಬೀಳುತ್ತದೆ.

ಒಮ್ಮೊಮ್ಮೆ ಗಾಂಧಿಯನ್ನು ಯಾಕೆ ಇಷ್ಟೆಲ್ಲ ಹಚ್ಚಿಕೊಳ್ಳುತ್ತೀರಿ? ಪ್ರಪಂಚದ ಎಲ್ಲರ ಸಮಸ್ಯೆಗಳನ್ನು ನೀವೇ ಹೊರಬೇಕೆಂದು ಯಾರಾದರೂ ಆದೇಶಿಸಿದ್ದಾರೆಯೇ? ಯಾರಿಗೂ ಬೇಡದ್ದು ನಿಮಗೇಕೆ? ಎಂದು ಗಟ್ಟಿಯಾಗಿ ಕೇಳಬೇಕು ಎಂದುಕೊಂಡಿದ್ದಳಾದರೂ ಅವಳ ಸಂಸ್ಕಾರದ ಆಳದಲ್ಲಿ ಅವಳಿಗೆ ತನ್ನ ಗಂಡ ಮಾಡುತ್ತಿರುವ ಕೆಲಸಗಳಿಂದ ಯಾರಿಗಾದರೂ ಒಳ್ಳೆಯದಾದಲ್ಲಿ ಅದು ಪುಣ್ಯದ ಕೆಲಸವಲ್ಲವೇ? ನಮ್ಮಂಥ ಸಾಮಾನ್ಯ ಜನರ ಮುಂದೆ ಎಷ್ಟು ದೊಡ್ಡ ವ್ಯಕ್ತಿಯಾಗಿ ಎಷ್ಟೊಂದು ಮಂದಿಗೆ ಬೇಕಾಗಿ, ಬೆಳೆಲಯುತ್ತಿರುವಾಗ, ನಾನು ಅವರಿಗೆ ಅಡ್ಡಿಪಡಿಸುವುದು ಎಷ್ಟು ಸಮಂಜಸ? ಅದಕ್ಕಿಂತಲೂ ನಾನೇ ಅವರ ಹಾದಿಯಲ್ಲಿ ಸಾಗಿ ನನ್ನಂಥ ಹೆಣ್ಣು ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವುದರಲ್ಲಿಯೇ ಸುಖವಿದೆಯಲ್ಲವೇ?

ಈಗ ತನ್ನ ಕುಟುಂಬವೊಂದೇ ಅಲ್ಲ. ಎಷ್ಟೊಂದು ಮಂದಿಯ ಜೊತೆ ಸಾಮೂಹಿಕ ಬದುಕು ನಡೆಸುವುದರಲ್ಲಿ ಅವರ ಕಷ್ಟ ಸುಖಗಳನ್ನು ಹಂಚಿಕೊಳ್ಳುವುದರಲ್ಲಿ ನಾನು ಅನುಭವಿಸುತ್ತಿರುವ ಆನಂದ, ಮನುಷ್ಯ ಸ್ವಭಾವಗಳ ಅರಿವಿನ ಅನುಭವ ಇಂಥ ಬದುಕಿಲ್ಲದಿದ್ದರೆ ಹೇಗೆ ಸಾಧ್ಯವಿತ್ತು. ಇನ್ನೆಂದೂ ನಾನು ನನ್ನ ಗಂಡ ನನಗಾಗಿ, ನನ್ನವರಿಗಾಗಿ ಮಾತ್ರವೇ ಇರಬೇಕೆಂಬ ಸ್ವಾರ್ಥ ಭಾವನೆಯನ್ನು ಬಿಟ್ಟುಬಿಡುವುದೇ ನನ್ನ ವ್ರತವಾಗಲೀ ಎಂದು ಮನಸ್ಸಿನಲ್ಲಿಯೇ ಪಣತೊಟ್ಟಳು.

"ನೀವು ಯಾವುದೇ ದಾರಿಯಲ್ಲಿ ಹೋದರೂ ನನ್ನ ಅಭ್ಯಂತರವಿಲ್ಲ. ಏಕೆಂದರೆ ಎಂದಿಗೂ ನೀವು ಸನ್ಮಾರ್ಗ, ಸತ್ಯಮಾರ್ಗಗಳನ್ನು ಬಿಟ್ಟು ಹೋಗಲಾರಿರಿ ಎನ್ನುವ ಪೂರ್ಣಭರವಸೆಯಿದೆ. ಯಾವುದೇ ನಿರ್ಧಾರವಾದರೂ ನನ್ನ ಪ್ರತಿರೋಧವಿಲ್ಲ. ನೀವು ಹಿಡಿದು ನಡೆಯುವ ದಾರಿಯಲ್ಲಿ ನಾನು ನೆರಳಿನಂತೆ ಹಿಂದೆ ಬರುತ್ತೇನೆ. ಮಕ್ಕಳ ಜವಾಬ್ದಾರಿಯನ್ನೂ ಬೇಕಾದರೆ ನನ್ನ ಹೆಗಲಿಗಿರಿಸಿ ನಿಮ್ಮ ಆದರ್ಶಗಳ ಬೆಳಕಿನಲ್ಲಿಯೇ ನಡೆಯಲೆಂದು ಹಾರೈಸುತ್ತೇನೆ. ಆದರೆ ನಿಮ್ಮ ಅತಿಯಾದ ಶಿಸ್ತು, ಕಟ್ಟು ಪಾಡುಗಳು, ನಿಷ್ಠುರತೆ ಮಕ್ಕಳ ಮೃದು ಮನಸ್ಸನ್ನು ಮುರುಟಿಹೋಗುವಂತೆ ಮಾಡದಿರಲಿ ಎಂಬುದೊಂದೇ ನಿಮ್ಮಲ್ಲಿ ನನ್ನ ಪ್ರಾರ್ಥನೆ. ಬೇಕಾದರೆ ಮತ್ತೊಮ್ಮೆ ನಿಮ್ಮ ಹೋರಾಟಗಳಲ್ಲಿ ಸಮಾಜ ಸೇವಾ ಕಾರ್ಯಗಳಲ್ಲಿ ಸಂಪೂರ್ಣವಾಗಿ ನಿಮ್ಮ ಜೊತೆ ಇರುತ್ತೇನೆಂದು ಪ್ರಮಾಣ ಮಾಡುತ್ತೇನೆ" ಎಂದಳು.

ಸತ್ಯಾಗ್ರಹಿಗೆ ಹೋರಾಟಗಾರನಿಗೆ ಧೈರ್ಯ, ನಿರ್ಭಯಗಳೇ ಪ್ರಬಲವಾದ ಆತ್ಮರಕ್ಷಣೆಯ ಅಸ್ತ್ರಗಳೆಂದು ಭಾವಿಸಿದ್ದ. ಸದಾ ಭಯದಲ್ಲೇ ಬದುಕುವುದು ಗಾಂಧಿಗೆ ಇಷ್ಟವಿರಲಿಲ್ಲ. ಕಸ್ತೂರಳದು ಅದೇ ನಿಲುವಾಗಿತ್ತು. ಎಂಥಾ ಅಪಾಯಕಾರಿಯಾದ ಸನ್ನಿವೇಶಗಳನ್ನೂ ತಾನೂ ಎದುರಿಸಲು ಸಿದ್ಧವೆಂದು ಗಂಡನಿಗೆ ಮನವರಿಕೆಮಾಡಿಸಿದಳು. ಸಾರ್ವಜನಿಕ ಬದುಕನ್ನು ಒಪ್ಪಿಕೊಂಡ ವ್ಯಕ್ತಿಗೆ ಇಂಥ ಅಪಾಯಗಳು, ಆಕ್ರಮಣಗಳು ಸರ್ವೇ ಸಾಮಾನ್ಯ ಎನ್ನುವ ನಿಷ್ಠುರ ಸತ್ಯವನ್ನು ಒಪ್ಪಿಕೊಳ್ಳಬೇಕೆಂಬುದು ತನ್ನ ಮತ್ತು ಗಂಡನ ನಿಲುವಾಗಿತ್ತು.

"ನೀವೇನು ಯೋಚನೆ ಮಾಡುತ್ತಿದ್ದೀರಿ ಎಂದು ನನಗೆ ತಿಳಿದಿದೆ. ನಾನೇ ನಿಮ್ಮ ಚಿಂತೆಗೆ ಕಾರಣ. ಆದರೆ ನನ್ನ ಬಗ್ಗೆ ನೀವು ತಲೆಕೆಡಿಸಿಕೊಳ್ಳಬೇಡಿ. ನನಗೆ ನನ್ನನ್ನು ನೋಡಿಕೊಳ್ಳುವುದೇನೂ ಸಮಸ್ಯೆಯಾಗುವುದಿಲ್ಲ. ಆದಷ್ಟು ಬೇಗ ಗುಣಮುಖಳಾಗುತ್ತೇನೆ ಎನ್ನುವ ಭರವಸೆಯಿದೆ. ನೀವು ಎಂದಿನಂತೆ ನಿಮ್ಮ ಸತ್ಯಾಗ್ರಹದ ಜವಾಬ್ದಾರಿ ನೋಡಿಕೊಳ್ಳಿ.

ಕಸ್ತೂರಳಿಗೆ ಗಂಡನ ಈ ರಾಜಕೀಯ ಹೋರಾಟಗಳ ಅರ್ಥ. ಉದ್ದೇಶಗಳೇನೆಂಬುದು ಸ್ಪಷ್ಟವಾಗಿ ತಿಳಿದಿರಲಿಲ್ಲ. ಗಂಡ ಸತ್ಯದ ಅನ್ವೇಷಣೆಯಲ್ಲಿ, ಶೋಷಿತರ, ದಮನಿತರ ಒಳಿತಿಗಾಗಿ ಮಹ್ವ ಕಾರ್ಯಗಳಲ್ಲಿ ವ್ಯಸ್ತನಾಗಿದ್ದಾನೆ. ಅವನ ಕೆಲಸಗಳಲ್ಲಿ ತನ್ನಿಂದ ಎಷ್ಟು ನಿರೀಕ್ಷಿಸಲಾಗುತ್ತದೆಯೋ ಅಷ್ಟನ್ನು ತನ್ನ ಶಕ್ತಿ ಸಾಮರ್ಥ್ಯಗಳೊಂದಿಗೆ, ಸಹಾಯ ಮಾಡುವುದು ತನ್ನ ಕರ್ತವ್ಯವೆಂದು ಭಾವಿಸಿದ್ದಳು. ಪ್ರತಿ ಹೆಜ್ಜೆಯಲ್ಲಿಯೂ ಗಾಂಧಿಯ ಚಿಂತೆ, ತಳಮಳಗಳನ್ನು ಭಾವನಾತ್ಮಕವಾಗಿ ಹಂಚಿಕೊಳ್ಳುತ್ತಿದ್ದಳು. ಗಾಂಧಿ ಬಯಸುತ್ತಿದ್ದ ತ್ಯಾಗ – ಬಲಿದಾನ, ಆತ್ಮಸ್ಥೈರ್ಯಗಳಿಗೆ ನಿಸ್ವಾರ್ಥತೆ, ನಿರ್ಮೋಹ, ಸಹನಶೀಲತೆ ಇತ್ಯಾದಿ ಮೌಲ್ಯಗಳಿಗೆ ಸಿದ್ಧಾಂತಗಳಿಗೆ ತನ್ನನ್ನು ಉರಿಸಿಕೊಳ್ಳುತ್ತಿದ್ದಳು. ಕೆಲವೊಮ್ಮೆ ಭರಿಸಲಸಾಧ್ಯವಾದ ಒತ್ತಡಗಳು ಬೀಳುತ್ತಿದ್ದವು. ಹೆಚ್ಚಿನ ನಿರೀಕ್ಷೆಗಳಿಗೆ ಗುರಿಯಾಗುತ್ತಿದ್ದಳು, ಗಂಡನ ಕೆಲಸದ ಒತ್ತಡಗಳು ವಿನಾಕಾರಣ ಅವಳನ್ನು ಸಿಟ್ಟಿಗೆ, ಅವಮಾನಕ್ಕೆ ಗುರಿಯಾಗಿಸುತ್ತಿತ್ತು. ಆದರೂ ಪ್ರತಿಭಟನೆ ಅವಳಿಂದ ಸಾಧ್ಯವಾಗುತ್ತಿರಲಿಲ್ಲ. ಪ್ರತಿಯಾಗಿ ಅವನಿಗಾಗಿ ಸಂಕಟ ಪಡುತ್ತಿದ್ದಳು. ತಮಗೆ ಸುಖಪಡಲು ಅನುವುಮಾಡಿಕೊಡಲಿಲ್ಲ ನಿಜ. ಆದರೆ ಅವನೂ ಸುಖಪಡುತ್ತಿಲ್ಲವಲ್ಲ! ಎನ್ನುವ ನೋವು ಸದಾ ಅವಳಲ್ಲಿ ಮನೆ ಮಾಡಿತು.

ನಾನಷ್ಟೇ ಅಲ್ಲ. ಇನ್ನುಮುಂದೆ ನನ್ನ ಹೋರಾಟಗಳಲ್ಲಿ ನಿನ್ನ ಪಾತ್ರವೇ ಮಹತ್ವದ್ದಾಗಬೇಕು. ನೀನು ಸ್ತ್ರೀಶಕ್ತಿಯ ಸಂಕೇತವಾಗಬೇಕು. ಹೆಂಗಸರನ್ನು ಶಕ್ತಿ ಸ್ವರೂಪಿಣಿಯರೆಂದೇ ನಮ್ಮ ಸನಾತನ ಪರಂಪರೆ ಭಾವಿಸುತ್ತಾ ಬಂದಿದೆ. ಬರಬರುತ್ತಾ ನಮ್ಮ ಹೋರಾಟಗಳು ವಿಸ್ತೃತವಾದಾಗ, ಉಗ್ರವಾದಾಗ ನಿನ್ನಿಂದ ಹೆಚ್ಚು ಹೆಚ್ಚಿನ ತ್ಯಾಗ ಬಲಿದಾನಗಳನ್ನು ನಿರೀಕ್ಷಿಸುತ್ತೇನೆ ಎಂದನು.

ಗಂಡನ ಮಾತುಗಳನ್ನು ಸಮಾಧಾನದಿಂದ ಕೇಳಿಸಿಕೊಂಡ ಕಸ್ತೂರಳು ಸಾವಧಾನವಾಗಿಯೂ ಗಂಡನೊಂದಿಗೆ ತನ್ನ ಭಾವನೆಗಳನ್ನು ವಿಚಾರಗಳನ್ನು ಹಂಚಿಕೊಂಡಳು. "ನೋಡಿ, ನೀವು ನಿರೀಕ್ಷಿಸುವುದಕ್ಕಿಂತ ಹೆಚ್ಚಿನ ತ್ಯಾಗವನ್ನು ಮಾಡಬಲ್ಲೆ. ಪ್ರಾಣವನ್ನೇ ಸಮರ್ಪಿಸಬಲ್ಲೆ. ನೀವೊಬ್ಬರು ಆದರ್ಶವಾದಿಗಳು. ಸಾರ್ವಜನಿಕ ವ್ಯಕ್ತಿಗಳು. ಜನೋದ್ಧಾರಕ್ಕೆ ದೇಶೋದ್ಧಾರಕ್ಕೆಂದೇ ನೀವು ಹುಟ್ಟಿರಬೇಕು ಎನಿಸುತ್ತದೆ. ನಿಮ್ಮಂಥ ಜನನಾಯಕ ದೇಶನಾಯಕರಾಗುವ ಹಾದಿಯಲ್ಲಿ ಇರುವವರನ್ನು ಮದುವೆಯಾದ ಮೇಲೆ, ನಿಮ್ಮೆಲ್ಲ ವಿಚಾರಗಳಿಗೆ ಸಹಮತಳಾಗುತ್ತ, ನಿಮ್ಮ ಹೆಜ್ಜೆಗಳನ್ನು ಅನುಸರಿಸುತ್ತ ಹೋಗುವುದನ್ನೇ ಧರ್ಮ ಪತ್ನಿಯಾದ ನನಗೆ ಕಲಿಸಿಕೊಟ್ಟಿದ್ದಾರೆ. ನಮಗೆ ನಮ್ಮ ವಿಚಾರಗಳನ್ನು ಸ್ವಂತ ಅನುಭವಗಳನ್ನು ನಿಮ್ಮೊಂದಿಗೆ ವಿನಿಮಯ ಮಾಡಿಕೊಳ್ಳುವ ಹಕ್ಕೂ ಕೂಡ ನಮಗಿಲ್ಲದಂತಹ ರೀತಿಯ ಸತೀಧರ್ಮ ಬೋಧಿಸಿದ್ದಾರೆ. ಎಂದಾದರೂ ಅಪರೂಪಕ್ಕೆ ತಾಳ್ಮೆಯಿದ್ದಲ್ಲಿ ಗಂಡಂದಿರು ಹೆಂಡತಿಯರ ಮಾತುಗಳನ್ನು ಕೇಳಿಸಿಕೊಳ್ಳುತ್ತಾರೆ. ಇಲ್ಲವಾದಲ್ಲಿ ಕೇಳಿಸಿಕೊಳ್ಳಬೇಕಾದ ಅಗತ್ಯವಿಲ್ಲವೆಂದು ಜಾಣ ಕಿವುಡರಾಗುತ್ತಾರೆ ಎಂದಳು.

"ಏನು ಇದೆಲ್ಲ ಹೇಳಿ ನನ್ನನ್ನು ಹೆದರಿಸುತ್ತಿರುವಿರಾ? ನನ್ನನ್ನು ಹೇಡಿ ಎಂದು ಭಾವಿಸುತ್ತಿರುವಿರಾ? ಬೇರೆ ಹೆಣ್ಣು ಮಕ್ಕಳೆಲ್ಲಾ ಸತ್ಯಾಗ್ರಹ ಮಾಡಿ ಜೈಲಿಗೆ ಹೋಗಬಹುದಾದರೆ ನಾನೇಕೆ ಹೋಗಬಾರದು? ಎಲ್ಲರಂತೆ ನಾವಿರಬೇಕೆಂದು ಹೇಳುವ ನೀವು ಹೆಂಡತಿ ಜೈಲಿಗೆ ಹೋಗುತ್ತಾಳಲ್ಲ ಎಂದು ಯಾಕೆ ಯೋಚಿಸಬೇಕು? ನೀವು ಜನನಾಯಕರು. ಅನ್ಯಾಯದ ವಿರುದ್ಧ ಹೋರಾಡಲೆಂದೇ ಬಂದವರು. ಅಂಥವರ ಹೆಂಡತಿಯಾಗಿ ಊರು ಹೊತ್ತಿ ಉರಿಯುತ್ತಿದ್ದರೆ, ಎಲ್ಲೋ ಒಳಗೆ ಸೇರಿ ಅವಿತು ಕುಳಿತು ತಮಾಷೆ ನೋಡುವಂತಾದರೆ, ನಿಮ್ಮ ಹೆಂಡತಿಯಾಗುವುದರ ಅರ್ಥವಾದರೂ ಏನು? ನಿಮ್ಮೆಲ್ಲ ಕೆಲಸಗಳಲ್ಲಿ ಸಹಭಾಗಿಯಾಗಿ ನಡೆದುಕೊಂಡು ಬರುತ್ತೇನೆಂದು ವಚನಕೊಟ್ಟು ಬಂದವಳಲ್ಲವೆ? ಗಂಡಂದಿರ ಕಷ್ಟ ಸುಖಗಳನ್ನು ನಾವು ಹೆಂಡತಿಯರು ಹಂಚಿಕೊಳ್ಳಬೇಡವೇ?

ತಾರಾಮತಿ, ಸೀತೆಯರ ಪರಂಪರೆಯಲ್ಲಿ ಬಂದವರಾಗಿ ಈಗ, ಅದೂ ನಮ್ಮ ಮಾನ, ಮರ್ಯಾದೆ, ಗೌರವಗಳು ಹರಾಜಾಗುತ್ತಿರುವಾಗ, ನಾನಾಗಲಿ, ಬೇರೆ ಯಾವ ವಿವಾಹಿತ ಹೆಣ್ಣಾಗಲಿ ದನಿಯೆತ್ತದಿದ್ದರೆ, ತೀರ್ಪಿನ ವಿರುದ್ಧ ಪ್ರತಿಭಟಿಸದಿದ್ದರೆ, ಸ್ತ್ರೀ ಜಾತಿಗೆ ಅವಮಾನ ಎಂದು ನಿರರ್ಗಳವಾಗಿ, ತರ್ಕಬದ್ಧವಾಗಿ ಮಾತಾಡಿದ್ದನ್ನು ಮೊದಲ ಬಾರಿಗೆ ಕೇಳಿಸಿಕೊಂಡ ಗಾಂಧಿ ದಂಗಾದ.

ಎಲ್ಲ ಮಹಿಳೆಯರೂ ಒಂದೇ ಕಡೆ ಇದ್ದಾರೆಂಬ ಸಮಾಧಾನವೊಂದನ್ನು ಬಿಟ್ಟರೆ ಬೇರೆ ಯಾವ ಸೌಕರ್ಯವೂ ಇರಲಿಲ್ಲ. ಜೈಲಿನ ಊಟ ಅಸಹನೀಯವಾಗಿದ್ದುದರಿಂದ ಕಸ್ತೂರಬಾ ಕೂಡಾ ಸೇರಿದಂತೆ ಅನೇಕ ಮಹಿಳೆಯರು ತೀರಾ ತೀರಾ ಬಡಕಲಾಗಿದ್ದರು. ಆದರೂ ಅವರೊಳಗಿನ ಉತ್ಸಾಹ ಚೈತನ್ಯಗಳು ಮುಗಿದಿರಲಿಲ್ಲ. ಅವರಲ್ಲಿ ಒಟ್ಟು ಹದಿನಾರರ ಹೆಣ್ಣು ಮಗಳು ಬಹಳವಾಗಿ ದಣಿಯ ಹೋಗಿದ್ದಳು. ಅವಳನ್ನು ನೋಡಿ ಕಸ್ತೂರಬಾ ಮತ್ತು ಗಾಂಧಿ ಅಧೀರರಾದರೂ ಬಿಡುಗಡೆಯಾಗಿ ಬಂದ ನಂತರ ಗಾಂಧಿ ವಳ್ಳಿಯಮ್ಮನನ್ನು ಭೇಟಿಯಾಗಿ, ಜೈಲಿಗೆ ಹೋದದ್ದಕ್ಕೆ ಪಶ್ಚಾತ್ತಾಪವಾಗುತ್ತಿದೆಯೇ ಎಂದು ಕೇಳಿದಾಗ, ನಗುನಗುತ್ತಲೇ "ಅಗತ್ಯಬಿದ್ದರೆ ಮತ್ತೆ ಜೈಲಿಗೆ ಹೋಗಲು ಸಿದ್ಧಳಾಗಿದ್ದೇನೆ. ಅಲ್ಲಿಯೇ ಸಾಯಬೇಕಾಗಿ ಬಂದರೂ ಎದೆಗೆಡುವುದಿಲ್ಲ" ಎಂದು ಉತ್ತರಿಸಿದ್ದು ಗಾಂಧಿಯನ್ನು ದಿಗ್ಭ್ರಾಂತನನ್ನಾಗಿ ಮಾಡಿತ್ತು.

ವಿಧವೆಯರನ್ನಾಗಿ ತನ್ನ ನೆಗಣ್ಣೆಯರನ್ನು ನೋಡಬೇಕಾಗಿ ಬರುವ ದುರದೃಷ್ಟಕ್ಕೆ ತನ್ನನ್ನೇ ಹಳಿದುಕೊಂಡಳು. ಅವರ ಬದುಕಿನ ದುರಂತದ ಕಲ್ಪನೆ, ಭವಿಷ್ಯದ ಬಗೆಗಿನ ಆಲೋಚನೆ, ಅವಳನ್ನು ದುಃಖಿಸುವಂತೆ ಮಾಡಿತು. ಭಾರತೀಯ ಸಮಾಜದಲ್ಲಿನ ವಿಧವೆಯರ ಪಾಡನ್ನು ಕಂಡವಳಾಗಿದ್ದರಿಂದ ತುಂಬ ನೊಂದುಕೊಂಡಳು.

ಅಂಗಳದಲ್ಲಿ ಪುಟ್ಟ ಹುಡುಗಿ ಲಕ್ಷ್ಮಿ ಆಡುತ್ತಿದ್ದುದು ಕಣ್ಣಿಗೆ ಬಿತ್ತು. ಆಡುತ್ತಿದ್ದ ಅವಳನ್ನು ಓಡಿ ಹೋಗಿ ತಬ್ಬಿ ಹಿಡಿದಳು. ಲಕ್ಷ್ಮಿ ಗಾಬರಿಯಾದಳು. ಲಕ್ಷ್ಮಿಯ ಮುಖವನ್ನು ತನ್ನೆಡೆಗೆ ತಿರುಗಿಸಿಕೊಂಡು ಒಂದೇ ಸಮನೆ ನೋಡುತ್ತಿದ್ದಂತೆ ತುಟಿಯಂಚಿನಲ್ಲಿ ಮುಗುಳು ನಗೆಯೊಂದು ಮೂಡಿತು. ಅಬ್ಬ ಎಷ್ಟು ಮುದ್ದಾಗಿದ್ದಾಳೆ! ಇಂಥ ಮುದ್ದು ಮುಖದ ಮಗುವನ್ನು ಅಸ್ಪೃಶ್ಯಳೆಂದು ಕರೆಯಬಹುದೇ? ದೇವರ ದೃಷ್ಟಿಯಲ್ಲಿ ಎಲ್ಲರೂ ಒಂದೇ ಆಗಿರುವುದರಿಂದ ಜಾತಿಗೊಂದೊಂದು ಬೇರೆ ಬೇರೆ ರೂಪಗಳನ್ನು ಕೊಡುವುದಿಲ್ಲ. ಅವರೂ ನಮ್ಮೆಲ್ಲರಂತೆಯೇ ಅಲ್ಲವೇ? ಹಳ್ಳಿಯ ಹೆಂಗಸರ ಬಟ್ಟೆ ಬರೆ ಕೊಳಕಾಗಿರುತ್ತಿದ್ದುವು. ದಿನಗಟ್ಟಲೆ ಸ್ನಾನವೂ ಮಾಡುತ್ತಿರಲಿಲ್ಲ. ಬಟ್ಟೆ ಬದಲಾಯಿಸುತ್ತಿರಲಿಲ್ಲ. ಇದನ್ನು ಗಮನಿಸಿದ 'ಬಾ' ಹಳ್ಳಿಗೆ ಹೋಗಿ ಹೆಂಗಸರನ್ನು ಒಟ್ಟುಗೂಡಿಸಿದಳು. ಅವರಿಗೆ ಶುಚಿತ್ವದ ಬಗ್ಗೆ, ಸ್ನಾನದ ಅಗತ್ಯದ ಬಗ್ಗೆ, ಒಗೆದ ಬಟ್ಟೆಗಳನ್ನು ಧರಿಸುವುದರ ಬಗ್ಗೆ ಮಾತನಾಡಿ, ಒಬ್ಬಾಕೆಯನ್ನು ಕರೆದು ನೀನೇಕೆ ಸೀರೆಯನ್ನು ಒಗೆದುಕೊಳ್ಳುವುದಿಲ್ಲ" ಎಂದು ಪ್ರಶ್ನಿಸಿದಳು.

ಮತ್ತೊಬ್ಬ ಹೆಂಗಸು, ತನಗೆ ಇರುವುದೇ ಒಂದು ಸೀರೆ ಎಂದ ಮೇಲೆ, ಅದನ್ನು ಬಿಚ್ಚಿದಾಗ ಮೈ ಮುಚ್ಚಿಕೊಳ್ಳಲು ಮತ್ತೊಂದು ಸೀರೆಯನ್ನು ಎಲ್ಲಿಂದ ತರಲಿ' ಎಂದು ಮರುಪ್ರಶ್ನೆ ಹಾಕಿದಳು;

ಇದನ್ನೆಲ್ಲಾ ಕಣ್ಣಾರೆ ನೋಡಿದ ಕಸ್ತೂರಬಾ ಸಂಕಟಕ್ಕೆ ಮೇರೆ ಇಲ್ಲದಾಯಿತು. ಭಾರತದ ಹಳ್ಳಿಗಳಲ್ಲಿ ಇಂಥ ದರಿದ್ರಸ್ಥಿತಿ ಇರುವಾಗ ತಾವೆಷ್ಟು ಸುಖಿಗಳು; ಭಾಗ್ಯವಂತರು! ಇನ್ನೆಂದೂ ತಮ್ಮ ಸ್ಥಿತಿಗಾಗಿ ಮರುಗಬಾರದು. ಶ್ರೀಮಂತಿಕೆಯ ಬದುಕನ್ನು ಹಾರೈಸಬಾರದು ಎಂದುಕೊಂಡಳು.

ಬಡತನದಿಂದ ಮುಕ್ತರಾಗಿ, ಸಾಮಾನ್ಯ ಬದುಕನ್ನಾದರೂ ಬದುಕಲು ಸ್ವಾವಲಂಭಿಗಳಾಗಬೇಕು. ತಮಗೆ ಬೇಕಾದ ಅಗತ್ಯಗಳನ್ನು ತಮ್ಮ ಸ್ವಪ್ರಯತ್ನದಿಂದಲೇ ಗಳಿಸಿಕೊಳ್ಳಬೇಕು. ಈ ತತ್ವವನ್ನು ಮನದಟ್ಟುಮಾಡಲು, ಮಹಿಳೆಯರಿಗೆ ತಾವೇ ಸ್ವತಃ ಪೊರಕೆಗಳನ್ನು ಮಾಡಿ ಊರೆಲ್ಲವನ್ನೂ ಗುಡಿಸಿ ಸ್ವಚ್ಛ ಮಾಡುವುದನ್ನು ತನ್ನ ಮನೆಯನ್ನೂ ಸ್ವಚ್ಛ ಮಾಡುವುದನ್ನು ಹೇಳಿಕೊಟ್ಟಳು. ಹೆಂಗಸರು ಮಕ್ಕಳು ಉತ್ಸಾಹದಿಂದಲೇ ಮಾಡಲು ಮುಂದಾದರು. ಹಾಗೆಯೇ ಗಂಡಸರು ಬಾವಿಗಳನ್ನು ಸ್ವಚ್ಛಗೊಳಿಸಿದರು. ಚರಂಡಿ ವ್ಯವಸ್ಥೆ ಮಾಡುವುದನ್ನೂ ಶುಚೀಭೂತರಾಗಿರಬೇಕೆಂಬುದನ್ನು ತಿಳಿದರು.

ಜೊತೆಜೊತೆಗೇ ತನ್ನ ಗಂಡನ ಮುಗಿಲೆತ್ತರದ ಕೀರ್ತಿ, ಅವನ ಸಂದೇಶಗಳಿಗೆ ದೊರೆಯುತ್ತಿದ್ದ ಪ್ರಚಂಡ ಪ್ರತಿಕ್ರಿಯೆಗಳು ತನ್ನನ್ನು ತಾನೇ ಅವನೆದುರು ಮತ್ತಷ್ಟು ಕುಬ್ಜಳಾಗುತ್ತಿದ್ದೇನೆಯೇ ಎನ್ನುವ ಅನುಮಾನಕ್ಕೆ ದಾರಿಮಾಡುತ್ತಿತ್ತು. ತಾನು ಮಾಡುತ್ತಿರುವುದು ಗಂಡನ ಸೇವೆ. ಗಂಡನ ಕೆಲಸಕಾರ್ಯಗಳಿಗೆ ಕೇವಲ ಸಹಾಯಹಸ್ತ ನೀಡುತ್ತಿದ್ದೇನೆಯೇ ಹೊರತು, ಅದಮ್ಯ ದೇಶಪ್ರೇಮದಿಂದ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿಲ್ಲ. ತನಗೂ ಏನಾದರೂ ಮಾಡಲು ಕೆಲಸ ಬೇಕು. ಆದ್ದರಿಂದ ಅವನ ಕೆಲಸಗಳಲ್ಲಿ ಭಾಗಿಯಾಗಿ ಹೂವಿನಿಂದ ನಾರಿಗೂ ಸ್ವರ್ಗವೆಂಬಂತೆ, ತನಗೂ ಅಲ್ಪಸ್ವಲ್ಪ ಗೌರವ, ಮರ್ಯಾದೆ ಮತ್ತು ಅನನ್ಯತೆ ಸಿಗುತ್ತದೆಯೇ ಹೊರತಾಗಿ, ಗಂಡನಂತೆ ಮಹಾತ್ಮಳಾಗುವುದಾಗಲೀ ಕೀರ್ತಿ

ಸಂಪಾದಿಸುವುದಾಗಲೀ, ಉದ್ದೇಶ ಹೊಂದಿಲ್ಲವೆಂದು ತನ್ನನ್ನು ತಾನೇ ವಿಮರ್ಶಿಸಿಕೊಳ್ಳುತ್ತಾ, ತರ್ಕೈಸಿ ಅರ್ಥಮಾಡಿಕೊಳ್ಳುತ್ತಾ ಇದ್ದಳು.

ನನ್ನ ದೇಶದ ಮಹನೀಯರೇ ಮತ್ತು ಮಹಿಳೆಯರೇ; ಈ ದಿನ ನನ್ನ ಪತಿಯನ್ನು ಆರು ವರ್ಷಗಳ ಸಜೆಗೆ ಗುರಿ ಮಾಡಿದ್ದಾರೆ. ಈ ಕಠಿಣ ಸಜೆಯಿಂದ ನನ್ನ ಮನಸ್ಸಿಗೂ ಬಹಳ ನೋವಾಗಿದೆ. ಆದರೆ ಈ ಸಜೆಯಿಂದ ಅವಧಿಗೆ ಮೊದಲೇ ತಪ್ಪಿಸುವುದು ನಮಗೆ ಶಕ್ತಿ ಮೀರಿದ್ದು ಎಂದು ನನಗೆ ನಾನೇ ಸಮಾಧಾನ ಹೇಳಿಕೊಳ್ಳಬಹುದಾಗಿತ್ತು. ಭಾರತ ಎಚ್ಚೆತ್ತುಕೊಂಡು, ಕಾಂಗ್ರೆಸ್ಸಿನ ರಚನಾತ್ಮಕ ಕೆಲಸಗಳನ್ನು ಮುಂದುವರೆಸಿದರೆ, ಬಾಪುವನ್ನು ಬಿಡಿಸಿಕೊಳ್ಳುವುದರಲ್ಲಿ ಮತ್ತು ನಾವು ಯಾವ ಉದ್ದೇಶಕ್ಕಾಗಿ ಹೋರಾಡುತ್ತಿದ್ದೇವೆಯೋ, ಸಂಕಟ ಅನುಭವಿಸುತ್ತಿದ್ದೇವೆಯೋ ಅದೆಲ್ಲದರಲ್ಲಿ ಯಶಸ್ಸನ್ನು ಕಾಣುವುದರಲ್ಲಿ, ಪರಿಹಾರ ಕಂಡುಕೊಳ್ಳುವುದರಲ್ಲಿ ಒಂದಿಷ್ಟೂ ಅನುಮಾನವಿಲ್ಲ.

ನಮ್ಮ ಸಂಪ್ರದಾಯ, ಸಮಾಜದಲ್ಲಿ ಇಂತಹ ಅಸಂಗತ ಸಂಗತಿ ಎಂದಾದರೂ ಸಾಧ್ಯವೇ, ಯಾವನೋ ಒಬ್ಬ ಗಂಡಸಿನ ಜೊತೆ ಮಲಗಿ, ಮಕ್ಕಳನ್ನು ಹೆತ್ತವಳನ್ನು ನಾನು ಹೆಂಡತಿಯಾಗಿ ಒಪ್ಪಿಕೊಳ್ಳುವುದಾದರೂ ಹೇಗೆ ಬಾಪು?" "ಹಾಗೆಂದರೆ, ನೀನು ಒಂದು ಹೆಣ್ಣಿನ ಜೊತೆ ಮಲಗಿ ಮಕ್ಕಳನ್ನು ಹುಟ್ಟಿಸಬಹುದಾದರೆ ಮತ್ತೊಂದು ಹೆಣ್ಣನ್ನು ಮದುವೆಯಾಗಬಹುದಾದರೆ, ಅವಳಿಗೇಕೆ ಅವಕಾಶವಿಲ್ಲ. ವೈಧವ್ಯದ ದಾರುಣ ಬದುಕಿನ ಕಲ್ಪನೆಯಾದರೂ ನಿನಗಿದೆಯೇನು? ವಿಧವೆಯನ್ನು ಮದುವೆಯಾಗುವುದರಿಂದ, ನೀನೊಬ್ಬ ಸಮಾಜ ಸುಧಾರಕನಾಗುವುದರ ಜೊತೆಗೆ, ಕತ್ತಲ ಭವಿಷ್ಯದಲ್ಲಿ ಹೆಣಗಾಡುತ್ತಿರುವ ಹೆಣ್ಣಿಗೆ ಒಂದು ಬಾಳನ್ನು ಕೊಟ್ಟಂತೆಯೂ ಆಗುವುದಿಲ್ಲವೆ?"

ಮನೆ ಮಕ್ಕಳು ಗಂಡ-ಎಲ್ಲರೊಂದಿಗೂ ಸಂತೋಷದಿಂದ ಕಳೆಯುವ ಸಾಧ್ಯತೆಗಳೇ ಇರಲಿಲ್ಲವಾಗಿ., ಸ್ಥಗಿತಗೊಂಡಿದ್ದ ಹರಿಜನೋದ್ಧಾರದ ಕೆಲಸಗಳಲ್ಲಿ ತೊಡಗಿಸಿಕೊಂಡಳು. ದೂರದ ಹತ್ತಿರದ ಹಳ್ಳಿಗಳಿಗೆ ಭೇಟಿಕೊಟ್ಟು, ಅಲ್ಲಿನ ಹೆಂಗಸರಿಗೆ, ತಮ್ಮ ವಿಕಾಸಕ್ಕಾಗಿ ಏನೇನು ಮಾಡಬೇಕೆಂಬುದನ್ನು ಕಲಿಸಿಕೊಡುತ್ತಿದ್ದಳು.

"ನೋಡು ಹೀಗೆಲ್ಲ ಕಣ್ಣೀರಿಡಬಾರದು. ನಮ್ಮ ಗಂಡಸರು ಹೇಡಿಗಳಲ್ಲ. ವೀರ ಯೋಧರು. ವೀರ ಯೋಧರ ಹೆಂಡತಿಯರಾದ ನಾವು ಕಣ್ಣೀರಿಟ್ಟು, ಅವರನ್ನು ಅಧೀರರನ್ನಾಗಿ ಮಾಡಬಾರದು. ಅವರನ್ನು ಉತ್ತೇಜಿಸಬೇಕು. ಧೈರ್ಯದ ಭರವಸೆ ನೀಡಬೇಕು. ಖಂಡಿತವಾಗಿ ಜಯಗಳಿಸಿ ಬರುತ್ತೀರೆಂದು ಬೆನ್ನು ತಟ್ಟಿ ವಿಶ್ವಾಸ ತುಂಬಬೇಕು" ಎಂದು ಮತ್ತೊಮ್ಮೆ ಸುಶೀಲಾಗೆ ಭರವಸೆ ಮಾತುಗಳನ್ನು ಹೇಳಿದಳು.

ಹರಿಲಾಲನನ್ನು ದಾರಿ ತಪ್ಪಿಸಿದ, ಮುಸ್ಲಿಂ ಬಂಧುಗಳಿಗೂ ಒಂದೆರಡು ಮಾತನ್ನು ಹೇಳಬಯಸಿದ್ದಳು. ಈ ಪತ್ರವನ್ನೂ ಬಹಿರಂಗ ಪತ್ರವಾಗಿ ಎಲ್ಲ ಪತ್ರಿಕೆಗಳಲ್ಲಿ ಬರುವಂತೆ ಕೋರಿದ್ದಳು. ತನ್ನ ಪತ್ರವನ್ನು 'ನೊಂದ ತಾಯಿಯ ಕ್ಷೀಣ ದನಿ' 'ಆತ್ಮಸಾಕ್ಷಿಯನ್ನು ಕೇಳಿಕೊಳ್ಳಿ' ಎಂಬ ಶೀರ್ಷಿಕೆಗಳಲ್ಲಿ ಕಳಿಸಿದಳು.

ನಿಮ್ಮ ನಡವಳಿಕೆ ನನಗೆ ಅರ್ಥವಾಗುತ್ತಿಲ್ಲ. ದೊಡ್ಡ ಸಂಖ್ಯೆಯ ವಿಚಾರವಂತ ಮುಸ್ಲಿಮರು ಮತ್ತು ಅಜನ್ಮ ಸ್ನೇಹಿತರೂ, ಮುಸ್ಲಿಮರು, ಈ ಪ್ರಸಂಗವನ್ನು ಖಂಡಿಸಿದ್ದನ್ನು ಕೇಳಿ ನನಗೆ ಸಂತೋಷವಾಯಿತು. ನನ್ನ ಮಗ ತಪ್ಪುದಾರಿ ಹಿಡಿಯುವುದನ್ನು ತಪ್ಪಿಸುವುದಕ್ಕೆ ಬದಲಾಗಿ, ಮತಾಂತರದ ಹೆಸರಲ್ಲಿ ಇನ್ನಷ್ಟು ಹದಗೆಡುವಂತೆ ಮಾಡಿದ್ದು ನನಗೆ ನೋವುಂಟು ಮಾಡಿದೆ. ಅವನನ್ನು ಕೆಟ್ಟ ಚಾಳಿಗಳಿಂದ ಬಿಡಿಸಿ, ಸರಿದಾರಿಗೆ ತರುವುದಕ್ಕೆ ಬದಲಾಗಿ, ಅವನನ್ನು ಅಂದರೆ ನನ್ನ ಅಂಥ ಮಗನನ್ನು 'ಮೌಲ್ವಿ' ಎಂದು ಮರೆಸಿ

ತಲೆಕೆಡಿಸಿರುವುದು ನಿಮಗೆ ಸರಿಯೆನಿಸುತ್ತಿದೆಯೇ. ಅಂಥ ದುಷ್ಟ ಚಾಳಿಗಳಿಗೆ ಬಲಿಯಾದವನನ್ನು ನಿಮ್ಮ ಧರ್ಮ 'ಮೌಲ್ವಿ' ಎಂದು ಒಪ್ಪಿಕೊಳ್ಳುತ್ತದೆಯೇ?

ರಾಜಕೋಟೆಯಲ್ಲಿನ ರಾಜಕೀಯ ವಿದ್ಯಮಾನಗಳನ್ನು ಸೇವಾಗ್ರಾಮದಲ್ಲಿದ್ದ 'ಬಾ' ಕೇಳಿಸಿಕೊಂಡಳು. ಒಡನೆಯೇ ಸಿಡಿದೆದ್ದಳು. ರಾಜಕೋಟೆ ತನ್ನೂರು, ಅಲ್ಲಿನ ಜನ ಹಿಂಸೆ, ದೌರ್ಜನ್ಯ ದಬ್ಬಾಳಿಕೆಗಳಿಂದ ತತ್ತರಿಸುತ್ತಿದ್ದುದನ್ನು ಸಹಿಸಿಕೊಳ್ಳಲಾರದೆ ಹೋದಳು. ಎಲ್ಲಕ್ಕಿಂತ ಹೆಚ್ಚಾಗಿ ಅವಳನ್ನು ಕೆರಳಿಸಿದ್ದೆಂದರೆ ಹೆಂಗಸರ ಮೇಲಿನ ದೌರ್ಜನ್ಯ ಅತ್ಯಾಚಾರಗಳು! ಹೆಂಗಸರ ಮರ್ಯಾದೆ ಪ್ರತಿಷ್ಠೆಯನ್ನು ರಕ್ಷಿಸಿಕೊಳ್ಳಲೇಬೇಕಾದ ತುರ್ತನ್ನು ಗಮನಿಸಿದಳು. ಕೂಡಲೇ ರಾಜಕೋಟೆಗೆ ತೆರಳಿ ಏನಾದರೂ ಮಾಡಲೇಬೇಕೆಂದು ನಿರ್ಧರಿಸಿದಳು.

ಬಾಪುವಿಗೂ ಕಾಯದೆ, ಅಂಬಾಲಾಲ್ ಸಾರಾಬಾಯಿಯ ಮಗಳಾದ ಮೃದುಲಾ ಸಾರಾಬಾಯಿಯನ್ನು ಜೊತೆಗಿಟ್ಟುಕೊಂಡು ಹೊರಟೇಬಿಟ್ಟಳು. ತನ್ನ ಬಳಿಯಿದ್ದ ಮೊಮ್ಮಗ ಕನುವನ್ನು ಗಂಡನ ರಕ್ಷಣೆಯಲ್ಲಿ ಬಿಟ್ಟು, ರಾಜಕೋಟೆ ಹೆಂಗಸರನು ಸಂಘಟಿಸಲು ರಾಜಕೋಟೆಗೆ ದೌಡಾಯಿಸಿದಳು. ರಾಜಕೋಟೆ ತಲುಪಿದ್ದೇ ಅಲ್ಲಿನ ಹೆಂಗಸರನ್ನು ಒಟ್ಟುಗೂಡಿಸಿ ಅವರೆಲ್ಲರೂ ತಮ್ಮ ಹಕ್ಕುಗಳ ರಕ್ಷಣೆಗಾಗಿ, ತಮ್ಮ ಮೇಲಿನ ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರಗಳ ವಿರುದ್ಧವಾಗಿ ಹೋರಾಡಬೇಕೆಂದು ಹುರಿದುಂಬಿಸಿದಳು.

ಅವಳನ್ನು ಹೋರಾಟದಿಂದ ದೂರ ಉಳಿಯುವಂತೆ ಮಾಡಲು, ಗಾಂಧಿ ಅನಾರೋಗ್ಯದಿಂದಿದ್ದಾರೆ ಎಂದು ಸುಳ್ಳು ವದಂತಿಯೂ ಹಬ್ಬಿಸಿದರು. 'ಬಾ' ಅದಕ್ಕೆ ವಿಚಲಿತಳಾಗಲಿಲ್ಲ. ಗಾಂಧಿ ಮತ್ತು ಬಾರ ನಡುವೆ ಪತ್ರ ವ್ಯವಹಾರ ಮುಂದುವರೆದಿತ್ತು.

'ಬಾ'ಗೆ ತನ್ನ ಜೊತೆ ಬಂದು ಇರುವ ಮನಸ್ಸಿದ್ದರೆ ರಾಜಾಧಿಕಾರಿಗಳನ್ನು ಕೇಳಿ ವ್ಯವಸ್ಥೆ ಮಾಡುವುದಾಗಿಯೂ ಹೇಳಿ ಕಳಿಸಿದ್ದ.

ಆದರೆ 'ಬಾ' ಹಾಗೆ ಮಾಡಲು ಒಪ್ಪಲಿಲ್ಲ. ಗಂಡನ ತತ್ವಾದರ್ಶಗಳಿಗೆ ಬದ್ಧಳಾಗಿದ್ದವಳಿಗೆ ಪರಿಸ್ಥಿತಿಯ ಬಗ್ಗೆ ತರ್ಕಬದ್ಧವಾಗಿ ಆಲೋಚಿಸುವಷ್ಟು ಸಾಮರ್ಥ್ಯವಿತ್ತು. ತಾನೊಬ್ಬಳು ಬಿಡುಗಡೆ ಬಯಸಿ, ಗಂಡನ ನೆಪದಲ್ಲಿ ಹೊರಗೆ ಬರುವುದೆಂದರೆ, ಸತ್ಯಾಗ್ರಹದ ಸಿದ್ಧಾಂತಗಳಿಗೆ ದ್ರೋಹಮಾಡಿದಂತೆ ಎಂದೆನಿಸಿ, ಬರುವ ಅಪಾಯಗಳಿಗೆ ಎದೆಯೊಡ್ಡಿ ನಿಲ್ಲುವ ನಿರ್ಧಾರವನ್ನು ಮಾಡಿದಳು, ಮತ್ತು ಗಂಡನಿಗೂ ಅದನ್ನು ಹೇಳಿಕಳಿಸಿದಳು.

"ಸುಶೀಲಾ ಈ ದೇಶವನ್ನು ದಾಸ್ಯದ ಸಂಕೋಲೆಗಳಿಂದ ಬಿಡಿಸಬೇಕಾದರೆ ನಾವಿಬ್ಬರಿದ್ದರೆ ಸಾಲದು. ಈ ದೇಶದ ಋಣ ತಿಂದ ಪ್ರತಿಯೊಬ್ಬ ಭಾರತೀಯನೂ ಸ್ವಾತಂತ್ರ್ಯವೆಂಬ ಹೋರಾಟದ ಅಗ್ನಿಯಲ್ಲಿ ಸಮಿತ್ತಾಗಿ ಸಮರ್ಪಿಸಿಕೊಳ್ಳಬೇಕು. ನಾನು ನನ್ನ ಕುಟುಂಬವನ್ನೇ ಅರ್ಪಿಸಿಬಿಟ್ಟಿದ್ದೇನೆ. ಅದರ ಭಾಗವೇ ನೀನು."

"ನನಗೆ ಯಾವುದರ ಭಯವೂ ಇಲ್ಲ. ನನ್ನ ಗಂಡ ಮಕ್ಕಳು ಸ್ನೇಹಿತರು, ಬಂಧುಗಳು ಅಲ್ಲದೆ ಇಡೀ ದೇಶದ ಪ್ರಜೆಗಳೇ ಬಂಧನಕ್ಕೆ ಒಳಗಾಗುತ್ತಿರುವಾಗ, ದೇಶವೇ ಒಂದು ಜೈಲುಖಾನೆ ಆಗಿರುವಾಗ, ಅಪಾಯಗಳಿಗೆ ಹೆದರಿ ಸುಮ್ಮನೆ ಕೂಡುವುದು ನಾಚಿಕೆಗೇಡಿನ ಕೆಲಸ, ಅದೊಂದು ಹೇಡಿತನ!!"

ಸ್ತ್ರೀ ಸಮಾಜದಲ್ಲಿ ಒಳ್ಳೆಯ ಹೆಣ್ಣು, ಒಳ್ಳೆಯ ಪತ್ನಿ, ಒಳ್ಳೆಯ ನಾರಿ ಎಂದು ಗುರುತಿಸಿಕೊಳ್ಳಬೇಕಾದರೆ ಆಕೆಗೆ ಈ ತ್ಯಾಗ ಸ್ವರೂಪದ ಅಪಾರ ಬೆಲೆಯನ್ನು ತೆರಬೇಕಾಗಿತ್ತು. ವ್ಯವಸ್ಥೆ

ನಿರೀಕ್ಷಿಸುವ ಕೆಲವು ನಿರ್ದಿಷ್ಟ ಗುಣಗಳನ್ನು ಹೊಂದಿರಬೇಕಾಗಿತ್ತು. ಅಂಥ ಗುಣಗಳು ಸ್ತ್ರೀಯಾದವರಲ್ಲಿ ಇರಬೇಕೆಂದು ಹಾಗೆ ಇರುತ್ತವೆಯೆಂದು ಸಮಾಜ ಅವರನ್ನು ನಂಬಿಸಿತ್ತು. ಈ ನೆಲೆಯಲ್ಲಿ ಹೆಣ್ಣಿನ ತಾಳ್ಮೆ, ಭಾವನಾಶೀಲತೆ, ಅಂತಃಸ್ಫೂರ್ತಿ, ನಿಸ್ವಾರ್ಥ ಸೇವೆ, ತ್ಯಾಗಗಳೆಲ್ಲ ಸ್ತ್ರೀತ್ವವೆಂದು ಗುರುತಿಸಲ್ಪಟ್ಟವು. ಆದರ್ಶೀಕರಿಸಲ್ಪಟ್ಟವು. ಹೆಣ್ಣಿನ ವ್ಯಕ್ತಿತ್ವವನ್ನು ಇವುಗಳೊಂದಿಗೆ ಸಮೀಕರಿಸಿ ಸಂಪ್ರದಾಯಗಳನ್ನು ಮೌಲ್ಯವಾಗಿಸಲು ಈ ಮೌಲ್ಯಗಳೆಲ್ಲ ಸ್ತ್ರೀಯರ ಬದುಕನ್ನು ನಿಯಂತ್ರಿಸಲಾರಂಭಿಸಿದವು. ಇಂಥ ಸಂದರ್ಭದಲ್ಲಿ ತನ್ನತನವನ್ನು ಪ್ರದರ್ಶಿಸದೆ ಇನ್ನೊಬ್ಬರ ಒಳಿತಿಗಾಗಿ ಬದುಕಿ ಆದರ್ಶನಾರಿ ಎನಿಸಿಕೊಳ್ಳುವಲ್ಲಿಯೇ ಸ್ತ್ರೀಯರ ಬದುಕೆಲ್ಲ ಕೇಂದ್ರೀಕೃತವಾಯಿತು.

ಅಧ್ಯಾಯ - ೨

ಬೆಸುಗೆಯ ಬಂಧನದಲ್ಲಿ ಕಾದಂಬರಿಯಲ್ಲಿ ವ್ಯಕ್ತಗೊಂಡ ಸ್ತ್ರೀ ದಿಟ್ಟತನ

ಅಧ್ಯಾಯ ೭

ಬೆಸುಗೆಯ ಬಂಧನದಲ್ಲಿ ಕಾದಂಬರಿಯಲ್ಲಿ ವ್ಯಕ್ತಗೊಡ ಸ್ತ್ರೀ ದಿಟ್ಟತನ

"ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತರನ್ನು ಮತ್ತು ಮಹಿಳೆಯರನ್ನು ಬೌದ್ಧಿಕವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕಡೆಗಣಿಸಲಾಗಿತ್ತು. "ಹಿಂದೂ ಧರ್ಮದಲ್ಲಿ ಶೂದ್ರನು ಕೀಳು ಮಾನವನಾದರೆ ಸ್ತ್ರೀ ನೀಚಳೆಂದು ಪರಿಗಣಿಸಲ್ಪಟ್ಟಿದ್ದಾಳೆ. ಇದರಿಂದಾಗಿ ಸ್ತ್ರೀಯು ಹಿಂದೂ ಸಮಾಜದಲ್ಲಿ ಶೂದ್ರರಿಗಿಂತ ಹೆಚ್ಚಿನ ತುಚ್ಚೀಕರಣಕ್ಕೆ ಗುರಿಯಾಗಿದ್ದಾಳೆ. ಸ್ತ್ರೀ ಕಿರುಬನ ಹೃದಯದವಳು (ಋಗ್ವೇದ) ಅವಳು ಎಲ್ಲಾ ಕೆಡುಕಿನ ಬೇರು (ಮಹಾಭಾರತ), ಅವಳು ಚಂಚಲೆ ಖಡ್ಗದಂತೆ ಹರಿತವಾದವಳು. ಬಿರುಗಾಳಿಯಂತೆ ಅಸ್ಥಿರಳು (ರಾಮಾಯಣ), ಹೆಂಗಸು ಕಾಮ ಪಿಪಾಸೆ ಉಳ್ಳವಳು, ಕುಟಿಲೆ, ಸ್ತ್ರೀ ಸ್ವಾತಂತ್ರ್ಯಕ್ಕೆ ಎಂದಿಗೂ ಅನರ್ಹಳು (ಮನು). ಸ್ತ್ರೀ ಒಂದು ವಸ್ತು, ಪದಾರ್ಥ, ಶಾಕ್ಷ, ಮುಂತಾಗಿ ಸ್ತ್ರೀಯನ್ನು ವೇದೋಪನಿಷತ್ತುಗಳ ಕಾಲದಿಂದಲೂ ಕಡೆಗಣಿಸಿಕೊಂಡು ಬರಲಾಗಿತ್ತು."[೧] ಕಾಲಾನಂತರ ಭಾರತೀಯ ಅಂಥ ಸಂಪ್ರದಾಯ ದೂರ ಸರಿಸಿ ವೈಚಾರಿಕತೆಯೆಡೆಗೆ ನಡೆಯಲಾರಂಭಿಸಿದರು. ಈ ಕಾಲದಲ್ಲಿ ಮಹಿಳೆ ಸಾಕಷ್ಟು ರೀತಿಯಲ್ಲಿ ಜಾಗೃತಳಾದಳು. ಇದರಿಂದ ಸಮಾಜವು ಜೀವಂತಿಕೆಯನ್ನು ಪಡೆಯಿತು. ಸ್ತ್ರೀ ಕೂಡಾ ಪುರುಷನ ಸಮಾನ ಸ್ಥಾನ ಪಡೆಯಬೇಕು ಸಮಾಜದಲ್ಲಿ ಮಹಿಳೆ ಘನತೆಯಿಂದ ಬಾಳಬೇಕು. ಅವಳು ತನ್ನ ಅಭಿರುಚಿಗಳಿಗೆ ಅನುಗುಣವಾಗಿ ಬದುಕಬೇಕು. ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳಬೇಕೆಂಬ ಹಂಬಲ ಹೊಂದಿದಳು. ಪುರುಷನ ಸ್ವಾರ್ಥ, ಕ್ರೌರ್ಯ ಮೌಢ್ಯ, ಗೊಡ್ಡುತನ, ಸಂಪ್ರಾದಾಯಕತೆ, ಅಧಿಕಾರತನ, ನೀಚತನ ಅಮಾನವೀಯತೆಗಳಿಂದ ಮಹಿಳೆ ಅನುಭವಿಸುವ ನೋವನ್ನು ತೀವ್ರವಾಗಿ ಧಿಕ್ಕರಿಸುವ ದಿಟ್ಟತನ ಹೊಂದಿದಳು.

ಹೆಂಡತಿಯ ಮೇಲೆ ಅಧಿಕಾರ ಚಲಾಯಿಸುವುದು ಪತಿಯಾದ ತನ್ನ ಧರ್ಮವೆಂದೇ ಭಾವಿಸಿದ. ಅದಕ್ಕಾಗಿಯೇ ಅವಳನ್ನು ಕರೆದು, ತನಗೆ ತಿಳಿಸದೆ ಮನೆಯಿಂದ ಹೊರಗೆ ಹೆಜ್ಜೆ ಇಡಬಾರದೆಂದೂ, ತನ್ನ ಅಪ್ಪಣೆಯಿಲ್ಲದೆ ಏನನ್ನೂ ಮಾಡಬಾರದೆಂದೂ ತಾಕೀತು ಮಾಡಿದ, ಎಲ್ಲಿಗಾದರೂ ಹೋದಲ್ಲಿ, ಯಾಕೆ, ಯಾರ ಜೊತೆ, ಎಷ್ಟು ಹೊತ್ತಿಗೆ ಇತ್ಯಾದಿ ಎಲ್ಲ ವಿವರಗಳನ್ನು ನಿಖರವಾಗಿ ತಿಳಿಸಬೇಕೆಂದು ಆದೇಶಿಸಿದ. ಗಂಡನ ಈ ನಿಲುವು, ಮಾತಿನಲ್ಲಿದ್ದ ಅಧಿಕಾರ, ದರ್ಪ ಕಸ್ತೂರಳ ಸ್ವಾಭಿಮಾನವನ್ನು ಕೆರಳಿಸಿತು. ಆ ಕಾಲದ ಹೆಣ್ಣಾದರೂ ಅವಳಲ್ಲಿ ದಿಟ್ಟತನವಿತ್ತು. ಅತಿಯಾದ ಸ್ವಾಭಿಮಾನವೂ ಇತ್ತು. ತನಗೆ ಮಾತ್ರ ಏಕೆ ನಿರ್ಬಂಧ? ಎಂದು ತನ್ನಲ್ಲೇ ಪ್ರಶ್ನಿಸಿಕೊಂಡಳು. ಅಲ್ಲದೆ ಪ್ರತಿಯೊಂದಕ್ಕೂ ಗಂಡನ ಮುಂದೆ ಕುರಿಯಂತೆ ನಿಂತು ಅನುಮತಿ ಬೇಡುವುದೆಂದರೆ, ಅದು ತನಗೆ ಮಾಡುವ ಅವಮಾನವೆಂದು ಭಾವಿಸಿದಳು. ಆದರೆ ಹಾಗೆಂದ ಮಾತ್ರಕ್ಕೆ ಅವಳು ಉದ್ಧಟಳಾಗಿರಲಿಲ್ಲ-ಯಾರನ್ನೂ ಎದುರು ಹಾಕಿಕೊಳ್ಳುತ್ತಿರಲಿಲ್ಲ, ವಾದಿಸುತ್ತಿರಲಿಲ್ಲ. ಹೊಂದಿಕೊಂಡು ಹೋಗುತ್ತಿದ್ದಳಾದರೂ, ತನ್ನ ಮೇಲೆ ಅಧಿಕಾರ ಚಲಾಯಿಸುವುದನ್ನು ಮಾತ್ರ ಸಹಿಸುತ್ತಿರಲಿಲ್ಲ. ಸ್ವಲ್ಪ ಸಮಯದವರೆಗೂ ಗಂಡನ ಈ ಆದೇಶಗಳೂ ನಿರೀಕ್ಷೆಗಳೂ, ಅವಳ ಮನಸ್ಸಿನಲ್ಲಿ ಮುಳ್ಳುಗಳಾಗಿ ನೆಟ್ಟವು.

ಮಣಿಪಾಲ ಆರ್.ಕೆ ಭಾರತೀಯ ಸಂಸ್ಕೃತಿ : ಅಂತರಂಗ ಬಹಿರಂಗ, ಸಂಕ್ರಮಣ ೧೧೦-೧೧೧ ಪು. ೯೮

ಎರಡು ಮೂರು ದಿನಗಳಿಂದ, ಬೇಕೆಂದೇ ಗಂಡನ ಪರವಾನಗಿ ಇಲ್ಲದೆಯೇ ಗೆಳತಿಯರ ಮನೆಗೆ ಹೋಗಿ ಬರುತ್ತಿದ್ದಳು. ಅತ್ತೆಯ ಜೊತೆ ಒಂದೆರಡು ಬಾರಿ ಗುಡಿಗೂ ಹೋಗಿ ಬಂದಳು. ಮೋಹನದಾಸ ಇದನ್ನೆಲ್ಲ ಮೌನವಾಗಿ ಗಮನಿಸುತ್ತಿದ್ದ, ಕಸ್ತೂರಳೂ ಬೇಕೆಂದೇ ಅವನಿಗೆ ಅರ್ಥ ಮಾಡಿಸಲು ಹೀಗೆ ಮಾಡುತ್ತಿದ್ದಳು.

"ನೀವು ನನಗೆ ಗಂಡನೇ ಇರಬಹುದು, ಹಾಗೆಂದ ಮಾತ್ರಕ್ಕೆ ಪ್ರತಿ ಸಣ್ಣ ವಿಷಯಕ್ಕೂ ನಿಮ್ಮ ಅಪ್ಪಣೆ ಬೇಡಬೇಕೇನು? ನಾನು ನಿಮ್ಮಂತೆ ಮನುಷ್ಯಳು. ನಾವು ಗಂಡ ಹೆಂಡಿರು. ಪರಸ್ಪರ ಸೌಹಾರ್ದತೆಯಿಂದ ಒಬ್ಬರ ಭಾವನೆಗಳನ್ನು ಮತ್ತೊಬ್ಬರು ಅರ್ಥಮಾಡಿಕೊಂಡು ಹೋಗುತ್ತೇವೆಂದು ಮಾಡಿದ ಪ್ರಮಾಣಕ್ಕೆ ಬೆಲೆ ಕೊಡುವುದು ಬೇಡವೇ? ಅದೂ ಅಲ್ಲದೆ ನಾನು ಹೋದದ್ದಾದರೂ ಎಲ್ಲಿಗೆ? ನನ್ನ ಅಕ್ಕಂದಿರು ಜೊತೆಗೆ ಬರಲು ಕರೆದಾಗ ಹೋಗಿದ್ದೆ. ಅತ್ತೆಯವರು ದೇವರ ದರ್ಶನಕ್ಕೆ ಬಾರೆಂದು ಕರೆದಾಗ ಹೋಗಿದ್ದೆ – ನಾನು ಮಾಡಿದ್ದು ಇಷ್ಟೆ! ಇದಕ್ಕಿಂತ ಬೇರೆ ಯಾವ ಅಪರಾಧ ಮಾಡಿದ್ದೇನೆ? ನೀವು ಹೀಗೆಲ್ಲ ಆಕ್ಷೇಪಿಸುವುದು, ದಂಡಿಸುವುದು ನಿಮಗೆ ನ್ಯಾಯವೆನಿಸುತ್ತದೆಯೇ? ಅತ್ತೆಯಂತಹ ಹಿರಿಯರು ಕರೆದಾಗ ಬರುವುದಿಲ್ಲವೆಂದು ನಿರಾಕರಿಸುವುದು ಸಮ್ಮತವೇ? ಅಲ್ಲದೆ ನನ್ನ ಗಂಡನ ಅನುಮತಿ ಇಲ್ಲದೆ ನಾನು ಬರುವುದಿಲ್ಲವೆಂದು ಹೇಳುವುದು ನಿಮಗೆ ಗೌರವ ತರುತ್ತದೆಯೇ?" ಎಂದು ದೀರ್ಘವಾದ ಭಾಷಣವನ್ನೇ ಮಾಡಿದಳು.

ಕಸ್ತೂರಳಿಗೆ ಗಂಡನ ಈ ಪ್ರಾರ್ಥನೆಗೆ ಏನು ಹೇಳಬೇಕೋ ತಿಳಿಯಲಿಲ್ಲ. ಓದು ಬರಹ ಕಲಿಯಬೇಕೆಂಬ ತುಡಿತವಾಗಲೀ ಹುಮ್ಮಸ್ಸಾಗಲೀ ಅವಳಲ್ಲಿ ಅಷ್ಟಾಗಿ ಇರಲಿಲ್ಲ. ತಾನು ಓದಿದವಳಲ್ಲ ಎಂಬುದರ ಬಗ್ಗೆ ಕೀಳರಿಮೆಯೂ ಇರಲಿಲ್ಲ. ಯಾಕೆಂದರೆ ಆ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಅಗತ್ಯವೆಂದು ಯಾರೂ ಭಾವಿಸಿರಲಿಲ್ಲ. ಆದ್ದರಿಂದ ಶಿಕ್ಷಣವೆಂಬುದು ಅವರ ಪಾಲಿಗೆ ಸೊನ್ನೆಯಾಗಿತ್ತು. ಮನೆಯಲ್ಲಿಯೇ ಹಿರಿಯರಿಂದ ನೈತಿಕ ಪಾಠ ಪ್ರವಚನಗಳನ್ನು ನೀಡಲಾಗುತ್ತಿತ್ತು. ಹೆಣ್ಣು ಮಕ್ಕಳ ಶಾಶ್ವತ ನೆಲೆ ಅತ್ತೆ ಮನೆಯಾದ್ದರಿಂದ ಅಲ್ಲಿ ಅವರು ಕುಟುಂಬದಲ್ಲಿ ಹೇಗೆ ಎಲ್ಲರೊಂದಿಗೆ ಹೊಂದಿಕೊಂಡು ಬಾಳಬೇಕು, ಅತ್ತೆ ಮಾವ ಭಾವಂದಿರು ಮೈದುನಂದಿರು, ನೆಗಣ್ಣೆಯವರೊಂದಿಗೆ ಯಾವ ಯಾವ ಸಂದರ್ಭದಲ್ಲಿ ಹೇಗೆ ವರ್ತಿಸಬೇಕು.

ಆ ಮಾತುಗಳನ್ನು ಕೇಳಿಸಿಕೊಂಡ ಕಸ್ತೂರಳು ಯಾವುದೇ ಭಾವಾವೇಶಕ್ಕೆ ಒಳಗಾಗದೆ ಎಂದಿನಂತೆ ಸಹಜವಾಗಿದ್ದಳು. ಅವನಿಗೆ ಆದದ್ದನ್ನೆಲ್ಲ ಮರೆತು ಮಾಮೂಲಿನಂತೆ ಇರಲು ಹೇಳಿದಳು. ಅವಳ ಔದಾರ್ಯ, ಕ್ಷಮಾಗುಣ ಇನ್ನೂ ಹುಡುಗು ವಯಸ್ಸಿನಲ್ಲಿ ಇದ್ದವನಿಗೆ ಎಷ್ಟು ಅರ್ಥವಾಯಿತೋ ತಿಳಿಯದು. ಅವನಿಗೆ ಹೋಲಿಸಿದಲ್ಲಿ ಕಸ್ತೂರಳು ಸಾಕಷ್ಟು ಪ್ರಬುದ್ಧಳಾಗಿದ್ದಳು. ಸರಿ–ತಪ್ಪುಗಳ ವಿವೇಕ ಅವಳಿಗಿತ್ತು. ತನಗೆಷ್ಟೇ ಸಿಟ್ಟು ಬಂದರೂ ಅದು ಆ ಕ್ಷಣ ಮಾತ್ರ! ಗಂಡನ ತಪ್ಪುಗಳನ್ನು ಎಂಥ ಪ್ರಮಾದಕರವಾದದ್ದೇ ಇರಲಿ, ಹೆಂಡತಿಯಾದವಳು ಅವುಗಳನ್ನು ಗಂಭೀರವಾಗಿ ಪರಿಗಣಿಸದೆ ಅದೆಲ್ಲವನ್ನೂ ಒಪ್ಪಿಕೊಂಡು ಸಹಿಸಿಕೊಂಡು ಬಾಳಬೇಕೆಂಬ ನೀತಿಪಾಠವನ್ನು ಕಲಿತವಳಾಗಿದ್ದಳು. ಆದ್ದರಿಂದ ತನ್ನ ಗಂಡನ ಅಪರಾಧಗಳನ್ನೆಲ್ಲ ಮರೆತು ಬಿಟ್ಟಳು.

"ಇದೇನಿದು ನೀವು ಮಾಡುತ್ತಿರುವುದು? ಇನ್ನೂ ನಿಮಗೆ ಹುಡುಗಾಟವೇ? ನೀವು ನನಗೆ ಅರ್ಥವಾಗುವುದೇ ಕಷ್ಟವಾಗಿದೆ. ನನ್ನ ಮೇಲೆ ಅಧಿಕಾರ ಚಲಾಯಿಸುತ್ತೀರಿ, ಮಾತು ಮಾತಿಗೆ ಸಿಟ್ಟಾಗುತ್ತೀರಿ, ನೀವು ಹೇಳಿದ್ದೆಲ್ಲ ಕೇಳಬೇಕೆಂದು ಒತ್ತಾಯಿಸುತ್ತೀರಿ. ಇಲ್ಲಸಲ್ಲದ ಆರೋಪಗಳನ್ನು ಹೇರುತ್ತೀರಿ. ಪ್ರತಿಯೊಂದನ್ನೂ ಅನುಮಾನಿಸುತ್ತೀರಿ. ಸಿಟ್ಟಿನಿಂದ ತವರಿಗೆ ಅಟ್ಟಿಬಿಟ್ಟಿರಿ, ಈಗ ನೋಡಿದರೆ ನಿಮ್ಮ ಪ್ರೀತಿಯ ಪರಾಕಾಷ್ಠೆಯಲ್ಲಿ ಪ್ರಾಣ ತೆಗೆಯುತ್ತೀರಿ" ಎಂದು ಒಂದೇ ಸಮನೆ ಅವನ ಬಂಡವಾಳವನ್ನೆಲ್ಲ ಹೊರಚೆಲ್ಲಿ ಬಿಟ್ಟಳು.

"ನಿಜ ಹೇಳು, ನೀನು ನನ್ನನ್ನು ಪ್ರೀತಿಸುತ್ತಿರುವೆಯಾ, ನಾನು ನಿನಗೆ ಗಂಡನಾಗಿರುವುದು ಇಷ್ಟವಿಲ್ಲವೇ...? ನನಗೂ ಮೊದಲು ಯಾರನ್ನಾದರೂ ಪ್ರೀತಿಸಿದ್ದೆಯಾ?" ಎಂದು ಗಿಳಿಪಾಠದಂತೆ ಒಪ್ಪಿಸಿದ.

ಕಸ್ತೂರಳಿಗೆ ಗಂಡನ ಈ ಪ್ರಶ್ನೆಗಳು ವಜ್ರಾಘಾತದಂತೆ ಬಾಸವಾದವು. ಆ ಪ್ರಶ್ನೆಗಳ ಹಿಂದೆ ಇರಬಹುದಾದ ಕೊಳಕು ಸಂಶಯ ಊಹಿಸಿಕೊಳ್ಳುತ್ತಿದ್ದಂತೆ ಆಕ್ರೋಶ, ಸಿಟ್ಟು, ವೇದನೆಗಳಿಂದ ತತ್ತರಿಸಿ ಹೋದಳು. "ಹೆಂಡತಿಗೆ ಗಂಡನು ಕೇಳುವ ಪ್ರಶ್ನೆಗಳೇ ಇವು!?" ಆದರೂ ಕೇಳುತ್ತಿದ್ದಾನೆ..... ಯೋಚಿಸಿದಷ್ಟು ಅವಳಿಗೆ ಸಮಾಧಾನ ಸಿಗಲಿಲ್ಲ. ಅವನು ಬೆಳೆದುಬಂದ ಪರಿಸರ, ಪಡೆದ ಸಂಸ್ಕಾರಗಳ ನಡುವಿನಿಂದ ಇಂಥ ಪ್ರಶ್ನೆಗಳು ಉದ್ಭವಿಸಲು ಸಾಧ್ಯವೇ ಇಲ್ಲ. ಅವಳ ಆತ್ಮಸಾಕ್ಷಿಗೆ ಗೊತ್ತು. ಅವನು ತನ್ನನ್ನು ತುಂಬಾ, ತುಂಬಾ ಪ್ರೀತಿಸುತ್ತಾನೆ. ಒಂದು ಕ್ಷಣ ತೊರೆದಿರಲೂ ಸಂಕಟಪಡುತ್ತಾನೆ. ಹೀಗಿರುವಾಗ ಧುತ್ತೆಂದು ತನ್ನನ್ನು ಅಪ್ಪಳಿಸಿದ ಪ್ರಶ್ನೆಗಳು ಬಂದದ್ದಾದರೂ ಎಲ್ಲಿಂದ>?– ಎಂದೆಲ್ಲ ಆಲೋಚಿಸಿದಳು. ಥಟ್ಟನೆ ಇಂಥ ದುಷ್ಟ ಭಾವನೆಗಳ ಪ್ರಚೋದಕ ಮೆಹತಾಬನೇ ಇರಬೇಕೆಂದು ಊಹಿಸಿದಳು. ಸಿಡಿಲಿನಂತೆ ಎರಗಿದಳು.

"ಇದ್ದಕ್ಕಿದ್ದಂತೆ ನಿಮಗೆ ಈ ಅನುಮಾನ ಹೇಗೆ ಬಂತು? ಹೆಂಡತಿಯ ನಡತೆಯನ್ನು ಅಪನಂಬಿಕೆಯಿಂದ ನೋಡುವವನು ಗಂಡ ಎನಿಸಿಕೊಳ್ಳಲು ಯೋಗ್ಯನೇ ಅಲ್ಲ. ಗಂಡ ಹೇಡಿಯಲ್ಲ, ಪರಸ್ಪರ ನಂಬಿಕೆ ವಿಶ್ವಾಸಗಳು ಇದ್ದಾಗಲೇ ಅನ್ಯೋನ್ಯ ದಾಂಪತ್ಯ, ಸಂಸಾರದಲ್ಲಿ ಸಾಮರಸ್ಯ ಸಾಧ್ಯವಾಗುವುದು. ನಿಮ್ಮ ತಂದೆ–ತಾಯಿ, ಅಣ್ಣ–ಅತ್ತಿಗೆಯರ ನಡುವೆ ಈ ರೀತಿಯ ಅನುಮಾನಗಳು, ಸಂಶಯಗಳು ಮೊಳೆತಿದ್ದಲ್ಲಿ ಇವತ್ತು ಸಂಸಾರ ಅವಿಭಕ್ತವಾಗಿ ಒಗ್ಗೂಡಿ ಬದುಕಲು ಸಾಧ್ಯವಿತ್ತೇ... ? ನಿಮಗೇಕೆ ಇತ್ತೀಚೆಗೆ ಇಂತಹ ದುಷ್ಟ ಆಲೋಚನೆಗಳು ಬರುತ್ತಿವೆ? ನಂಬಿಕೆ, ವಿಶ್ವಾಸಗಳಿಲ್ಲದ ನಿಮ್ಮೊಂದಿಗೆ ಸಹಬಾಳ್ವೆ ನಡೆಸುವುದಾದರೂ ಹೇಗೆ? ಇನ್ನುಮುಂದೆ ನೀವು ನನ್ನ ಹಾಸಿಗೆಯತ್ತ ಹಾಯಬೇಡಿ, ಧರ್ಮ ಸಮ್ಮತವಾಗಿ ನಿಮ್ಮೊಂದಿಗೆ ವಿವಾಹವಾಗಿರುವುದರಿಂದ ಆದರ್ಶ ಪತ್ನಿಯಾಗಿ ಹೇಗೆ ನಡೆದುಕೊಳ್ಳಬೇಕೊ ನಡೆದುಕೊಳ್ಳುತ್ತೇನೆ. ಆದರೆ ರಾತ್ರಿಯ ಸಾಂಗತ್ಯದಿಂದ ದೂರವಿರುತ್ತೇನೆ. ನಿಮಗೆ ಸುಖ ಸಿಗುವಲ್ಲಿ ಹೋಗಲು ನಿಮಗೆ ಸರ್ವಸ್ವಾತಂತ್ರ್ಯವಿದೆ" ಎಂದು ಸರಿಯಾಗಿ ಉತ್ತರ ಹೇಳಿ ಬಾಯಿ ಮುಚ್ಚಿಸಿದಳಾದರೂ ರಾತ್ರಿಗಳು ಅವಳ ಪಾಲಿಗೆ ನರಕಯಾತನೆಯ ಕ್ಷಣಗಳಾದವು. ಗಂಡನೊಂದಿಗೆ ರಾತ್ರಿಯ ಒಡನಾಟ ತಪ್ಪಿದ್ದಕ್ಕಾಗಿ ಪರಿತಪಿಸಲಿಲ್ಲ. ಅವನು ಅವಾಹಿಸಿಕೊಂಡಿದ್ದ ಸಂಶಯಭೂತದ ಬಗ್ಗೆ ಯೋಚನೆ ಹರಿದಾಗಲೆಲ್ಲ ಅತೀವ ಸಂಕಟಪಡುತ್ತಿದ್ದಳು. ಅವಮಾನದಿಂದ ಕುಸಿದುಹೋಗುತ್ತಿದ್ದಳು.

ನಿಮಗೇನಾಗಿದೇಂತ ನನ್ನ ಪ್ರಾಣ ತೆಗೀತೀರಿ? ನಾನು ಓದಬೇಕೆಂದು ನಿಮಗೇಕೆ ಹಠ. ನಾನು ಓದಿ ಕಲಿತು ನೌಕರಿ ಮಾಡಬೇಕೇನು? ಈ ಮನೆಯಲ್ಲಿ ಯಾವ ಹೆಂಗಸರು ತಾನೇ ಓದಿದ್ದಾರೆ? ಬೆಳಗಿನಿಂದ ಗಾಣದೆತ್ತಿನಂತೆ ದುಡಿದು, ರಾತ್ರಿಯಾದರೂ ಒಂದಿಷ್ಟು ನಿದ್ದೆ ಮಾಡಿ ಹಗುರಾಗೋಣವೆಂದರೆ ನಿಮ್ಮದೊಂದು ಕಾಟ. ಇಂಗ್ಲೆಂಡಿಗೆ ಹೋಗಿ ಬಂದು ಹೊರಗಿನಿಂದಷ್ಟೇ ಬದಲಾಗಿದ್ದೀರಿ. ಹೆಂಗಸರನ್ನು ಅದರಲ್ಲಿಯೂ ಹೆಂಡತಿಯರನ್ನು ಗುಲಾಮರಂತೆ ನಡೆಸಿಕೊಂಡು, ನಿಮ್ಮಾಸೆಗಳನ್ನು ಅವರ ಮೇಲೆ ಹೇರಿದರೆ ಹೇಗೆ? ಇಷ್ಟೊಂದು ಒರಟಾಗಿ, ಹಠಮಾರಿಗಳಾಗಿ ಅಸೂಯೆ ಅನುಮಾನಗಳಿಂದ ನಮ್ಮ ಬದುಕುಗಳನ್ನೇಕೆ ಹಾಳು ಮಾಡುತ್ತೀರಿ" – ಒಚಿದೇ ಸಮನೆ ಒಂದಾದ ಮೇಲೊಂದು ಆರೋಪಗಳನ್ನು ಅವನ ಮೇಲೆ ಎಸೆದಳು.

ನಿನ್ನ ಹಿಂದಿನ ಕೆಲಸಗಳ ಬಗ್ಗೆ ನಾನು ಟೀಕಿಸುತ್ತಿಲ್ಲ. ಈಗ ನೀನು ಅಸ್ಪೃಶ್ಯನೆಂಬ ಕಾರಣಕ್ಕೆ ಪಾಯಿಖಾನೆ ಪಾತ್ರೆ ಶುಚಿ ಮಾಡಲು ಹಿಂಜರಿಯುತ್ತಿದ್ದೀಯ. ಬೇಸರ ಪಡುತ್ತಿದ್ದೀಯ ಸೇವೆಯ ಸಂದರ್ಭ ಬಂದಾಗ, ಕರ್ತವ್ಯದ ಅನಿವಾರ್ಯತೆ ಇದ್ದಾಗ ಹೀಗೆಲ್ಲ, ಜಾತಿ, ಪಾತಿಯ ಬಗ್ಗೆ ಯೋಚಿಸಬಾರದು. ಇದೂ ನನ್ನ ಮನೆ ಆಗಿರುವಾಗ ಇಂತಹದಕ್ಕೆಲ್ಲ ಅವಕಾಶವಿಲ್ಲ. ನನ್ನ ಮನೆಯಲ್ಲಿ ಮನಸ್ಸಿಲ್ಲದೆ ಮಾಡುವ

ಕೆಲಸವನ್ನು ನಾನು ಒಪ್ಪಿಕೊಳ್ಳುವುದಿಲ್ಲ." ಎಂದು ಗದರಿಸಿ ನುಡಿದ. ಆ ಕ್ಷಣಕ್ಕೆ ಕಸ್ತೂರಳಿಗೆ ಎಲ್ಲಿಲ್ಲದ ಧೈರ್ಯ ಬಂದು, ತನಗಾದ ಅವಮಾನದ ಹೊಡೆತದ ನೋವಿನಿಂದ ತಿರುಗಿ ಬಿದ್ದಳು. "ಹೌದು. ಇದು ನಿಮ್ಮ ಮನೆಯೇ! ಈ ಮನೆಯಲ್ಲಿ ನನಗೇನೂ ಕೆಲಸವಿಲ್ಲ ಅಲ್ಲದೆ ಈ ಮನೆಯಲ್ಲಿ ನನಗೆ ಯಾವ ಹಕ್ಕೂ ಇಲ್ಲ. ಸರಿಬಿಡಿ ಹೋಗುತ್ತೇನೆ. ನೀವೇ ಗೂಟ ಹೊಡೆದುಕೊಂಡು ಸುಖವಾಗಿರಿ. ಆದರೆ ನಿಮ್ಮ ಮಕ್ಕಳನ್ನು ಅನಾಥವಾಗಿಸದೆ ನೋಡಿಕೊಳ್ಳಿ" ಎಂದು ಸ್ವಲ್ಪ ಗಟ್ಟಿಯಾಗಿಯೇ ಮಾತಾಡಿದಳು.

ಕಸ್ತೂರಳ ಹೆಸರಿಗೆ ಹತ್ತು ಸಾವಿರ ರೂಪಾಯಿಗಳ ಒಂದು ಪಾಲಿಸಿ ಮಾಡಿಸಿದ. ಇದು ಕಸ್ತೂರಳಿಗೆ ಮಾಡಿಸುವ ಮುಂಚೆ ಗೊತ್ತಿರಲಿಲ್ಲ. ಆದರೆ ಈಗ ಈ ವಿಷಯ ತಿಳಿಸಿ ಅವಳ ಕೈಗೆ ಪಾಲಿಸಿ ಇತ್ತು ವಿವರಿಸಿದಾಗ ಮತ್ತೊಮ್ಮೆ ಅವಳು ಸಿಟ್ಟಾದಳು. ಕೊಟ್ಟ ಪಾಲಿಸಿಯನ್ನು ನಿರ್ಲಕ್ಷ್ಯದಿಂದ ಹಿಂತಿರುಗಿಸಿದಳು. ಅದು ಅವಳಿಗೆ ಅಪಸಕುನವೆನಿಸಿತು. ಪಾಲಿಸಿ ಹಣ ಬರುವುದು ಗಂಡ ಸತ್ತು ತಾನು ವಿಧವೆಯಾದಾಗ! ಗಂಡನ ಸಾವು, ವೈಧವ್ಯವೆನ್ನುವುದು ಆ ಕಾಲದ ಹೆನ್ಣುಮಕ್ಕಳಿಗೆ ಊಹಿಸಿಕೊಳ್ಳುವುದೂ ಭಯಾನಕವೇ! ಅಂಥಾದ್ದರಲ್ಲಿ ಈ ತುಂಡು ಕಾಗದ ಅವಳ ಕೈಗೆ ಕೊಟ್ಟು ತಾನು ಸತ್ತ ಮೇಲೆ, ಹಣ ತೆಗೆದುಕೊಳ್ಳುವ ಗಾಂಧಿಯ ವ್ಯವಸ್ಥೆಯನ್ನು ಧಿಕ್ಕರಿಸಿದಳು. ಅವನ ಮುಖದ ನೀರು ಇಳಿಸಲು ಮುಂದಾದಳು.

"ಏನೆಂದುಕೊಂಡಿದ್ದೀರಿ, ನಿಮ್ಮ ಹೆಂಡತಿಯನ್ನು ನಾನು ಸಾಯುವುದಕ್ಕೆ ಮೊದಲು ನೀವು ಸಾಯುತ್ತೀರಿ ಎಂದು ಹೇಗೆ ಊಹಿಸಿದಿರಿ? ಅದೂ ನೀವು ಹೊರಡುವುದಕ್ಕೆ ಮೊದಲು ಇಂಥ ಮಾತು, ಆಲೋಚನೆಗಳು ನನ್ನ ಮೇಲೆ ಏನು ಪರಿಣಾಮ ಬೀರಬಹುದೆಂದು ಯೋಚಿಸಿದ್ದೀರಾ?

ನಾನು ಯಾವತ್ತೂ ಹಾಸಿಗೆ ಸುಖಕ್ಕಾಗಿ ಹಪಹಪಿಸಲಿಲ್ಲ. ಅದು ಬೇಕೆನಿಸಿದ್ದು ನಿಮಗೆ ಮಾತ್ರವೇ ಹೊರತು ನನಗಲ್ಲ. ನಾನೆಂದೂ ಒನಪು ಒಯ್ಯಾರಗಳಿಂದ ನಿಮ್ಮಲ್ಲಿ ಬಂದು ನಿಂತು ಆಹ್ವಾನಿಸಲಿಲ್ಲ. ಹೆಸರು ಹೇಳಲು ನಾಲ್ಕು ಮಕ್ಕಳನ್ನು ಕೊಟ್ಟಿದ್ದೀರಿ. ಇನ್ನೂ ಈ ವಯಸ್ಸಿನಲ್ಲಿ ನಿಮ್ಮ ಸಹವಾಸಕ್ಕೆ ಹಾತೊರೆಯುತ್ತೇನೆಂದುಕೊಂಡಿರಾ? ಖಂಡಿತವಾಗಿಯೂ ನಾನೆಂದೂ ನಿಮ್ಮನ್ನು ಲೈಂಗಿಕ ಆಕರ್ಷಣೆಯ ಮೂಲಕ ಸೆಳೆದುಕೊಂಡು ನಿಮ್ಮ ನೈತಿಕ ಪತನಕ್ಕೆ ಕಾರಣವಾಗುವುದಿಲ್ಲ. ನಾನು ಹಿಂದೂಧರ್ಮದಲ್ಲಿ ಪತಿಯ ಅನುಸರಣೆಯಲ್ಲಿ ನಂಬಿಕೆ ಇಟ್ಟವಳು. ನಿಮ್ಮ ಬದುಕಿಗೆ ಪೂರಕವಾಗುತ್ತೇನೆಯೇ ಹೊರತಾಗಿ ಮಾರಕವಾಗಲಾರೆ" ಎಂದಳು.

"ಅಲ್ಲಾರಿ. ಛಗನ್‌ಲಾಲ ನಿಮಗೆ ಹೊಳೆದನೇ ಹೊರತು ನಿಮ್ಮ ಕಣ್ಮುಂದೆಯೇ ಆಶ್ರಮದಲ್ಲಿ ಎಷ್ಟೆಲ್ಲ ಕಷ್ಟಗಳನ್ನು ಸಹಿಸುತ್ತಾ ಸುಖವಾಗಿ ತಿನ್ನಲೂ ಮಲಗಲೂ ಸೌಕರ್ಯವಿಲ್ಲದೆ, ಬೆಳಗಿನಿಂದ ಸಂಜೆಯವರೆಗೆ ದುಡಿಯುತ್ತಾ ಬೆವರಲ್ಲಿ ತೊಯ್ದು, ದರಿದ್ರರಂತೆ ಬದುಕುತ್ತಿರುವ ನಿಮ್ಮ ಮಕ್ಕಳ ನೆನಪಾಗಲಿಲ್ಲವೆ? ನಿಮ್ಮ ನಾಲ್ಕೂ ಜನ ಮಕ್ಕಳಲ್ಲಿ ಕಡೆಯ ಪಕ್ಷ ಒಬ್ಬನಾದರೂ ಜೀವನದಲ್ಲಿ ಮೇಲೆ ಬರುತ್ತಿದ್ದನಲ್ಲ! ನಿಮ್ಮ ಮನಸ್ಸು ಮಕ್ಕಳ ಬಗ್ಗೆ ಅದೆಷ್ಟು ಕ್ರೂರವಾಗಿದೆ" ಎಂದು ನೋವಿನಿಂದ ನುಡಿದಳು.

ಕಸ್ತೂರಬಾ ಈ ಹೋರಾಟಕ್ಕೆ ಸೇರುವುದಕ್ಕೆ ಗಂಡನ ಜೊತೆ ಹಠ ಮಾಡಬೇಕಾಗಿ ಬಂದಿತ್ತು. ಬೇರೆ ಮಹಿಳೆಯರನ್ನು ಉದ್ದೇಶಿಸಿ ಗಾಂಧಿ ಮಾತನಾಡಿದ್ದನ್ನು ಕಸ್ತೂರಬಾ ಹೇಗೋ ಕೇಳಿಸಿಕೊಂಡಿದ್ದಳು. ತನಗೆ ಹೇಳಲಿಲ್ಲವೆಂದು ಒಳಗೆ ಸಿಟ್ಟು ಮಾಡಿಕೊಂಡಿದ್ದಳು. ತನ್ನನ್ನೇಕೆ ಈ ಹೋರಾಟದಲ್ಲಿ ಸೇರಿಸಿಕೊಳ್ಳುತ್ತಿಲ್ಲ. ತಾನು ಅದಕ್ಕೆ ಹೊರತೇ? ಅಥವಾ ತನ್ನಲ್ಲಿ ಕ್ಷಮತೆಯಿಲ್ಲವೆಂದು ಭಾವಿಸಿರುವನೋ ಹೇಗೆ? ಎಂದೆಲ್ಲ ಯೋಚಿಸಿ ನೊಂದುಕೊಂಡಿದ್ದಳು.

"ಏನು ಇದೆಲ್ಲ ಹೇಳಿ ನನ್ನನ್ನು ಹೆದರಿಸುತ್ತಿರುವಿರಾ? ನನ್ನನ್ನು ಹೇಡಿ ಎಂದು ಭಾವಿಸುತ್ತಿರುವಿರಾ? ಬೇರೆ ಹೆಣ್ಣು ಮಕ್ಕಳೆಲ್ಲಾ ಸತ್ಯಾಗ್ರಹ ಮಾಡಿ ಜೈಲಿಗೆ ಹೋಗಬಹುದಾದರೆ ನಾನೇಕೆ ಹೋಗಬಾರದು?

ಎಲ್ಲರಂತೆ ನಾವಿರಬೇಕೆಂದು ಹೇಳುವ ನೀವು ಹೆಂಡತಿ ಜೈಲಿಗೆ ಹೋಗುತ್ತಾಳಲ್ಲ ಎಂದು ಯಾಕೆ ಯೋಚಿಸಬೇಕು? ನೀವು ಜನನಾಯಕರು. ಅನ್ಯಾಯದ ವಿರುದ್ಧ ಹೋರಾಡಲೆಂದೇ ಬಂದವರು. ಅಂಥವರ ಹೆಂಡತಿಯಾಗಿ ಊರು ಹೊತ್ತಿ ಉರಿಯುತ್ತಿದ್ದರೆ ಎಲ್ಲೋ ಒಳಗೆ ಸೇರಿ ಅವಿತು ಕುಳಿತು ತಮಾಶೆ ನೋಡುವಂತಾದರೆ, ನಿಮ್ಮ ಹೆಮಡತಿಯಾಗಿರುವುದರ ಅರ್ಥವಾದರೂ ಏನು? ನಿಮ್ಮೆಲ್ಲ ಕೆಲಸಗಳಲ್ಲಿ ಸಹಭಾಗಿಯಾಗಿ ನಡೆದುಕೊಂಡು ಬರುತ್ತೇನೆಂದು ವಚನಕೊಟ್ಟು ಬಂದವಳಲ್ಲವೇ? ಗಂಡಂದಿರ ಕಷ್ಟ ಸುಖಗಳನ್ನು ನಾವು ಹೆಂಡತಿಯರು ಹಂಚಿಕೊಳ್ಳಬೇಡವೇ?

ತಾರಾಮತಿ, ಸೀತೆಯರಗ ಪರಂಪರೆಯಲ್ಲಿ ಬಂದವರಾಗಿ ಈಗ. ಅದೂ ನಮ್ಮ ಮಾನ, ಮರ್ಯಾದೆ, ಗೌರವಗಳು ಹರಾಜಾಗುತ್ತಿರುವಾಗ, ನಾನಾಗಲಿ, ಬೇರೆ ಯಾವ ವಿವಾಹಿತ ಹೆಣ್ಣಾಗಲಿ ದನಿಯೆತ್ತದಿದ್ದರೆ ತೀರ್ಪಿನ ವಿರುದ್ಧ ಪ್ರತಿಭಟಿಸದಿದ್ದರೆ, ಸ್ತ್ರೀ ಜಾತಿಗೆ ಅವಮಾನ" ಎಂದು ನಿರರ್ಗಳವಾಗಿ, ತರ್ಕಬದ್ಧವಾಗಿ ಮಾತಾಡಿದ್ದನ್ನು ಮೊದಲ ಬಾರಿಗೆ ಕೇಳಿಸಿಕೊಂಡ ಗಾಂಧಿ ದಂಗಾದ.

ಎಲ್ಲ ಮಹಿಳೆಯರೂ ಒಂದೇ ಕಡೆ ಇದ್ದಾರೆಂಬ ಸಮಾಧಾನವೊಂದನ್ನು ಬಿಟ್ಟರೆ ಬೇರೆ ಯಾವ ಸೌಕರ್ಯವೂ ಇರಲಿಲ್ಲ ಜೈಲಿನ ಊಟ ಅಸಹನೀಯವಾಗಿದ್ದುದರಿಂದ ಕಸ್ತೂರಬಾ ಕೂಡಾ ಸೇರಿದಂತೆ ಅನೇಕ ಮಹಿಳೆಯರು ತೀರಾ ತೀರಾ ಬಡಕಲಾಗಿದ್ದರು. ಆದರೂ ಅವರೊಳಗಿನ ಉತ್ಸಾಹ ಚೈತನ್ಯಗಳು ಮುಗಿದಿರಲಿಲ್ಲ. ಅವರಲ್ಲಿ ಒಟ್ಟು ಹದಿನಾರರ ಹೆಣ್ಣು ಮಗಳು ಬಹಳವಾಗಿ ದಣಿದು ಹೋಗಿದ್ದಳು. ಅವಳನ್ನು ನೋಡಿ ಕಸ್ತೂರಬಾ ಮತ್ತು ಗಾಂಧಿ ಅಧೀರರಾದರೂ ಬಿಡುಗಡೆಯಾಗಿ ಬಂದ ನಂತರ ಗಾಂಧಿ ವಳ್ಳಿಯಮ್ಮನನ್ನು ಭೇಟಿಯಾಗಿ, ಜೈಲಿಗೆ ಹೋದದ್ದಕ್ಕೆ ಪಶ್ಚಾತ್ತಾಪವಾಗುತ್ತಿದೆಯೇ ಎಂದು ಕೇಳಿದಾಗ, ನಗುನಗುತ್ತಲೇ ಅಗತ್ಯಬಿದ್ದರೆ ಮತ್ತೆ ಜೈಲಿಗೆ ಹೋಗಲು ಸಿದ್ಧಳಾಗಿದ್ದೇನೆ. ಅಲ್ಲಿಯೇ ಸಾಯಬೇಕಾಗಿ ಬಂದರೂ ಎದೆಗೆಡುವುದಿಲ್ಲ" ಎಂದು ಉತ್ತರಿಸಿದ್ದು ಗಾಂಧಿಯನ್ನು ದಿಗ್ಭ್ರಾಂತನನ್ನಾಗಿ ಮಾಡಿತ್ತು.

ತಟ್ಟನೆ ಸಮಯಕ್ಕಾಗಿ ಕಾಯುತ್ತಿದ್ದವಳು, "ಹೌದೌದು ದೊರೆಗಳು. ನಿಮ್ಮ ಮಾತು, ನಿಮ್ಮ ಆದೇಶಗಳನ್ನು ಶಿರಸಾವಹಿಸಿ ಮಾಡುವ ನಮ್ಮಂಥವರ ಸಹಾಯವೂ ಬೇಕಿಲ್ಲ. ಹಾಗೆಯೇ ನೀವೂ ಯಾರ ಸಹಾಯವೂ ಮಾಡುವುದಿಲ್ಲ. ಅದರಲ್ಲಿಯೂ ನಿಮ್ಮ ಮಕ್ಕಳಿಗೆ ಸಹಾಯ ಮಾಡುವುದೆಂದರೆ ನಿಮಗೆ ಚೇಳು ಕಡಿದ ಹಾಗೆ ಅಲ್ಲವೇ?" ಎಂದು ವ್ಯಂಗ್ಯದಿಂದ ಹೇಳಿದಳು.

ವಿಚಾರದಲ್ಲಿ ಕಲ್ಲಾಗಿರುವುದು_ ಅವನ ವಿಷಯ ಇರಲಿ, ಮಣಿಯನ್ನು ಇಲ್ಲಿಂದ ಶಿಕ್ಷೆಯ ಹೆಸರಿನಲ್ಲಿ ಓಡಿಸಿ ಬಿಟ್ಟಿರಲ್ಲ. ಅಲ್ಲಿ ಅವನನ್ನು ಕರೆದು ಮಣೆ ಹಾಕಿ, ಊಟ ತಿಂಡಿ ಕೊಟ್ಟು ಸಾಕುವವರು ಯಾರು? ಅವನಿಗೆ ಕೆಲಸ ಯಾರು ಕೊಡುತ್ತಾರೆ?" ನೀವು ನಿಯಮ, ಸಿದ್ಧಾಂತ ಆದರ್ಶಗಳ ಹೆಸರಿನಲ್ಲಿ ಮನುಷ್ಯತ್ವ ಮಾನವೀಯತೆಗಳನ್ನೇ ಮರೆಯುತ್ತಿದ್ದೀರಿ. ಅಹಿಂಸೆ, ಅಹಿಂಸೆ ಎಂದು ಬೊಬ್ಬೆ ಹಾಕುತ್ತೀರಿ. ಮನಸ್ಸಿಗೆ ನೋವುಂಟುಮಾಡುವುದು ಹಿಂಸೆಯಲ್ಲವೇ. ಚಳುವಳಿಗಳಲ್ಲಿ ಏಟು ತಿಂದು ಸುಮ್ಮನಿರಿ ಎನ್ನುತ್ತೀರಿ. ಆದರೆ ಮನಸ್ಸು ಮೈ ಮನಸ್ಸುಗಳನ್ನು ಒಂದೇ ಎಂದು ಭಾವಿಸಿದರೆ ನಿಮ್ಮ ಅಹಿಂಸೆಗೆ ಅರ್ಥವೇ ಇಲ್ಲ" ಎಂದು ಬಡಬಡನೆ ಮನಸ್ಸಿನಾಳದಲ್ಲಿ ಅಡಗಿ ಕುಳಿತಿದ್ದ ಮಾತುಗಳನ್ನೆಲ್ಲ ಒಮ್ಮೆಲೇ ಹೊರಹಾಕಿಬಿಟ್ಟಳು.

"ಹೂಂ, ನಿಮ್ಮದು ಇದು ಮಾಮೂಲೇ! ಮಾತು ಮಾತಿಗೂ ಉಪವಾಸವೆಂಬ ಮಹಾಸ್ತ್ರವನ್ನು ಬ್ರಹ್ಮಾಸ್ತ್ರವನ್ನು ಎಸೆದುಬಿಡುತ್ತೀರಿ. ಇದರಿಂದ ಎಷ್ಟು ಜನ ತಲ್ಲಣಕ್ಕೆ ಉದ್ವಿಗ್ನತೆಗೆ ಗಾಭರಿಗೆ ಒಳಗಾಗುತ್ತಾರೆಂಬ ಅರಿವಿದೆಯೇ ನಿಮಗೆ? ಬೇರೆ ದಾರಿಗಳು ನಿಮಗೆ ಹೊಳೆಯುವುದೇ ಇಲ್ಲವೆ?" ಎಂದು

ಬಡ ಬಡಮಾತನಾಡಿದಳು. ಒದ್ದುಕೊಂಡು ಬರಲಿದ್ದ ಕಂಬನಿಯನ್ನು ಹಾಗೆಯೇ ಅದುಮಿ ಒಳಸರಿಸಿದಳು. ಮಾತು ಮುಂದುವರಿಸಿದಳು.

"ನೀವು ಉದ್ದೇಶಿಸುವ ಕೆಲಸಗಳು ಮುಗಿಯುವ ಮೊದಲೇ ನೀವು ಸಾವನ್ನು ಸ್ವಯಂ ಇಚ್ಛೆಯಿಂದ ಬರಮಾಡಿಕೊಳ್ಳುವುದಾದರೆ, ನೀವು ಏನನ್ನು ಸಾಧಿಸಿದಂತೆ? ನಿಮ್ಮ ಸಾವಿನಿಂದ ಅವರೆಲ್ಲರೂ ತಮ್ಮ ಹಕ್ಕುಗಳ ರಕ್ಷಣೆಗಾಗಿ, ತಮ್ಮ ಮೇಲಿನ ದೌರ್ಜನ್ಯ, ದಬ್ಬಾಳಿಕೆ ಅತ್ಯಾಚಾರಗಳ ವಿರುದ್ಧವಾಗಿ ಹೋರಾಡ ಬೇಕೆಂದು ಹುರಿದುಂಬಿಸಿದಳು.

ಗಾಂಧಿ 'ಬಾ'ಗೆ ತನ್ನ ಜೊತೆ ಬಂದು ಇರುವ ಮನಸ್ಸಿದ್ದರೆ ರಾಜಾಧಿಕಾರಿಗಳನ್ನು ಕೇಳಿ ವ್ಯವಸ್ಥೆ ಮಾಡುವುದಾಗಿಯೂ ಹೇಳಿ ಕಳಿಸಿದ್ದ.

ಆದರೆ 'ಬಾ' ಹಾಗೆ ಮಾಡಲು ಒಪ್ಪಲಿಲ್ಲ. ಗಂಡನ ತತ್ವಾದರ್ಶಗಳಿಗೆ ಬದ್ಧಳಾಗಿದ್ದವಳಿಗೆ ಪರಿಸ್ಥಿತಿಯ ಬಗ್ಗೆ ತರ್ಕಬದ್ಧವಾಗಿ ಆಲೋಚಿಸುವಷ್ಟು ಸಾಮರ್ಥ್ಯವಿತ್ತು. ತಾನೊಬ್ಬಳು ಬಿಡುಗಡೆ ಬಯಸಿ, ಗಂಡನ ನೆಪದಲ್ಲಿ ಹೊರಗೆ ಬರುವುದೆಂದರೆ, ಸತ್ಯಾಗ್ರಹದ ಸಿದ್ಧಾಂತಗಳಿಗೆ ದ್ರೋಹಮಾಡಿದಂತೆ ಎಂದೆನಿಸಿ, ಬರುವ ಅಪಾಯಗಳಿಗೆ ಎದೆಯೊಡ್ಡಿ ನಿಲ್ಲುವ ನಿರ್ಧಾರವನ್ನು ಮಾಡಿದಳು. ಮತ್ತು ಗಂಡನಿಗೂ ಅದನ್ನು ಹೇಳಿಕಳಿಸಿದಳು.

ಶಿವಾಜಿ ಪಾರ್ಕ್‌ನಲ್ಲಿ ಲಕ್ಷಾಂತರ ಜನರಿಂದ ತುಂಬಿ ತುಳುಕಾಡುತ್ತಿತ್ತು ಕಸ್ತೂರ ಬಾ ಳ ಭಾಷಣ ಕೇಳಲು ಕಾತರವಾಗಿದ್ದರು. ಅವರ ನಡುವಿನಿಂದ ಬಾ ನಡೆದು ವೇದಿಕೆ ಹತ್ತಿ "ಗಾಂಧಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮುಂದೆ ತಮ್ಮ ಹೃದಯ ಭಾವನೆಗಳನ್ನೆಲ್ಲ ತೋಡಿಕೊಂಡಿದ್ದಾರೆ. ಅದಕ್ಕೆ ಪ್ರತ್ಯೇಕವಾಗಿ ನಾನು ಹೇಳುವ ಮಾತುಗಳನ್ನು ಸೇರಿಸಬೇಕಾದ್ದಿಲ್ಲ, ನಾವು ಮಾಡುವುದೇನಾದರೂ ಇದ್ದರೆ, ಅವರು ನಿರ್ದೇಶಿಸಿದ ಮಾರ್ಗದಲ್ಲಿ ನಡೆಯುವುದಷ್ಟೇ. ಭಾರತದ ಮಹಿಳೆಯರು ತಮ್ಮ ಶಕ್ತಿ ಸಾಮರ್ಥ್ಯವನ್ನು ತೋರಿಸಲು ಇದೆ ಸಮಯ ಅವರೆಲ್ಲರೂ ಒಗ್ಗೂಡಿ, ಜಾತಿ ವರ್ಗ ಭೇದಗಳನ್ನು ಮರೆತು ಐಕ್ಯಮತದಿಂದ ಹೋರಾಡಬೇಕು. ಆದರೆ ಗಸತ್ಯ ಮತ್ತು ಅಹಿಂಸೆಯೇ ನಮ್ಮ ಉಸಿರಾಗಬೇಕು." ಎಂದು ಹೇಳಿ ನಿಲ್ಲಿಸಿದ್ದೇ ಜೋರಾದ ಕಿವಿಗಡಚಿಕ್ಕುವ ಕರತಾಡನ ಕೇಳಿ ಬಂತು. ಕರತಾಡನದ ಸದ್ದು ಮುಂದುವರೆಯುತ್ತಿದ್ದಂತೆಯೇ ಬಾ ವೇದಿಕೆ ಇಳಿದು ಕಾರಿನ ತನಕ ನಡೆದು ಬಂದಳು. ಕಾರಿನ ಬಾಗಿಲು ತೆಗೆಯಲು ಯತ್ನಿಸುತ್ತಿರುವಾಗ ಪೊಲೀಸೊಬ್ಬನು ಅಡ್ಡಗಟ್ಟಿ,

'ಅಲ್ಲ ತಾಯಿ ಈ ವಯಸ್ಸಿನಲ್ಲಿ ಮನೆಯಲ್ಲಿ ಇರುವುದು ಬಿಟ್ಟು ನಿಮಗ್ಯಾಕೆ ಉಸಾಬರಿ?' ಎಂದ.

ಅವನ ಮಾತಿನ ವ್ಯಂಗ್ಯ ಬಾಗೆ ಅರ್ಥವಾಯಿತು. "ಹೋಗುತ್ತೇನೆ. ಮತ್ತೆ ಮತ್ತೆ ಹೋಗಿ ಭಾಷಣ ಮಾಡುತ್ತೇನೆ. ನಿಮ್ಮ ಭಯ ನನಗಿಲ್ಲ."

ಸ್ತ್ರೀ ಶಕ್ತಿಯ ಅಖಂಡತೆಯನ್ನು ಗುರುತಿಸಿದ. ತ್ಯಾಗ, ಬಲಿದಾನಗಳ ಪ್ರತೀಕವೇ ಹೆಣ್ಣು: ಅವಳು ಮನಸ್ಸು ಮಾಡಿದಲ್ಲಿ ಜಗತ್ತನ್ನೇ ಬದಲಾಯಿಸಲು ಸಾಧ್ಯ, ಅವಳೆಂದೂ ಪುರುಷನ ಗುಲಾಮಳಲ್ಲ; ಪುರುಷನ ಸರಿಸಾಟಿ' ನಿರ್ಭೀತಿಯಿಂದ ಇದ್ದಾಗ ಮಾತ್ರವೇ ಅವಳಿಗೆ ಬಿಡುಗಡೆ ಸಾಧ್ಯ. ಶತಮಾನಗಳಿಂದ ಕೂಡಿಹಾಕಿದ್ದ ಅಜ್ಞಾನದ ಅಹಂಕಾರ ಕೂಪದಿಂದ ಹೊರಗೆದ್ದು ಬರಲು, ತನ್ನ ಸ್ವಂತಿಕೆ ಅನನ್ಯತೆಗಳನ್ನು ಅರ್ಥಮಾಡಿಕೊಳ್ಳಲು ವಿದ್ಯಾಭ್ಯಾಸದ ಅತ್ಯಗತ್ಯತೆಗಳನ್ನು ಅರ್ಥಮಾಡಿಕೊಳ್ಳಲು ವಿದ್ಯಾಭ್ಯಾಸದ ಅಗತ್ಯತೆಯಿದೆ; .....ಮಹಿಳೆಯರನ್ನು ಸೂತ್ರದ ಬೊಂಬೆಗಳಾಗಿ ಭಾವಿಸದೆ, ತಮಗೆ ಎಲ್ಲ ರೀತಿಯಿಂದಲೂ ಸರಿಸಮಾನರೆಂದು

ಭಾವಿಸುವುದನ್ನು ಪುರುಷರು ಕಲಿಯಬೇಕು .... ಎಂದೆಲ್ಲ, ಮಹಿಳೆಯರ ಬಗ್ಗೆ ಉದಾತ್ತ ಆಲೋಚನೆಗಳನ್ನು ಬೆಳೆಸಿಕೊಳ್ಳುವಲ್ಲಿ ಗಾಂಧಿಯ ಮುಂದೆ ನಿದರ್ಶನವಾಗಿ ಇದ್ದದ್ದೆಂದರೆ ಕಸ್ತೂರಬಾ!!

ಕನ್ನಡ ಮಹಿಳಾ ಸಾಹಿತ್ಯವೂ ಸ್ತ್ರೀಯಾತ್ಮಕ ಚಿಂತನೆಯಲ್ಲಿಯೇ ಆರಂಭವಾಗಿದೆ. ತನಗಾದ ಅನ್ಯಾಯ ಮೊದಲು ಕಂಡುಕೊಳ್ಳಲು ನಂತರ ತನ್ನ ಮೇಲೆ ಹೇರಿದ ಒತ್ತಾಯದ ಸಂಪ್ರಾದಯಗಳ ಬಗ್ಗೆ ಸಿಡಿದೆದ್ದಳು. ಅವುಗಳನ್ನು ಬದಿಗೆ ಸರಿಸಿ ಬದುಕಲು ಮುಂದೆ ಬಂದಳು. ತಾನು ಸುಧಾರಣೆಯಾದ ಮೇಲೆ ಮುಂದಿನ ಪೀಳಿಗೆಯ ಬಗ್ಗೆ ತನ್ನ ಹತ್ತಿರದಲ್ಲಿದ್ದ ಸಮಾಜವನ್ನು ಸುಧಾರಿಸಲು ಪ್ರಯತ್ನ ಪಟ್ಟಳು. ಪುರುಷನೆಂಬ ಲಿಂಗಬೇದ ಕಡೆಗಣಿಸಿ ಕೇವಲ ಮಾನವಳಾಗಿ ಮಾನವೀಯ ಮೌಲ್ಯವನ್ನು ಬೆಸುಗೆಯ ಬಂಧನದಲ್ಲಿ ಕಾದಂಬರಿಯಲ್ಲಿ ಸ್ತ್ರೀ ಛಲ, ಇಚ್ಚಾಶಕ್ತಿ, ಕರ್ತೃತ್ವಗಳ ಮೂಲಕ ತನ್ನ ಬದುಕನ್ನು ಸುತ್ತವರೆದ ಸಾಂಪ್ರಾದಾಯಿಕ ದಿಗ್ಬಂದನಗಳನ್ನು ಮೀರಿ ಬೆಳೆಯಬಹುದೆಂಬ ಸಾಧ್ಯತೆಯನ್ನು ಸೃಷ್ಟಿಸಿದರು. ಇಲ್ಲಿ ಮೀರುವಿಕೆ ಬರೀ ಕ್ರಾಂತಿಕಾರತೆಯಾಗಿರದೆ ರಚನಾತ್ಮಕತೆಯಾಗಿರುವುದು ವಿಶೇಷ.

ಸಮಾರೋಪ

ಸಮಾರೋಪ

"ಹೆಣ್ಣು ಕುಟುಂಬದ ಕಣ್ಣು" ಎಂಬ ನಾಣ್ನುಡಿಯಂತೆ ಬಹಳಷ್ಟು ಜನ ಸಾಧಕರ ಅದ್ವಿತೀಯ ಸಾಧನೆಯ ಹಿಂದೆ ಒಂದಲ್ಲ ಒಂದು ವಿಧವಾಗಿ ಅಂದರೆ ಮಾತೆಯಾಗಿ, ಅರ್ಧಾಂಗಿಯಾಗಿ, ಸಹೋದರಿಯಾಗಿ, ಗೆಳತಿಯಾಗಿ ಹೆಣ್ಣಿನ ಪ್ರೇರಣೆ ಪ್ರಮುಖವಾಗಿರುವುದನ್ನು ನಾವು ಇತಿಹಾಸದಲ್ಲಿ ಗಮನಿಸಬಹುದಾಗಿದೆ. ಭೂಮಿ, ಜಲ, ಲಕ್ಷ್ಮಿ, ಶಾರದೆ ಎಲ್ಲವೂ ಹೆಣ್ಣು. ಹೆಣ್ಣಿಗೆ ಕ್ಷಮಯಾಧರಿತ್ರಿ ಹಾಗೂ ಶಕ್ತಿಶಾಲಿಯಾಗಿ ಪ್ರಾಚೀನ ಕಾಲದಿಂದಲೂ ಗುರುತಿಸುತ್ತಾ ಬಂದಿದ್ದಾರೆ. ಹಾಗೆಯೇ ಕುಟುಂಬದಲ್ಲಿಯೂ ಕೂಡ ಹೆಣ್ಣಿಗೆ ವಿಶೇಷ ಸ್ಥಾನಮಾನವನ್ನು ಕೊಟ್ಟಿರುವುದನ್ನು ಕಾಣುತ್ತೇವೆ.

ಗಂಡ-ಹೆಂಡತಿ ಒಂದು ಗಾಡಿಯ ಎರಡು ಚಕ್ರಗಳಿದ್ದ ಹಾಗೆ. ಸಂಸಾರದಲ್ಲಿ ಇಬ್ಬರೂ ಸಹಭಾಗಿಗಳು. ಒಬ್ಬರನ್ನೊಬ್ಬರು ಅರಿತು ಪರಸ್ಪರ ಹೊಂದಾಣಿಕೆಯಿಂದ ಸಹಬಾಳ್ವೆ ನಡೆಸಿದರೆ ಗೃಹಸ್ಥ ಜೀವನ ಸಾರ್ಥಗಕವಾಗುತ್ತದೆ. ಆದ್ದರಿಂದ ಹಿರಿಯರು ಕುಟುಂಬವನ್ನು ವ್ಯವಸ್ಥಿತವಾಗಿ ರೂಪಿಸಿದ್ದಾರೆ. ಸಂಸಾರ ಸುಖದ ಸುಪ್ಪತ್ತಿಗೆಯಲ್ಲಿ ಅಲ್ಲಿ ನೋವು-ನಲಿವು, ಸುಖ-ದುಃಖ, ಸೋಲು-ಗೆಲವುಗಳ ಸಂಗಮ. ಬಡತನ-ಸಿರಿತನ, ನೆಮ್ಮದಿ-ಅಶಾಂತಿ ಬದುಕಿನ ವ್ಯರಾಗ್ಯವನ್ನು ಸೀಮಿತ ಪಾತ್ರಗಳಲ್ಲಿಯೇ ಯಶಸ್ವಿಯಾಗಿ ಚಿತ್ರಿಸಲಾಗಿದೆ. ಬದುಕಿನ ಎಲ್ಲಾ ಹಂತಗಳಲ್ಲೂ ಕೌಟುಂಬಿಕ ವರ್ಗ ಹಾಗೂ ಸುತ್ತಮುತ್ತಲಿನ ಪರಿಸರ ತಮ್ಮ ಅಗತ್ಯವನ್ನು ಧೋರಣೆಗಳನ್ನು ಹೇರುತ್ತಲೇ ಬರುತ್ತದೆ. ಸಮಾಜದಲ್ಲಿ ವ್ಯಕ್ತಿಯ ಬದುಕು ಅವನದ್ದು ಮಾತ್ರವೇ ಆಗಿರದೇ ಉಳಿದವರನ್ನು ಕೂಡ ಆಗುತ್ತದೆ.

ಸಾಹಿತ್ಯ ಕ್ಷೇತ್ರದಲ್ಲಿ ಹಿಂದಿನಿಂದ ಅಭಿವ್ಯಕ್ತವಾಗಿರುವ ಆಯಾ ಕಾಲದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಜೀವನಕ್ಕೂ ನಿಕಟ ಸಂಬಂಧವಿದ್ದು ವಾಸ್ತವ ವಾದದ ವಿಚಾರದಾರೆಯು ಬಹುಮಟ್ಟಿಗೆ ಸಾಹಿತ್ಯಕ ಕ್ರಿಯೆಯನ್ನು ರೂಪಿಸುತ್ತದೆ. ಸಾಹಿತ್ಯ ಕೃತಿ ಸಹೃದಯನನ್ನು ತನ್ನ ಸಾಮಾಜಿಕ ಸಂದರ್ಭದಲ್ಲಿ ತನ್ನು ತಾನು ಪರಿಶೀಲಿಸಿಕೊಳ್ಳುವಂತೆ ಮಾಡಿ ತನ್ನ ನಿಜ ಸ್ಥಿತಿಯನ್ನು ಅನುಭವಿಸಲು ಎಡೆ ಮಾಡಿಕೊಡುತ್ತದೆ.

ಪ್ರಸ್ತುತ ಡಾ॥ ವಿಜಯ ಸುಬ್ಬರಾಜ್‌ರವರ 'ಬೆಸುಗೆಯ ಬಂಧನ'ದಲ್ಲಿ ಕೃತಿಯು ಕಾದಂಬರಿಯೂ ಹೌದು. ದಾಂಪತ್ಯ ಕಥನ, ದಾಂಪತ್ಯ ಚರಿತ್ರೆಯು ಹೌದು. ಈ ಕಾದಂಬರಿಯಲ್ಲಿ ಕಸ್ತೂರ ಬಾ ರವರ ಪಾತ್ರದ ಮೂಲಕ ಸ್ತ್ರೀ ಸಂವೇದನೆಯ ನೆಲೆಗಳನ್ನು ಎತ್ತಿ ತೋರಿಸುವ ಪ್ರಯತ್ನ ಮಾಡಲಾಗಿದೆ. ವ್ಯಕ್ತಿಗತ ಅಹಮಿಕೆಯನ್ನು ತೊರೆದಲ್ಲಿ ದಾಂಪತ್ಯದಲ್ಲಿ ಸಂಘರ್ಷ, ವಾದ, ವಿವಾದ, ಭಿನ್ನಾಭಿಪ್ರಾಯ, ಸಿಟ್ಟು, ಸೆಡವುಗಳನ್ನು ಮೀರಿಯು ಸಾಮರಸ್ಯದ ತಂಗಾಳಿಯ ಆಹ್ಲಾದಕ್ಕೆ ಎಂದಿಗೂ ಕೊರತೆಬಾರದು. ಪರಸ್ಪರ ನಡುವೆ ಬದ್ಧತೆಯಿದ್ದಲ್ಲಿ ಎಂದಿಗೂ ದಾಂಪತ್ಯದ ಬೆಸುಗೆಯಲ್ಲಿ ಬಿರುಕು ಬರುವ ಸಾಧ್ಯತೆಯೇ ಇರುವುದಿಲ್ಲ. ಎನ್ನುವ ಭಾವ ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ.

ಗಾಂಧಿಯಂತಹ ನಿಷ್ಠುರ ಗಂಡನೊಂದಿಗೆ ಬದುಕುವುದು ಕ್ಷಣ ಕ್ಷಣಕ್ಕೂ ಕಸ್ತೂರ ಬಾ ಗೆ ಅಗ್ನಿ ಪರೀಕ್ಷೆಯಂತೆ ಇತ್ತು. ಸನಾತನ ಪರಂಪರೆಯಲ್ಲಿ. ಸಂಪ್ರದಾಯಸ್ಥ ಪರಿಸರದಲ್ಲಿ ಬೆಳೆದವಳು. ಅವಳು ಕಲಿತದ್ದು. ಗಂಡನಿಗೆ ವಿಧೇಯಳಾಗಿ. ಅವನ ಹೆಜ್ಜೆ ಜಾಡಿನಲ್ಲಿ, ಅವನ ಮನಸ್ಸು ಮರ್ಜಿಗಳನ್ನು ಅನುಸರಿಸಿ, ಬದುಕಬೇಕೆಂಬ ನೀತಿಯನ್ನು ಅವನನ್ನು ಪ್ರಶ್ನಿಸುವುದಾಗಲೀ, ಪ್ರತಿಭಟಿಸುವುದಾಗಲೀ ಹೆಂಡತಿಯ ಹಕ್ಕಿನ ವ್ಯಾಪ್ತಿಗೆ ಬರುವಂಥದ್ದೇ ಅಲ್ಲ. ಅವನ ಬದುಕಿನ ಆಶಯಗಳನ್ನು ಪೂರೈಸುವಲ್ಲಿ, ಆದರ್ಶಗಳ ಅನುಸಂಧಾನದಲ್ಲಿ ಸಹಕರಿಸಬೇಕೆಂಬುದಷ್ಟೇ ತನ್ನ ಜೀವನದ ಧ್ಯೇಯವಾಗಿ ಇರಿಸಿಕೊಳ್ಳಬೇಕೆಂಬ ತತ್ವಕ್ಕೆ ಬದ್ಧಳಾಗಿ ಬಾಳುವುದನ್ನೇ ರೂಡಿಸಿಕೊಂಡಿದ್ದವಳು ಕಸ್ತೂರಬಾ. ಅದ್ದರಿಂದಲೇ ಗಂಡ ತನ್ನೊಡನೆ ಎಷ್ಟೇ ಕ್ರೂರವಾಗಿ ನಡೆದುಕೊಂಡರೂ, ರೇಗಾಡಿದರೂ, ಕೂಗಾಡಿದರೂ, ಸಣ್ಣವರ, ದೊಡ್ಡವರ, ಸರೀಕರ ಮುಂದೆ

ಅವಮಾನ ಮಾಡಿದರೂ ನಂಜನ್ನು ನುಂಗಿದ ನಂಜುಂಡನಂತೆ, ಬಾಳುತ್ತಲೇ, ಮನೆ, ಮಕ್ಕಳು, ಆಶ್ರಮವಾಸಿಗಳ ಜವಾಬ್ದಾರಿಗಳನ್ನು ಹೆಗಲಿಗಿರಿಸಿಕೊಂಡೇ, ಅವನ ಸಿದ್ಧಾಂತಗಳಿಗೆ ಬದ್ಧಳಾಗಿ, ಅವನೆಲ್ಲ ಕೆಲಸ ಕಾರ್ಯಗಳಲ್ಲಿ ಹೋರಾಟಗಳಲ್ಲಿ, ಚಳುವಳಿಗಳಲ್ಲಿ ಸತ್ಯಾಗ್ರಹಗಳಲ್ಲಿ, ಸ್ವಯಂ ಸೇವಾಕಾರ್ಯಗಳಲ್ಲಿ, ಗ್ರಾಮೋದ್ಧಾರದ ಕೆಲಸಗಳಲ್ಲಿ, ಗ್ರಾಮೀಣ ಮಹಿಳೆಯರಲ್ಲಿ ಜಾಗೃತಿ ಮೂಡಿಸುವಲ್ಲಿ, ಅಕ್ಷರ ಕಲಿಸುವಲ್ಲಿ, ಹರಿಜನ ಸೇವೆಯಲ್ಲಿ . ಖಾದಿ ಪ್ರಚಾರದಲ್ಲಿ – ಹೀಗೆ ಒಂದಲ್ಲ ಎರಡಲ್ಲ, ನೂರೆಂಟು ಬಗೆಯ ಕೆಲಸಗಳಲ್ಲಿ, ದಕ್ಷತೆಯಿಂದ, ಬದ್ಧತೆಯಿಂದ, ದೇಹಬಲ ಎಷ್ಟೋ ಬಾರಿ ಸಹಕರಿಸದಿದ್ದರೂ, ಆತ್ಮಬಲದಿಂದ ಕ್ರಿಯಾಶೀಲತೆಯಿಂದ ತೊಡಗಿಸಿಕೊಂಡು, ದಕ್ಷಿಣ ಆಫ್ರಿಕಾದ ಭಾರತೀಯರ ಕಣ್ಣಲ್ಲಿ, ದೇಶವಾಸಿಗಳ ಮನದಲ್ಲಿ ಗೌರವಾದರ, ಪ್ರೀತಿಗಳನ್ನು ಸಂಪಾದಿಸಿದ್ದಳು. ಹಾಗೆ ನೋಡಿದರೆ ಗಾಂಧಿಯ ಪ್ರೀತಿ, ಗೌರವಗಳನ್ನು ಗಳಿಸುವಲ್ಲಿಯೂ ಯಶಸ್ವಿಯಾದಳು.

ಗಾಂಧಿಯ ಧ್ಯೇಯೋದ್ದೇಶಗಳನ್ನು ಪೂರೈಸುವಲ್ಲಿ, ಅವಳ ನಿಸ್ವಾರ್ಥ ನಿಷ್ಠೆ, ಸಮರ್ಪಣಭಾವ, ಗಂಡನಿಗಿಂತಲೂ ಎತ್ತರಕ್ಕೆ ಬೆಳೆದ ಸಾಮರ್ಥ್ಯ, ಸ್ತ್ರೀ ಸಮುದಾಯಕ್ಕೇ ಪ್ರತೀಕವೆಂಬಂತೆ ರೂಪುಗೊಂಡ ವ್ಯಕ್ತಿತ್ವ, ದೇಶಸೇವೆ, ಜನಸೇವೆಯ ದುರಂಧರತೆ, ಮುಂತಾದವುಗಳನ್ನು ಬಣ್ಣಿಸಿದ್ದರೆ, ಮತ್ತೆ ಕೆಲವರು, ಯಾವುದೇ ಸುಖ ಸೌಲಭ್ಯಗಳಿಗೆ ಹಪಹಪಿಸದೆ ಸದಾ ಗಂಡನ ನಿರೀಕ್ಷೆಗಳ ಎತ್ತರಕ್ಕೆ ಬೆಳೆಯಬೇಕೆಂಬ ವ್ರತನಿಷ್ಠೆಯನ್ನೇ ಸಂತೋಷವೆಂದು ಭಾವಿಸಿಕೊಂಡವಳೆಂದೂ ಆಶ್ರಮದ ಆತ್ಮವಾಗಿ ಜೀವಿಸಿದವಳೆಂದೂ, ಗಾಂಧಿಯ ಯಶಸ್ಸಿನ ಹಿಂದಿನ ಚೈತನ್ಯವೇ ಅವಳೆಂದೂ, ನಿಸ್ವಾರ್ಥ ತ್ಯಾಗ ಬಲಿದಾನಗಳ ದ್ಯೋತಕವೆಂದೂ, ಪರಿಶುದ್ಧಾತ್ಮಳೆಂದೂ ಮೂರ್ತಿ ಚಿಕ್ಕದಾದರೂ ರಾಜಕೀಯ ಅಂದೋಲನದ ಮುಂಚೂಣಿಯಲ್ಲಿದ್ದು ಸಮರ್ಥವಾಗಿ ಮುನ್ನಡೆಸಿದ ಕೀರ್ತಿ ಅವಳದೆಂದೂ ಮುಕ್ತವಾಗಿ ಹಾಡಿ ಕೊಂಡಾಡಿದ್ದಾರೆ.

ಇಂತಹ ಅಖಂಡ ವ್ಯಕ್ತಿತ್ವದ ಅದಮ್ಯ ಚೈತನ್ಯದ ಕಸ್ತೂರಳ ಬಗ್ಗೆ. ಅವಳ ಬದುಕಿನ ಸಮಗ್ರ ಚಿತ್ರವನ್ನು ಕಟ್ಟಿಕೊಡುವ, ಗಾಂಧಿಯಂತಹ ನಿಷ್ಠುರ ವ್ಯಕ್ತಿಯ ಜೊತೆಗಿನ ದೀರ್ಘ ದಾಂಪತ್ಯದ ಅವಧಿಯಲ್ಲಿ, ವಿದ್ಯಾಭ್ಯಾಸವಿಲ್ಲದ ಅಬೋಧ, ಸಂಪ್ರದಾಯಸ್ಥ, ಮಡಿವಂತಿಕೆಯ ಮನಸ್ಸಿನ ಕಸ್ತೂರಬಾಗೆ ಬದುಕು ಹೂವಿನ ಹಾದಿಯಾಗಿರಲಾರದು. ಗಂಡ ತನ್ನ ಉನ್ನತ ಶಿಕ್ಷಣ, ಉದಾತ್ತ ನಿಲುವು, ನಿಷ್ಠುರವಾದ ನೈತಿಕ ನಿಯಮಗಳು ಶಿಸ್ತು, ಸಂಯಮ, ಸಿದ್ಧಾಂತಗಳು, ರಾಜಕೀಯ ವಿಚಾರಗಳು, ಸಾಮಾಜಿಕ, ಆರ್ಥಿಕ ಚಿಂತನೆಗಳು – ಮುಂತಾದವುಗಳಿಂದ ಮಹೋನ್ನತ ವ್ಯಕ್ತಿಯಾಗಿ ಬೆಳೆಯುತ್ತಿರುವಾಗ, ಯಾವ ರೀತಿಯಿಂದಲೂ ಅವನಿಗೆ ಸರಿಸಾಟಿಯಾಗಲಾರದವಳು ಎನಿಸಿದ್ದವಳು. ತನ್ನ ಸುಪ್ತ ಶಕ್ತಿ, ಸಾಮರ್ಥ್ಯಗಳಿಂದ, ಹಠದಿಂದ ಅವನಲ್ಲಿನ ದೌರ್ಬಲ್ಯಗಳನ್ನು ಮರೆತು ಅವನ ಅರಿವಿಗೂ ಬಾರದ ರೀತಿಯಲ್ಲಿ, ತನ್ನೊಳಗೊಬ್ಬ ದೈತ್ಯ ಸತ್ಯಾಗ್ರಹಿಯನ್ನು ರೂಪಿಸಿಕೊಂಡು, ಅವನನ್ನೇ ಬೆಚ್ಚಿ ಬೀಳಿಸುವಂತಹ ರೀತಿಯಲ್ಲಿ ಬೆಳೆದು, ಅವಳೂ ಅವನಂತೆಯೇ ಜಗಮಾನ್ಯಳಾದಳು. ಆದರೆ ಇದು ಅವಳ ಹೊರಗಿನ ನೋಟಕ್ಕೆ ದಕ್ಕುವ ವ್ಯಕ್ತಿತ್ವದ ಚಿತ್ರ. ಅವಳಿಗೊಂದು ಅಂತರಂಗವಿದೆ. ಅಂತರಂಗದಲ್ಲಿ ಹೇಳಿಕೊಳ್ಳಲಾಗದ ನೋವು, ಸಂಕಟಗಳಿವೆ. ಗಂಡ ಮಕ್ಕಳ ಸಂಬಂಧಗಳ ನಡುವೆ ಅನೇಕ ಸನ್ನಿವೇಶ ಸಂದರ್ಭ, ಘಟನೆಗಳು ನಡೆದಿವೆ. ಇವುಗಳಲ್ಲಿ ಸಂಘರ್ಷಗಳಿವೆ. ಮಾತಿನ ಚಕಮಕಿಯಿದೆ; ವಾಗ್ವಾದಗಳಿವೆ. ಬಿನ್ನಾಭಿಪ್ರಾಯಗಳಿವೆ. ಆಕ್ರೋಶ, ಅತೃಪ್ತಿ, ಅವಮಾನ, ಅವಹೇಳನವಿದೆ. ಆಗೆಲ್ಲ, ತಾಯಿಯಾಗಿ, ಹೆಂಡತಿಯಾಗಿ ಎದುರಿಸಬೇಕಾದ ಕ್ಷಣಗಳಲ್ಲಿ, ಅವಳೊಳಗೆ ಮೂಡಿದ ಭಾವನೆಗಳು. ವಿಚಾರಗಳು, ತರ್ಕಗಳು, ನಿರಾಶೆ, ಹತಾಶೆಗಳು, ಚಿಗಿದ ನೋವು ಸಂಕಟಗಳು – ಶಬ್ದಗಳಿಗೆ, ಹೊರಗ್ರಹಿಕೆಗಳಿಗೆ ದುಕ್ಕುವಂಥವಲ್ಲ. ಇಂಥ ಒಂದು ಸೂಕ್ಷ್ಮ, ಸಂದಿಗ್ಧ ಸ್ಥಿತಿಯನ್ನು ಯೋಚಿಸಿ, ಕಸ್ತೂರಳ ಜೀವನ ಕಥನವನ್ನು ದಾಂಪತ್ಯ ಕಥನವಾಗಿ, ಈ ಕಾದಂಬರಿಯಲ್ಲಿ ಸಮಗ್ರವಾಗಿ ವಾಸ್ತವ್ಯ ಮತ್ತು ಕಲ್ಪನೆಗಳೆರಡನ್ನೂ ಹಾಸು ಹೊಕ್ಕಾಗುವಂತೆ ಹೆಣೆದುಕೊಡಲು ಪ್ರಯತ್ನಿಸಿದ್ದೇನೆ. ಕಸ್ತೂರಬಾಳಿಗೆ ತನ್ನದೆಂಬ ವೈಯಕ್ತಿಕ ಬದುಕಿಲ್ಲ; ಅವಳ ವ್ಯಕ್ತಿತ್ವ; ಬದುಕು ರೂಪುಗೊಂಡಿರುವುದೇ ಗಾಂಧಿಯ ಸಾಹಚರ್ಯದಲ್ಲಿ;

ಸಾಂಗತ್ಯದಲ್ಲಿ! ಆದ್ದರಿಂದ 'ಬಾ'ಳ ಬಗ್ಗೆ ಬಂದ ಕೃತಿಗಳು ಜೀವನಚರಿತ್ರೆಗಳಾಗದೆ, ಬಾ ಮತ್ತು ಬಾಪುರ ನಡುವಿನ ಹಲ ಕೆಲವು ಬಿಡಿ ಬಿಡಿ ಪ್ರಸಂಗಳ ಸಂಗ್ರಹವಾಗಿ ಮಾತ್ರವೇ ಲಭ್ಯವಾಗಿದೆ. ಆದ್ದರಿಂದಲೇ ಕೌಟುಂಬಿಕ ನೆಲೆಯಲ್ಲಿ, ದಾಂಪತ್ಯದ ನೆಲೆಯಲ್ಲಿ, ಸನ್ನಿವೇಶ, ಸಂದರ್ಭಾನುಸಾರಿಯಾಗಿ ಹೊರ ವಿವರಗಳಿಂದ, ಸ್ವಗತಳಿಂದ – ಅವಳ ಅಂತರ್ – ಬಹಿರ್ ಚಿತ್ರವನ್ನು ಸಮಗ್ರವಾಗಿ ಕಟ್ಟಿಕೊಡುವ ಪ್ರಯತ್ನವೇ ಇದಾಗಿದೆ. ಸಾಂದರ್ಭಿಕವಾಗಷ್ಟೇ, ರಾಜಕೀಯ ಸನ್ನಿವೇಶಗಳನ್ನು ಬಳಸಿಕೊಂಡಿದ್ದೇನೆ. ಕಸ್ತೂರಬಾಳ ಶಕ್ತಿ ಸಾಮರ್ಥ್ಯಗಳ ಅನಾವರಣಕ್ಕೆ ಪೂರಕವಾದ ಸನ್ನಿವೇಶ ಸಂದರ್ಭಗಳನ್ನು ಸೃಷ್ಟಿಸಿಕೊಂಡಿದ್ದೇನೆ. ಗಾಂಧಿಯ ಅಂದರೆ ಮಹಾತ್ಮ ಗಾಂಧಿಯ ಅನನ್ಯ ಸಂಗಾತಿ. ಭಾರತೀಯ ಸ್ತ್ರೀ ಸಮುದಾಯದ ಪ್ರತೀಕ ಎಂಬುದಷ್ಟೇ ಗೊತ್ತು. ಹಾಗಾಗಿ ಈಗ ನನ್ನ ಸೀಮಿತ ಅಧ್ಯಯನ, ಪರಿಶ್ರಮ, ಸಂಶೋಧನೆಯಿಂದ ಅವಳ ಅಪರಿಚಿತ ವ್ಯಕ್ತಿತ್ವದ ಮಗ್ಗುಲುಗಳ ಮೇಲೆ ಸ್ವಲ್ಪ ಮಟ್ಟಿಗೆ ಬೆಳಕು ಚೆಲ್ಲುವ ಪ್ರಯತ್ನ ನಡೆಸಿದ್ದೇನೆ.

ರಸವೇ ಜೀವನ
ವಿರಸವೇ ಮರಣ
ಸಮರಸವೇ ಜೀವನ

ಎಂಬ ವರಕವಿಯ ವಾಣಿಯನ್ನು ಸಾಕ್ಷತ್ಕರಿಸಿಕೊಳ್ಳುವ ನಿಟ್ಟಿನಲ್ಲಿ ಹೆಣ್ಣಿನ ಹೃದಯಸ್ಥ ಭಾವನೆಗಳನ್ನು ಮಾನವೀಯ ಹಾಗೂ ನೈತಿಕ ಆಕಾಂಕ್ಷೆಗಳನ್ನು ಹುಡುಕುತ್ತ ಗಂಡನು ಅದನ್ನು ಗೌರವಿಸಬೇಕು ಹಾಗೂ ಪುರುಷ ಪ್ರಾಧಾನ್ಯತೆಯ ದೌರ್ಜನ್ಯ ಕುಂಠಿತಗೊಂಡು ಇಬ್ಬರಲ್ಲಿ ಸಖಿ–ಸಖಿ ಭಾವ ಅಂತಿಮವಾಗಿ ನೆಲೆಗೊಂಡು ಸುಖಿ ಕುಟುಂಬ, ಸುಖಿ ಸಮಾಜ ನಿರ್ಮಾಣವಾಗಲಿ ಎಂಬ ಉದಾತ್ತತೆಯನ್ನು ಪ್ರತಿಪಾಲಿಸುವ, ಪ್ರಸಾರಗೊಳಿಸುವ ಮಾನವೀಯ ನೆಲೆಯೇ ಈ ಅಧ್ಯಾಯಾನದ ಜೀವಾಳ ಎಂಬುದು ಎಂದು ಹೇಳಲು ಇಚ್ಛಿಸುತ್ತೇನೆ.

ಪರಮಾರ್ಶನ ಗ್ರಂಥಗಳು

೧. ಹಾಲತಿ ಸೋಮಶೇಖರ : ಮಹಿಳಾ ಚಳುವಳಿ ಮತ್ತು ಸಾಂಸ್ಕೃತಿಕ ಹಿನ್ನೆಲೆ ವಿಸ್ಮಯ ಪ್ರಕಾಶನ ೨೦೦೩

೨. ಸಾ.ರಾ. ಅಬೂಬಕರ್ : ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ ಕನ್ನಡ ವಿಶ್ವವಿದ್ಯಾಲಯ ೨೦೦೭

೩. ಹಾಲತಿ ಸೋಮಶೇಖರ – ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ವಿಸ್ಮಯ ಪ್ರಕಾಶನ ೨೦೦೭

೪. ಡಾ. ಕಮಲಾ ಹಂಪನಾ : ಬೊಗಾಸೆ (ಮಹಿಳೆ ಸುತ್ತ–ಮುತ್ತ) ಸಿ.ವಿ.ಜಿ. ಪ್ರಕಟಣೆ ೨೦೦೩

೫. ಎನ್.ಎಸ್. ಶೇಷಗಿರಿರಾವ್ : ಸ್ವಾತಂತ್ರ್ಯೋತ್ತರ ಕನ್ನಡ ಕಾದಂಬರಿಗಳು ಕನ್ನಡ ನುಡಿ ಸಂಚಿಕೆ ೦೮

೬. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಹಾಗೂ ಸಾಹಿತ್ಯದರ್ಶನ ವಿಶ್ವಕನ್ನಡ ಸಮ್ಮೇಳನ ೧೯೮೩

೭. ಶ್ರೀನಿವಾಸ ಹಾವನೂರ ಕನ್ನಡ ಮೊದಲ ಕಾದಂಬರಿಗಳ ಚಾರಿತ್ರಿಕ ಹಿನ್ನೆಲೆ ಪ್ರಜಾವಾಣಿ ೧೯ ಆಗಸ್ಟ್ ೧೯೩೩

೮. ಜಿ. ವೆಂಕಟಸುಬ್ಬಯ್ಯ, ಮುದ್ದಣನ ಮೂರು ರಾಮಾಯಣಗಳು ೨೦೦೭

೯. ಶಂಕರ ಪಾಟೀಲ ಕಾದಂಬರಿ ದರ್ಶನ ಪುರಾಣಿಕ ಸತ್ಕಾರ ಸಮಿತಿ ೧೯೭೪

೧೦. ರಂ ಶ್ರೀ ಮುಗಳಿ ಸಾಹಿತ್ಯೋಪಾಸನೆ ಶಾರದ ಮಂದಿರ ಮೈಸೂರು ೧೯೬೩

೧೧. ಜಿ. ಎಸ್ ಅಮೂರ ಕನ್ನಡ ಕಾದಂಬರಿಯ ಬೆಳವಣಿಗೆ ಬೆಂಗಳೂರು ವಿಶ್ವವಿದ್ಯಾಲಯ ೧೯೮೩

೧೨. ಡಾ. ಬಿ.ಎನ್. ಸುಮಿತ್ರಾ ಬಾಯಿ : ಸ್ತ್ರೀವಾದ

೧೩. ಗಾಯತ್ರಿ ವಿರಚನೆ

೧೪. ಡಾ. ಚೆನ್ನಕ್ಕ ಪಾವಟೆ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸ್ಥಾನಮಾನ

೧೫. ಕೆ. ಕೇಶವಮೂರ್ತಿ ಸ್ತ್ರೀವಾದಿ ಪರಿಕಲ್ಪನೆಗಳು ದೇಶೀ ಪುಸ್ತಕ ಪ್ರಕಾಶನ ೨೦೦೭

೧೬. ಡಾ. ಹಾ.ಮಾ. ನಾಗಾರ್ಜುನ : ಸ್ತ್ರೀವಾದಿ ಚಿಂತನೆಗಳು.

೧೭. ಸಂ. ಶ ಉಷಾ : ಈ ನೆಲದ ಹಾಡು

೧೮. ಈ.ಎಸ್. ಅಮೂರ : ಕನ್ನಡ ಕಥನ ಸಾಹಿತ್ಯ ಸಣ್ಣಕತೆ

೧೯. ಕನ್ನಡ ಸಾಹಿತ್ಯದ ಹಿನ್ನೆಲೆ ಪ್ರೇರಣೆ ಮತ್ತು ಪ್ರಭಾವ : ಮೈಸೂರು ವಿಶ್ವ ವಿದ್ಯಾಲಯ ೨೦೦೮

೨೦. ಎಸ್.ವಿ. ಪ್ರಭಾವತಿ : ಸ್ತ್ರೀವಾದದ ಪ್ರಸ್ತುತತೆ : ಭಾರತೀಯ ಸಂಸ್ಕೃತಿ ವಿದ್ಯಾಪೀಠ ೨೦೦೦

೨೧. ಡಿ.ವಿ.ಎಸ್. ಗುಪ್ತ : ಇಗೋ ನಮ್ಮವರು : ಸರಸ್ವತಿ ಪ್ರಕಾಶನ ೨೦೦೦

೨೨. ಡಾ. ನಟರಾಜ್ ತಲಘಟ್ಟಪುರ : ಗುರುತಿನ ದೀವಿಟಿಗೆ : ವರ್ಷನಿಧಿ ಪ್ರಕಾಶನ ೨೦೧೭

೨೩. ಡಾ. ವಿಜಯ ಸುಬ್ಬರಾಜ್ : ಬೆಸುಗೆಯ ಬಂಧನದಲ್ಲಿ : ದೇಸಿ ಪ್ರಕಾಶನ ೨೦೧೬.